ಸಂಪುಟ: 05 ಸಂಚಿಕೆ: 60 ಪುಟಗಳು: 08 ಬುಧವಾರ 14 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಯಾವಾಗಲೂ ಒಳ್ಳೆಯದನ್ನೇ ಮಾಡಿ. ನಿರಂತರವಾಗಿ ಸದ್ವಿಚಾರವನ್ನೇ ಆಲೋಚಿಸಿ. ದುಷ್ಟ ಸಂಸ್ಕಾರಗಳನ್ನು ನಿಗ್ರಹಿಸುವುದಕ್ಕೆ ಇದೊಂದೇ ಮಾರ್ಗ

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕ್ರಿಮಿನಲ್ ಕೇಸ್ ರದ್ದು ಕೋರಿ ಹೈಕೋರ್ಟ್ ಮೊರೆ ಹೋದ ಸೋನು ನಿಗಮ್

• ಉದಯವಾಹಿನಿ, ಬೆಂಗಳೂರು

ಕನ್ನಡ, ಕನ್ನಡ ಎಂದಿದ್ದಕ್ಕೆ ಪಹಲ್ಗಾಮ್ ದಾಳಿ ನಡೆಯಿತು ಎಂದು ಕನ್ನಡಿಗರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಮೇಲೆ ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಗಾಯಕ ಸೋನು ನಿಗಮ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಮೂರ್ತಿ ಶಿವಶಂಕರ್ ಅಮರಣ್ಣವರ್ ಅವರ ರಜಾ ಪೀಠದ ಮುಂದೆ ಅರ್ಜಿ ಸಲ್ಲಿಸಲಾಗಿದ್ದು, ವಿಚಾರಣೆ ಮುಂದೂಡಲಾಗಿದೆ. ಏಪ್ರಿಲ್ 25 ರಂದು ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ನೇರ ಸಂಗೀತ ಕಾರ್ಯಕ್ರಮದಲ್ಲಿ ಕನ್ನಡಿಗರ ಭಾವನೆಗಳನ್ನು ಕೆರಳಿಸುವ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಕನ್ನಡಿಗರ ಭಾವನೆಗಳಿಗೆ ನೋವುಂಟು ಮಾಡಿದ ಮತ್ತು ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಖ್ಯಾತ ಗಾಯಕ ಸೋನು ನಿಗಮ್ ವಿರುದ್ಧ ಬೆಂಗಳೂರಿನ ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಕರ್ನಾಟಕ ರಕ್ಷಣಾ ವೇದಿಕೆ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ ಅವರು ಸೋನು ನಿಗಮ ವಿರುದ್ಧ ವಿಡಿಯೋ ಸಮೇತ ಪೊಲೀಸರಿಗೆ ದೂರು ನೀಡಿದ್ದರು.

## ಸುಹಾಸ್‌ನನ್ನು ಮಹಾತ್ಮ ಎಂದು ಆತನನ್ನು ರೌಡಿ ಪಟ್ಟಿಗೆ ಸೇರಿಸದ್ದೇಕೆ

• ಉದಯವಾಹಿನಿ, ಬೆಂಗಳೂರು

ಸುಹಾಸ್ ಶೆಟ್ಟಿ ವಿರುದ್ಧ ರೌಡಿ ಶೀಟರ್ ಓಪನ್ ಆಗಿದ್ದು 2020 ರಲ್ಲಿ. ಆಗ ಅಧಿಕಾರದಲ್ಲಿದ್ದದ್ದು ಬಿಜೆಪಿ ಸರ್ಕಾರ. ಗೃಹ ಸಚಿವರಾಗಿದ್ದ ಪುಣ್ಯಾತ್ಮ ಬಸವರಾಜ ಬೊಮ್ಮಾಯಿ ಇಂದು ಸುಹಾಸ್‌ನನ್ನು ಮಹಾತ್ಮ ಎಂದು ಬಿಂಬಿಸುತ್ತಿರುವ ಬಿಜೆಪಿಯವರು ಆಗ ಯಾಕೆ ಸುಹಾಸ್‌ನನ್ನು ರೌಡಿ ಪಟ್ಟಿಗೆ ಸೇರಿಸಿದ್ದರು. ಎಂದು ಸಚಿವ ದಿನೇಶ್ ಗುಂಡೂರಾವ್ ಅವರು ಪ್ರಶ್ನಿಸಿದ್ದಾರೆ. ಈ ಸಂಬಂಧ ತಮ್ಮ ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ ದಾಖಲೆ ಬಿಡುಗಡೆ ಮಾಡಿ, ಹೇಳಿಕೆ ನೀಡಿರುವ ಅವರು, ಸುಹಾಸ್ ಶೆಟ್ಟಿ ಮೇಲೆ ರೌಡಿಶೀಟರ್ ಓಪನ್ ಮಾಡಿದ್ದೇ ಬಿಜೆಪಿ ಅವಧಿಯಲ್ಲಿ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದ್ದಾರೆ. ಅಮಾಯಕರ ತಲೆಯಲ್ಲಿ ಮತಾಂಧತೆಯ ಅಮಲು ತುಂಬಿ ಕಂಡವರ ಮಕ್ಕಳನ್ನು ಬಾವಿಗೆ ತಳ್ಳುತ್ತಿರುವ ನಾಯಕರ ಗಮನಕ್ಕೆ. ಇದು ಇತ್ತೀಚೆಗೆ ಹತ್ಯೆಯಾದ ಸುಹಾಶ್ ಶೆಟ್ಟಿ ವಿರುದ್ಧ ರೌಡಿ ಶೀಟರ್ ತೆರೆಯಲು ಪೊಲೀಸ್ ಇಲಾಖೆ ನೀಡಿದ್ದ ಆದೇಶದ ಪ್ರತಿ. ಸುಹಾಸ್ ಶೆಟ್ಟಿ ವಿರುದ್ಧ ರೌಡಿ ಶೀಟರ್ ಓಪನ್ ಆಗಿದ್ದು 2020 ರಲ್ಲಿ. ಆಗ ಅಧಿಕಾರದಲ್ಲಿದ್ದದ್ದು ಬಿಜೆಪಿ ಸರ್ಕಾರ. ಗೃಹ ಸಚಿವರಾಗಿದ್ದ ಪುಣ್ಯಾತ್ಮ ಬಸವರಾಜ ಬೊಮ್ಮಾಯಿ ಇಂದು ಸುಹಾಸ್‌ನನ್ನು ಮಹಾತ್ಮ ಎಂದು ಬಿಂಬಿಸುತ್ತಿರುವ ಬಿಜೆಪಿಯವರು ಆಗ ಯಾಕೆ ಸುಹಾಸ್‌ನನ್ನು ರೌಡಿ ಪಟ್ಟಿಗೆ ಸೇರಿಸಿದ್ದರು.

## ಸ್ವಚ್ಛತಾ ಅಭಿಯಾನದ ಮೂಲಕ ಸಾರ್ವಜನಿಕ ವಲಯದಲ್ಲಿ ಕಸ ವಿಲೇವಾರಿ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಕೆಲವೇ ದಿನಗಳಲ್ಲಿ ಗ್ರೇಟರ್ ಬೆಂಗಳೂರು ಅಸ್ತಿತ್ವಕ್ಕೆ ಬರಲಿದೆ. ನಂತರ ಸ್ವಚ್ಛತಾ ಅಭಿಯಾನದ ಮೂಲಕ ನಗರದಲ್ಲಿ ಕಸ ವಿಲೇವಾರಿ ಮಾಡಿ ಸ್ವಚ್ಛ ಬೆಂಗಳೂರು ನಿರ್ಮಿಸಲಾಗುವುದು. ಆ ಮೂಲಕ ಬೆಂಗಳೂರಿಗೆ ಹೊಸ ರೂಪ ನೀಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಪುಲಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 4 ಎಂಎಲ್ ಡಿ ಸಾಮರ್ಥ್ಯದ ಜಲಾಗಾರ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಂಕುಸ್ಥಾಪನೆ ಮಾಡಿರುವ ಯೋಜನೆ ಸುಮಾರು 30 ಸಾವಿರ ಮನೆಗಳು, 2.50 ಲಕ್ಷ ಜನರಿಗೆ ನೀರು ಪೂರೈಸಲಿದೆ. ಈ ಕ್ಷೇತ್ರದಲ್ಲಿ ರಸ್ತೆಗೆ 130 ಕೋಟಿ, ಮೇಲ್ಸೇತುವೆಗೆ 43 ಕೋಟಿ, 320 ಕೋಟಿ ಇತರೆ ವಾರ್ಡ್ ಅಭಿವೃದ್ಧಿಗೆ, 650 ಕೋಟಿ ವೆಚ್ಚದಲ್ಲಿ ಹೊಸ ಫ್ಲೈಓವರ್, ನಿಮ್ಮ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ನಿಮ್ಮ ಮನೆಬಾಗಿಲಿಗೆ ಉಚಿತವಾಗಿ ರವಾನಿಸಲಾಗುವುದು. ಇದನ್ನು ಸದ್ಯದಲ್ಲೇ ದೊಡ್ಡ ಆಂದೋಲನದ ರೀತಿಯಲ್ಲಿ ಮಾಡಲಾಗುವುದು. 50X80 ವಿಸ್ತೀರ್ಣದಲ್ಲಿ ಮನೆ ನಿರ್ಮಿಸಲು ಪ್ಲಾನ್ ಅನುಮತಿ ಪಡೆಯಲು ಕಚೇರಿಗೆ ಅಲೆಯುವುದನ್ನು ತಪ್ಪಿಸಲು ನಂಬಿಕೆ ನಕ್ಷೆ ಯೋಜನೆ ಜಾರಿ ಮಾಡಲಾಗುವುದು ಎಂದು ಹೇಳಿದರು.

## ಕದನ ವಿರಾಮ ಬಗ್ಗೆ ಪ್ರಧಾನಿ ಮೋದಿ ಸತ್ಯ ಹೇಳಲಿ: ಪ್ರಿಯಾಂಕ್ ಖರ್ಗೆ

• ಉದಯವಾಹಿನಿ, ಕಲಬುರಗಿ


ಭಾರತ–ಪಾಕಿಸ್ತಾನದ ನಡುವಿನ ಕದನ ವಿರಾಮದ ಕುರಿತು ದೇಶದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಸತ್ಯ ಹೇಳಬೇಕು ಎಂದು ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಾಕೀತು ಮಾಡಿದರು. ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕದನ ವಿರಾಮ ಘೋಷಣೆ ಅಮೆರಿಕ ಮಾಡಿಸಿದೆಯೋ ಅಥವಾ ಖುದ್ದು ಮೋದಿಯವರೇ ಮಾಡಿದ್ದಾರೋ ಎಂಬುದನ್ನು ದೇಶದ ಜನರಿಗೆ ಸ್ಪಷ್ಟಪಡಿಸಬೇಕು ಎಂದರು. ದೇಶದ ಜನರ ಮುಂದೆ ಈ ಸತ್ಯ ಮೋದಿ ಹೇಳಬೇಕು. ಅವರು ಕೇವಲ ಸೋಷಿಯಲ್ ಮೀಡಿಯಾ ಬಳಸಿಕೊಂಡು ಯುದ್ಧ ಮಾಡುತ್ತಿದ್ದಾರೆ. ಆದರೂ ಈ ಕಾರ್ಯಾಚರಣೆಯಲ್ಲಿ ಮೋದಿಯವರಿಗೆ ಕಾಂಗ್ರೆಸ್ ತನ್ನ ಸಂಪೂರ್ಣ ಬೆಂಬಲ ನೀಡಿದೆ.

# ಮುಖೇಶ್ ಅಂಬಾನಿಯವರಿಂದ ಕಲಿಯಬೇಕಾದ ಯಶಸ್ಸಿನ ಪಾಠಗಳಿವು

• ಉದಯವಾಹಿನಿ, ಬೆಂಗಳೂರು

**ಗುರಿಯತ್ತ ಯಾವಾಗಲೂ ಗಮನವಿರಲಿ:** ಜೀವನದಲ್ಲಿ ಅನೇಕ ಸಮಸ್ಯೆಗಳು, ಸಂಕಷ್ಟಗಳು ಬರುತ್ತವೆ. ಇದರಿಂದಾಗಿ ಜನರು ತಮ್ಮ ಗುರಿಯನ್ನು ಮರೆತುಬಿಡುತ್ತಾರೆ ಅಥವಾ ಕಷ್ಟಗಳನ್ನು ಎದುರಿಸಲಾಗದೆ ಗುರಿಯಿಂದ ದೂರ ಸರಿಯಲು ಪ್ರಾರಂಭಿಸುತ್ತಾರೆ. ಹೀಗೆ ಮಾಡುವುದರಿಂದ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ನಿಮ್ಮ ಗಮನ ಯಾವಾಗಲೂ ಗುರಿಯತ್ತ ಇದ್ದಾಗ ಮಾತ್ರ ನೀವು ಯಶಸ್ಸು ಸಾಧಿಸಲು ಸಾಧ್ಯ. ಮುಖೇಶ್ ಅಂಬಾನಿಯವರ ಯಶಸ್ಸಿನ ಹಿಂದಿನ ದೊಡ್ಡ ರಹಸ್ಯವೆಂದರೆ ಅವರು ಆರಂಭದಲ್ಲಿಯೇ ತಾವು ಏನು ಮಾಡಬೇಕೆಂದು ನಿರ್ಧರಿಸಿದ್ದರು ಮತ್ತು ಅವರು ತಮ್ಮ ಗುರಿಯತ್ತ ಸಾಗಲು ಸಾಕಷ್ಟು ಪರಿಶ್ರಮ ಪಟ್ಟಿದ್ದಾರೆ. ಇವರಂತೆ ನೀವು ಕೂಡ ಶ್ರೀಮಂತರಾಗಲು ಮತ್ತು ಯಶಸ್ವಿಯಾಗಲು ಬಯಸಿದರೆ, ಮೊದಲು ನಿಮ್ಮ ಗುರಿಯನ್ನು ಹೊಂದಿಸಿಕೊಳ್ಳಿ ಮತ್ತು ಅದರ ಮೇಲೆ ನಿರಂತರವಾಗಿ ಕೆಲಸ ಮಾಡುತ್ತಿರಿ.

**ಸಕಾರಾತ್ಮಕ ಚಿಂತನೆಯನ್ನು ರೂಢಿಸಿಕೊಳ್ಳಿ:** ಯಾವುದೇ ಕೆಲಸದ ಬಗ್ಗೆ ನಿಮ್ಮ ಆಲೋಚನೆ ಸಕಾರಾತ್ಮಕವಾಗಿದ್ದಾಗ ಮಾತ್ರ ನೀವು ಆ ಕೆಲಸದಲ್ಲಿ ಯಶಸ್ಸನ್ನು ಪಡೆಯುತ್ತೀರಿ. ನನ್ನಿಂದ ಈ ಕೆಲಸ ಸಾಧ್ಯವೆ, ಇದು ನನ್ನಿಂದ ಸಾಧ್ಯವೇ ಅಂತೆಲ್ಲಾ ನೀವು ನಕಾರಾತ್ಮಕವಾಗಿ ಯೋಚನೆ ಮಾಡಿದರೆ ನೀವು ಎಂದಿಗೂ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ,



ನಕಾರಾತ್ಮಕ ವಿಷಯಗಳಿಗೆ ಗಮನ ಕೊಡುವ ಬದಲು, ಅವುಗಳಿಂದ ದೂರವಿರಿ. ಮತ್ತು ನಾನು ಸಕಾರಾತ್ಮಕ ಆಲೋಚನೆಯನ್ನು ಬೆಳೆಸಿಕೊಳ್ಳುವ ಮೂಲಕ ಜೀವನದಲ್ಲಿ ಯಶಸ್ಸನ್ನು ಸಾಧಿಸುವತ್ತ ಹೆಜ್ಜೆಯಿಡಿ.

**ಹೊಸ ವಿಷಯಗಳನ್ನು ಕಲಿಯುತ್ತಿರಿ:** ನಿಮ್ಮ ಸುತ್ತಮುತ್ತಲಿನವರಿಂದ ಮತ್ತು ಅನುಭವಿ ವ್ಯಕ್ತಿಗಳಿಂದ ಯಾವಾಗಲೂ ಹೊಸ ವಿಷಯಗಳನ್ನು ಕಲಿಯುತ್ತಿರಿ. ಆಗ ಮಾತ್ರ ನೀವು ನಿಮ್ಮನ್ನು ಯಾವಾಗಲೂ ಪ್ರಗತಿಯ ಹಾದಿಯಲ್ಲಿ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ. ನಾನು ಏಕೆ ಇತರರಿಂದ ಕಲಿಯಬೇಕು ಎಂಬ ಅಹಂಕಾರದ ಭಾವನೆಯನ್ನು ಹೊಂದಿರಬಾರದು. **ಎಂದಿಗೂ ಅಹಂಕಾರ ಪಡದಿರಿ:** ನಿಮ್ಮ ಅಧಿಕಾರ ಮತ್ತು ಹಣ ಹೆಚ್ಚಾದಂತೆ, ನಿಮ್ಮ ಅಹಂಕಾರವೂ ಹೆಚ್ಚಾದರೆ, ನಿಮ್ಮ ವ್ಯಕ್ತಿತ್ವಕ್ಕೆ ಅದೊಂದು ಕಪ್ಪು ಚುಕ್ಕೆ ಯಂತೆ. ಆದ್ದರಿಂದ ಅಹಂಕಾರ ಪಡದೆ ಮುಕೇಶ್ ಅಂಬಾನಿಯವರಂತೆ ಎಲ್ಲರೊಂದಿಗೆ ಉದಾರ ಮನೋ ಭಾವದಿಂದ ವರ್ತಿಸಿ. ಈ ಗುಣ ಖಂಡಿತವಾಗಿಯೂ ನಿಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯುವುದು ನಿಜ.

**ವೈಫಲ್ಯಗಳಿಗೆ ಹೆದರಬೇಡಿ:** ಯಶಸ್ಸು ಎನ್ನುವುದು ರಾತ್ರೋರಾತ್ರಿ ಸಿಗುವುದಿಲ್ಲ ಅಥವಾ ಒಂದೇ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಿಲ್ಲ. ಈ ಸಾಧನೆಯ ಹಾದಿಯಲ್ಲಿ ಸಾಕಷ್ಟು ಅಡೆತಡೆ, ವೈಫಲ್ಯಗಳು ಎದುರಾಗುತ್ತವೆ. ಈ ವೈಫಲ್ಯಗಳಿಗೆ ಹೆದರದೆ ಮುನ್ನುಗ್ಗಿದರೆ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ.



ಸೈನಿಕರನ್ನು ಭೇಟಿಯಾದ ಮೋದಿ

# ಯೋಧರ ಭುಜತಟ್ಟಿ ಎಂದಿಗೂ ಭಾರತ ಜಟ್ಟಿ

- ಬಣ್ಣದ ಮಾತಿನ ದೊಡ್ಡಣ್ಣ
- ಭಾರತೀಯ ವೀರ ಯೋಧರ ಶಕ್ತಿಗೆ ಮಿಗಿಲಾದುದಿಲ್ಲ..!
- 'ಆಪರೇಷನ್ ಸಿಂಧೂರ' ವೀರರನ್ನು ಭೇಟಿಯಾದ ಪಿಎಂ ಮೋದಿ
- S400 ಕ್ಷಿಪಣಿ ವ್ಯವಸ್ಥೆ ಮುಂದೆ ನಿಂತು ಪ್ರಧಾನಿ ಭಾಷಣ ನೀವು ನಮ್ಮ ಭಾರತದ ಹೆಮ್ಮೆಯ ಸಂಕೇತ

**ಅಮೆರಿಕ ಡಬಲ್ ಗೇಮ್**

ಇಬ್ಬರ ಜಗಳ ಮೂರನೇಯವನಿಗೆ ಲಾಭ. ಭಾರತ–ಪಾಕಿಸ್ತಾನದ ನಡುವೆ ಅಮೆರಿಕ ಡಬಲ್ ಗೇಮ್ ಆಡಿದೆ. ಈ ಬಗ್ಗೆ ಅನುಮಾನವೇ ಬೇಡ. ಭಾರತ–ಪಾಕ್ ಯುದ್ಧದಲ್ಲಿ ಟ್ರಂಪ್ ಆಡಿರೋ ಚದುರಂಗ ಚೆನ್ನಾಗಿ ಗೊತ್ತಾಗ್ತಿದೆ. ನಂಬಿದವರೇ ಕತ್ತು ಸೀಳ್ತಾರೆ ಅಂತ ಮತ್ತೆ ಪ್ರೂವ್ ಆಗಿದೆ. ಅಮೆರಿಕಾ ಮಲಗಿರಬೇಕಾದ್ರೆ ಹೊಡೆದು ಎದ್ದ ಮೇಲೆ ಸಮಾಧಾನ ಮಾಡೋ ಕೆಲಸ ಮಾಡಿದೆ. ವಿಶ್ವದ ದೊಡ್ಡಣ್ಣ ಅಮೆರಿಕಾಗೆ ಸೂಟ್ ಆಗಿತ್ತು. ದೊಡ್ಡಣ್ಣ ಅಂದ್ರೆ ನ್ಯಾಯದ ಪರ ನಿಲ್ಲುವವನು ಅಂತ. ಆದ್ರೆ ವಿಶ್ವದ ದೊಡ್ಡಣ್ಣ ಅಂತ ಕರೆಸಿಕೊಳ್ಳೋ ಅಮೆರಿಕ ಕಳ್ಳ ಆಗಿ ಬದಲಾಗಿದೆ. ಮಾಡಿರೋ ಕಳ್ಳತನಕ್ಕೂ ಕ್ರೆಡಿಟ್ ಪಡೆಯೋದಕ್ಕೆ ಟ್ರಂಪ್ ಮುಂದಾಗಿದ್ದಾರೆ. ಆಪರೇಷನ್ ಸಿಂಧೂರದ ಬಳಿಕ ಭಾರತ–ಪಾಕ್ ನಡುವೆ ಮಧ್ಯಸ್ಥಿಕೆ ವಹಿಸ್ತೀನಿ ಅಂತ ಬಂದಿರೋ ದೊಡ್ಡಣ್ಣ ಅಮೆರಿಕದ ಡಬಲ್‌ಗೇಮ್ ಬಯಲಾಗಿದೆ. ಭಾರತ–ಪಾಕ್ ನಡುವಿನ ಯುದ್ಧ ನಿಲ್ಲಿಸಿದ್ದೀವಿ ಅಂತ ಕ್ರೆಡಿಟ್ ಪಡೆಯು ಹಪಾಹಪಿಸ್ತಿರೋ ಡೊನಾಲ್ಡ್ ಟ್ರಂಪ್, ಕದನ ವಿರಾಮ ಮಾಡದಿದ್ರೆ ವ್ಯಾಪಾರ ನಿಲ್ಲಿಸುತ್ತೇನೆ ಅಂತ ಬ್ಲ್ಯಾಕ್ ಮೇಲೆ ಮಾಡಿದ್ದಾರೆ.



**ಪಾಕ್ ಮತ್ತೆ ದಾಳಿ ಮಾಡಿದ್ರೆ ಭಾರತ ನುಗ್ಗಿ ಹೊಡೆಯುತ್ತೆ**

ಭಯೋತ್ಪಾದನೆ ವಿರುದ್ಧ ಭಾರತದ ಲಕ್ಷ್ಮಣ ರೇಖೆ ಸ್ಪಷ್ಟ, ಪಾಕಿಸ್ತಾನದಿಂದ ಮತ್ತೆ ದಾಳಿ ನಡೆದರೆ ಭಾರತ ನುಗ್ಗಿ ಹೊಡೆಯುತ್ತದೆ ಎಂದು ಪ್ರಧಾನಿ ಮೋದಿ ಮತ್ತೆ ನೇರಾನೇರ ಎಚ್ಚರಿಕೆ ನೀಡಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾದ ಬಳಿಕ ಇಂದು ಮೋದಿ ಪಂಜಾಬ್‌ನ ಅದಮ್‌ಪುರ ವಾಯುನೆಲೆಗೆ ಭೇಟಿ ನೀಡಿ ಸೈನಿಕರೊಂದಿಗೆ ಸಂವಾದ ನಡೆಸಿದರು. ಭಯೋತ್ಪಾದನೆಯ ವಿರುದ್ಧ ಭಾರತದ ಲಕ್ಷ್ಮಣ ರೇಖೆ ಈಗ ಸ್ಪಷ್ಟವಾಗಿದೆ. ಒಂದು ವೇಳೆ ಪಾಕಿಸ್ತಾನ ಮತ್ತೊಂದು ದಾಳಿ ನಡೆಸಿದರೆ, ಭಾರತವು ತಕ್ಕ ಉತ್ತರ ನೀಡುತ್ತದೆ. 'ಆಪರೇಷನ್ ಸಿಂಧೂರದಿಂದ ನೀವೆಲ್ಲ ಇತಿಹಾಸವನ್ನು ಸೃಷ್ಟಿಸಿದ್ದೀರಿ. ಪ್ರತಿಯೊಬ್ಬ ಭಾರತೀಯನೂ ನಿಮ್ಮ ಈ ಯಶಸ್ಸಿನಿಂದಾಗಿ ಹೆಮ್ಮೆಪಡುತ್ತಾರೆ. ನೀವು ಯಾವುದೇ ಗುರಿಯನ್ನು ತಲುಪಿದಾಗಲೂ ಕೇಳಿಬರುವುದು ಒಂದೇ ಅದು 'ಭಾರತ್ ಮಾತಾ ಕಿ ಜೈ', ಇದು ಕೇವಲ ಘೋಷ ವಾಕ್ಯವಲ್ಲ. ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡುವ ಸೈನಿಕರ ಧ್ವನಿ, ಭಾರತದ ನೆಲದ ಮೇಲೆ, ಕಾರ್ಯಾಚರಣೆಯ ವೇಳೆ ಇದು ಯಾವಾಗಲೂ ಪ್ರತಿಧ್ವನಿಸುತ್ತಿರುತ್ತದೆ.

• ಉದಯವಾಹಿನಿ, ನವದೆಹಲಿ

ಪಹಲ್ಗಾಮ್ ದಾಳಿಯ ಬಳಿಕ ಭಾರತೀಯ ಸೇನೆಯು ಭಯೋತ್ಪಾದಕರ ವಿರುದ್ಧ ನಡೆಸುತ್ತಿರುವ ಕಾರ್ಯಾಚರಣೆಯು ಮುಂದುವರಿದಿದೆ. ದಕ್ಷಿಣ ಕಾಶ್ಮೀರದ ಶೋಪಿಯಾನದ ಕೆಲ್ಲರ್ ಅರಣ್ಯದಲ್ಲಿ ತೀವ್ರ ಕಾರ್ಯಾಚರಣೆ ನಡೆಸಿ ಮೂವರು ಭಯೋತ್ಪಾದಕರನ್ನು ಹೊಡೆದು ಹಾಕಿದೆ. ಇವತ್ತಿನ ಕಾರ್ಯಾಚರಣೆಯನ್ನು ಸೇನೆಯು Operation Keller' ಎಂದು ಕರೆದಿದೆ. ಕೆಲ್ಲರ್ ಅರಣ್ಯ ಪ್ರದೇಶದಲ್ಲಿ ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳೊಂದಿಗೆ ಉಗ್ರರು ಅಡಗಿರುವ ಬಗ್ಗೆ ಗುಪ್ತಚರ ಇಲಾಖೆಗೆ ಖಚಿತ ಮಾಹಿತಿ ನೀಡಿತ್ತು. ಈ ಮಾಹಿತಿಯ ಆಧಾರದ ಮೇಲೆ ಭಾರತೀಯ ಸೇನೆ ಕೂಂಬಿಂಗ್ ನಡೆಸಿತು. ಕೆಲ್ಲರ್ ಅರಣ್ಯ ಪ್ರದೇಶದದಲ್ಲಿ ನಡೆದ ಕಾರ್ಯಾಚರಣೆಯನ್ನು ಆಪರೇಷನ್ ಕೆಲ್ಲರ್ ಎಂದು ಕರೆಯಲಾಗಿದೆ. ಉಗ್ರರ ವಿರುದ್ಧ ನಡೆದ ದಾಳಿಯಲ್ಲಿ ಮೂವರನ್ನು ಹೊಡೆದು ಹಾಕಲಾಗಿದೆ ಎಂದು ಸೇನೆ ಹೇಳಿಕೊಂಡಿದೆ. ಲಷ್ಕರ್–ಇ–ತೊಯ್ಬಾ ಸಂಘಟನೆಗೆ ಸೇರಿದ ಉಗ್ರರನ್ನು ಸೇನೆ ಹೊಡೆದು ಹಾಕಿದೆ. ಈ ಕಾರ್ಯಾಚರಣೆಯಲ್ಲಿ ಸೆಕ್ಯೂರಿಟಿ ಫೋರ್ಸ್, ಆರ್ಮಿ ಮತ್ತು ಸ್ಥಳೀಯ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದರು. ಉಗ್ರರ ಕ್ಯಾಂಪ್‌ಗಳನ್ನು ಧ್ವಂಸ ಮಾಡಲಾಗಿದೆ. ಜೊತೆಗೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸೀಜ್ ಮಾಡಲಾಗಿದೆ. ಹತರಾದವರು ಪಾಕಿಸ್ತಾನಿ ಮೂಲದ ಉಗ್ರರ ಎಂದು ವರದಿಯಾಗಿದೆ.

ಪಾಕಿಸ್ತಾನ ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಲ್ಲಿಸುವವರೆಗೆ ಸಿಂಧೂ ಜಲ ಒಪ್ಪಂದವನ್ನು ತಡೆಹಿಡಿಯಲಾಗುವುದು ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ. ಭಾರತೀಯ ಸಶಸ್ತ್ರ ಪಡೆಗಳು ಮತ್ತು ಭಾರತೀಯ ವಾಯುಪಡೆ (ಐಎಎಫ್) ಪಾಕಿಸ್ತಾನಿ ವಾಯುನೆಲೆಗಳನ್ನು ಅತ್ಯಂತ ಪರಿಣಾಮಕಾರಿ ಕ್ರಮದಿಂದ ನಿಷ್ಕ್ರಿಯಗೊಳಿಸಿವೆ. ಭಾರತೀಯ ಸಶಸ್ತ್ರ ಪಡೆಗಳ ಬಲದ ಹಿನ್ನೆಲೆ ಪಾಕಿಸ್ತಾನವು ಕದನ ವಿರಾಮಕ್ಕೆ ಮುಂದಾಗಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಪಾಕಿಸ್ತಾನದ ಕಡೆಯಿಂದ ನೀಡಲಾದ ಹೇಳಿಕೆಯನ್ನು ನಾವು ನೋಡಿದ್ದೇವೆ. ಕೈಗಾರಿಕಾ ಮಟ್ಟದಲ್ಲಿ ಭಯೋತ್ಪಾದನೆಯನ್ನು ಪೋಷಿಸಿದ ರಾಷ್ಟ್ರವು ಅದರ ಪರಿಣಾಮಗಳಿಂದ ತಪ್ಪಿಸಿಕೊಳ್ಳಬಹುದು ಎಂದು ಭಾವಿಸುವ ಮೂಲಕ ಪಾಕಿಸ್ತಾನ ತನ್ನನ್ನು ತಾನು ಮೂರ್ಖನನ್ನಾಗಿ ಮಾಡಿಕೊಳ್ಳುತ್ತಿದೆ. ಭಾರತ ನಾಶಪಡಿಸಿದ ಭಯೋತ್ಪಾದಕ ಮೂಲಸೌಕರ್ಯ ತಾಣಗಳು ಭಾರತೀಯರ ಸಾವಿಗೆ ಮಾತ್ರವಲ್ಲದೆ ಪ್ರಪಂಚದಾದ್ಯಂತದ ಇತರ ಅನೇಕ ಅಮಾಯಕರ ಸಾವಿಗೆ ಕಾರಣವಾಗಿವೆ.

1 ಸೇನೆಯಿಂದ ಇಂದು ಮತ್ತೊಂದು ಕಾರ್ಯಾಚರಣೆ
2 ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಕ್ಕೆ ಪಡೆದ ಸೇನೆ
3 ಮೂವರು ಉಗ್ರರ ಹೊಡೆದುರುಳಿಸಿದ್ದೇವೆ ಎಂದ ಸೇನೆ

**ಅದಂಪುರ ಏರ್ ಬೇಸ್‌ಗೆ ಪ್ರಧಾನಿ ಮೋದಿ ಭೇಟಿ:** ರಕ್ತ, ನೀರು ಒಟ್ಟಿಗೆ ಹರಿಯಲ್ಲ. ಟೆರರ್, ಟಾಕ್ ಒಟ್ಟಿಗೆ ನಡೆಯಲ್ಲ. ಕದನ ವಿರಾಮದ ಬಳಿಕ ಭಾರತದ ಪ್ರಧಾನಿ ಪಾಕಿಸ್ತಾನಕ್ಕೆ ಕೊಟ್ಟಿದ್ದ ಖಡಕ್ ಎಚ್ಚರಿಕೆ ಇದು. ದೇಶವನ್ನುದ್ದೇಶಿ ಮಾತನಾಡಿದ ಪ್ರಧಾನಿ ಮೋದಿ ಮರುದಿನ ಬೆಳಗ್ಗೆ ಅದಂಪುರ ಏರ್ ಬೇಸ್‌ಗೆ ಭೇಟಿ ನೀಡಿದ್ದಾರೆ. ಯೋಧರ ಜೊತೆ ಚರ್ಚೆ ನಡೆಸಿ ಸುಂದರ ಅನುಭವವನ್ನ ಹಂಚಿಕೊಂಡಿದ್ದಾರೆ. ಅದಂಪುರ ಏರ್ ಬೇಸ್. ಪಂಜಾಬ್‌ನ ಜಲಂಧರ್‌ನಿಂದ 28 ಕಿ.ಮೀ ದೂರದಲ್ಲಿದೆ. ಭಾರತದ 2ನೇ ಅತಿ ದೊಡ್ಡ ಏರ್ ಬೇಸ್ ಈ ಅದಂಪುರ ಏರ್ ಬೇಸ್. ಪಾಕಿಸ್ತಾನದ ಮೇಲಿನ ಆಪರೇಷನ್ ಸಿಂಧೂರ ಏರ್ ಸ್ಟ್ರೈಕ್ ವೇಳೆ ನಿರ್ಣಾಯಕ ಪಾತ್ರ ವಹಿಸಿದ್ದೇ ಈ ಅದಂಪುರ ಏರ್ ಬೇಸ್. ಭಾರತ ಇದೇ ಏರ್ ಬೇಸ್‌ನಿಂದ ಪಾಕ್ ವಿರುದ್ಧ ಕ್ಷಿಪಣೆಗಳನ್ನು ಉಡಾಯಿಸಿದೆ. ಭಾರತದ ಕ್ಷಿಪಣೆಗಳ ದಾಳಿಗೆ ಪಾಕಿಸ್ತಾನದ ಏರ್ ಬೇಸ್‌ಗಳೇ ಛಿದ್ರ, ಛಿದ್ರ ಆಗಿದೆ. ಅಲ್ಲದೇ ಪಾಕಿಸ್ತಾನ ಸೇನೆ ಕೂಡ ಈ ಅದಂಪುರ ಏರ್ ಬೇಸ್ ಅನ್ನು ಟಾರ್ಗೆಟ್ ಮಾಡಿತ್ತು. ಆದರೆ ಭಾರತದ ಏರ್ ಬೈಸ್ ಸಿಸ್ಟಮ್ ಪಾಕಿಸ್ತಾನದ ಮಿಸೈಲ್‌ಗಳು ಅದಂಪುರ ಏರ್ ಬೇಸ್ ತಲುಪದಂತೆ ಹೊಡೆದುರುಳಿಸಿದೆ. ಪಾಕಿಸ್ತಾನ ಸೇನೆ ನಾವು ಅದಂಪುರ ಏರ್ ಬೇಸ್ ಮೇಲೆ ದಾಳಿ ಮಾಡಿದ್ದೇವೆ ಅನ್ನೋ ಹಸಿ ಸುಳ್ಳು ಹೇಳಿತ್ತು. ಅದಂಪುರ ಏರ್ ಬೇಸ್ ಮೇಲಿನ ಪಾಕ್ ಮಿಸೈಲ್ ದಾಳಿ ವಿಫಲವಾಗಿದ್ದು, ಅದಂಪುರ ಏರ್ ಬೇಸ್ ಈಗ ಸಂಪೂರ್ಣವಾಗಿ ಸುಸ್ಥಿತಿಯಲ್ಲಿದೆ. ಆಪರೇಷನ್ ಸಿಂಧೂರದ ಯಶಸ್ಸು, ಕದನ ವಿರಾಮದ ಬೆನ್ನಲ್ಲೇ ಪ್ರಧಾನಿ ಮೋದಿ ಅವರು ಸೈನಿಕರನ್ನು ಭೇಟಿಯಾಗಲು ಅದಂಪುರ ಏರ್ ಬೇಸ್ ಆಯ್ಕೆ ಮಾಡಿಕೊಂಡಿದ್ದಾರೆ. ಆಪರೇಷನ್ ಸಿಂಧೂರ ಕಾರ್ಯಾಚರಣೆಯ ವೇಳೆ ಹಾಜರಿದ್ದ ಏರ್ ಫೋರ್ಸ್ ಅಧಿಕಾರಿಗಳು ಪ್ರಧಾನಿ ಮೋದಿ ಅವರಿಗೆ ವಿವರಣೆ ನೀಡಿದ್ದಾರೆ. ಅದಂಪುರ ಏರ್‌ಬೇಸ್‌ನಲ್ಲಿ ಯೋಧರು ಹಾಗೂ ಪ್ರಧಾನಿ ಮೋದಿ ಅವರಿಂದ ಅಪರೇಷನ್ ಸಿಂಧೂರ ಯಶಸ್ಸಿನ ಸಂಭ್ರಮಾಚರಣೆ ನಡೆದಿದೆ. ಮೋದಿ ಅವರು ವಾಯುಪಡೆ ಯೋಧರ ಭುಜತಟ್ಟಿ ಅಭಿನಂದನೆ ಸಲ್ಲಿಸಿದ್ದಾರೆ.

**ಒಂದೇ ಒಂದು ಫೋಟೋದ ಮೂಲಕ ಪಾಕ್‌ಗೆ ಖಡಕ್ ಸಂದೇಶ:** ಪ್ರಧಾನಿ ಮೋದಿ ಅದಂಪುರ ಏರ್ ಬೇಸ್‌ಗೆ ಭೇಟಿ ನೀಡಿ ಯೋಧರ ಜೊತೆ ಮಹತ್ವದ ಚರ್ಚಿಸಿದ್ದಾರೆ. ಈ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿರುವ ಅವರು ಫೋಟೋಗಳನ್ನ ಹಂಚಿಕೊಂಡಿದ್ದಾರೆ. ಅದಂಪುರ ಏರ್ ಬೇಸ್‌ಗೆ ಭೇಟಿ ನೀಡಿದ್ದೆ. ನಮ್ಮ ಧೈರ್ಯಶಾಲಿ ಏರ್ ವಾರಿಯರ್ಸ್ ಮತ್ತು ಯೋಧರನ್ನು ಭೇಟಿಯಾದೆ. ಅಸಾಧಾರಣ ಧೈರ್ಯ, ಬದ್ಧತೆ, ನಿರ್ಭಯತೆ ಪ್ರದರ್ಶಿಸಿದ ಯೋಧರ ಜೊತೆ ಇರೋದು ವಿಶೇಷ ಅನುಭವವಾಗಿದೆ. ನಮ್ಮ ದೇಶಕ್ಕಾಗಿ ಎಲ್ಲವನ್ನೂ ಮಾಡುವ ಸಶಸ್ತ್ರ ಪಡೆಗಳಿಗೆ ಭಾರತವು ಋಣಿಯಾಗಿದೆ. ಈ ಅದಂಪುರ ಏರ್‌ಬೇಸ್ ಪಂಜಾಬ್ ರಾಜ್ಯದ ಜಲಂಧರ್‌ನಿಂದ 28 ಕಿ.ಮೀ ದೂರದಲ್ಲಿದೆ. ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯಲ್ಲಿ ಅದಂಪುರ ಏರ್‌ಬೇಸ್ ಪ್ರಮುಖ ಪಾತ್ರವಹಿಸಿದೆ. ಹೀಗಾಗಿ ಏರ್‌ಬೇಸ್‌ಗೆ ಹೋಗಿ ಪ್ರಧಾನಿ ಮೋದಿ ಅವರು ಸೈನಿಕರನ್ನು ಭೇಟಿಯಾಗಿದ್ದಾರೆ. ಅದಂಪುರ ಏರ್‌ಬೇಸ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಒಂದೇ ಒಂದು ಫೋಟೋದ ಮೂಲಕ ಪಾಕ್‌ಗೆ ಖಡಕ್ ಸಂದೇಶ ರವಾನಿಸಿದ್ದಾರೆ.

### ಡಿಯರ್ ಮೋದಿ ಅಂಕಲ್, ನೀವು ನಿಜವಾದ ಹೀರೋ

**ಡಿಯರ್ ಮೋದಿ ಅಂಕಲ್, ಭಯೋತ್ಪಾದನೆ ವಿರುದ್ಧ ದೃಢ ಕ್ರಮ ತೆಗೆದುಕೊಂಡಿದ್ದಕ್ಕಾಗಿ ನಾನು ನಿಮಗೆ ಮತ್ತು ಭಾರತೀಯ ಸೇನೆಗೆ ಧನ್ಯವಾದ ಅರ್ಪಿಸುತ್ತೇನೆ ಅಂತ ಬಾಲಕ ಸೈಯದ್ ಅರೀಬ್ ಬುಖಾರಿ ವಿಡಿಯೋದಲ್ಲಿ ಹೇಳಿದ್ದಾನೆ. ನೀವು ಭಯೋತ್ಪಾದನೆಯ ವಿರುದ್ಧ ಬಲವಾದ ಹೆಜ್ಜೆ ಇಟ್ಟಿದ್ದೀರಿ. ಅಲ್ಲದೇ ನೀವು ಅದನ್ನು ಕಾರ್ಯರೂಪದಲ್ಲಿ ತೋರಿಸಿದ್ದೀರಿ. ನೀವೇ ನಮ್ಮ ನಿಜವಾದ ಹೀರೋ ಅಂತ ಬಾಲಕ ಬಣ್ಣಿಸಿದ್ದಾನೆ.**

# ಪಕ್ಷಾತೀತವಾಗಿ ಮೇ 15ರಿಂದ 23ರವರೆಗೆ ಕರ್ನಾಟಕದಲ್ಲಿ ತಿರಂಗಾ ಯಾತ್ರೆ

### ಪ್ರತಿಹಳ್ಳಿಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಪಕ್ಷದ ಬ್ಯಾನರ್ ಇಲ್ಲದೇ ಯಾತ್ರೆಯನ್ನು ಕೈಗೊಳ್ಳಲು ನಮ್ಮ ಕಾರ್ಯಕರ್ತರಿಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

**ರಾಷ್ಟ್ರ ರಕ್ಷಣೆಗಾಗಿ ಆಪರೇಷನ್ ಸಿಂಧೂರದ ಜೊತೆ ನಾವಿದ್ದೇವೆ;** ಭಾರತದ ಸೇನೆ ಜೊತೆ ನಾವೆಲ್ಲರೂ ಇದ್ದೇವೆ ಎಂದು ಸಂದೇಶ ನೀಡುವ ಸಲುವಾಗಿ ಮೇ 15ರ ಗುರುವಾರ ಬೆಳಗ್ಗೆ 11 ಗಂಟೆಗೆ ಬೆಂಗಳೂರಿನಲ್ಲಿ ತಿರಂಗಾ ಯಾತ್ರೆಯನ್ನು ಕೈಗೊಳ್ಳಲಾಗುವುದು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಮಲ್ಲೇಶ್ವರ ಮಂತ್ರಿಮಾಲ್‌ನ ಸಂಪಿಗೆ ರಸ್ತೆಯ ಸಿರೂರು ಆಟದ ಮೈದಾನದಿಂದ ಪ್ರಾರಂಭವಾಗಿ 18ನೇ ಕ್ರಾಸ್‌ವರೆಗೂ ರಾಷ್ಟ್ರಧ್ವಜದೊಂದಿಗೆ ತಿರಂಗಾ ಯಾತ್ರೆ ಜರುಗಲಿದೆ.

ಪಕ್ಷತೀತವಾಗಿ ನಡೆಯುವ ಈ ಯಾತ್ರೆಯಲ್ಲಿ ಪಕ್ಷದ ಯಾವುದೇ ಬ್ಯಾನರ್‌ಗಳು ಇರುವುದಿಲ್ಲ. ಈ



ಯಾತ್ರೆಯಲ್ಲಿ ವೈದ್ಯರು, ಇಂಜಿನಿಯರ್‌ಗಳು, ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಎಲ್ಲರೂ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಮೇ 16 ಮತ್ತು 17ರಂದು ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಮೇ 18ರಿಂದ 23ರವರೆಗೆ ತಾಲ್ಲೂಕು ಕೇಂದ್ರಗಳಲ್ಲಿ ತಿರಂಗಾ ಯಾತ್ರೆಯನ್ನು ಮಾಡಲಾಗುತ್ತದೆ ಎಂದು ಹೇಳಿದರು.

ಪ್ರತಿಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪಕ್ಷದ ಬ್ಯಾನರ್ ಇಲ್ಲದೇ ಯಾತ್ರೆಯನ್ನು ಕೈಗೊಳ್ಳಲು ನಮ್ಮ ಕಾರ್ಯಕರ್ತರಿಗೆ ಸೂಚನೆಯನ್ನು ಕೊಡಲಾಗಿದೆ ಎಂದು ವಿವರಿಸಿದರು.

ಭಾರತದ ತಾಯಂದಿರ ಸಿಂಧೂರ ಅಳಿಸಿದರೆ ಏನು ಆಗುತ್ತದೆ ಎಂಬುದನ್ನು ನಮ್ಮ ಸೇನೆಯು ಇಡೀ ವಿಶ್ವಕ್ಕೆ ತೋರಿಸಿಕೊಟ್ಟಿದೆ ಮತ್ತು ಪಾಕಿಸ್ತಾನಕ್ಕೆ ಬುದ್ಧಿ ಕಲಿಸಿದ್ದಾರೆ.

ಸುಮಾರು 100ಕ್ಕೂ ಹೆಚ್ಚು ಭಯೋತ್ಪಾದಕರು ಹತರಾಗಿದ್ದಾರೆ. ಪಾಕಿಸ್ತಾನದ ಉಗ್ರರ ಸ್ಥಳಗಳನ್ನು ಈಗಾಗಲೇ ಧ್ವಂಸಗೊಳಿಸಲಾಗಿದೆ. ಪಾಕಿಸ್ತಾನವು ಕೊನೆಗೆ ಈ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಅಂಗಲಾಚುವ ಸ್ಥಿತಿಗೆ ನಮ್ಮ ಸೈನಿಕರು ತಂದಿದ್ದಾರೆ. ಭಾರತ ಎಂದೂ ಉಗ್ರವಾದವನ್ನು ಸಹಿಸಲ್ಲ ಎಂಬ ಸಂದೇಶವನ್ನು ಇಡೀ ಪ್ರಪಂಚಕ್ಕೆ ನೀಡಿರುತ್ತಾರೆ ಎಂದು ವಿಶ್ಲೇಷಿಸಿದರು.

ಸಿಂಧೂ ನದಿ ನೀರಿನ ವಿಚಾರವಾಗಿ ಈ ಹಿಂದೆ 90% ನೀರು ಪಾಕಿಸ್ತಾನಕ್ಕೆ 10% ಮಾತ್ರ ಭಾರತಕ್ಕೆ ಎಂಬ



**ಇಂದು ನಮ್ಮ ಸೈನಿಕರು ಕಾಶ್ಮೀರ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರವು ನಮ್ಮದು ಎಂದು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ನಮ್ಮ ಪ್ರಧಾನ ಮೋದಿಜೀರವರು ಸಹ ಹೇಳಿದ್ದಾರೆ. ಪಾಕಿಸ್ತಾನ ಅಕ್ರಮಿತ ಕಾಶ್ಮೀರವನ್ನು ನಾವು ವಾಪಸ್ ಪಡೆಯುತ್ತೇವೆ ಹಾಗೂ ಸಿಂಧೂ ನದಿಯ ಯಾವುದೇ ಒಪ್ಪಂದವನ್ನು ಮಾಡುವುದಿಲ್ಲ. ಪಾಕಿಸ್ತಾನದ ಭಯೋತ್ಪಾದಕರಿಗೆ ಮತ್ತು ಪಾಕಿಸ್ತಾನಕ್ಕೆ ಬುದ್ಧಿ ಕಲಿಸಿರುವ ನಮ್ಮ ಸೈನಿಕರಿಗೆ ಗೌರವ ನೀಡುವ ಸಲುವಾಗಿ ಈ ತಿರಂಗಾ ಯಾತ್ರೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.**

ಒಪ್ಪಂದವನ್ನು ಪ್ರಧಾನ ಮೋದಿ ಜೀಯವರು ರದ್ದುಪಡಿಸಿರುವುದು ಒಂದು ಸಾಧನೆಯಾಗಿದೆ. ನ್ಯೂಕ್ಲಿಯರ್ ಬಾಂಬ್ ಬೆದರಿಕೆಗೆ ನಾವು ಹೆದರುವುದಿಲ್ಲ ಎಂಬ ಸಂದೇಶವನ್ನು ನಮ್ಮ ಪ್ರಧಾನಿಯವರು ಪಾಕಿಸ್ತಾನಕ್ಕೆ ನೀಡಿದ್ದಾರೆ ಎಂದು ತಿಳಿಸಿದರು. ನಮ್ಮ ಸೈನಿಕರು ದಾಳಿ ಮಾಡಿರುವುದಕ್ಕೆ ಸಾಕ್ಷಿ ಇದೆಯೇ ಎಂದು ಪ್ರಶ್ನಿಸುತ್ತಿದ್ದರು.

ಅಲ್ಲಿನ ಸೈನಿಕರು ಮತ್ತು ಭಯೋತ್ಪಾದಕರು ಎಷ್ಟು ಜನ ಹತರಾಗಿದ್ದಾರೆ ಎಂದು ಪಾಕಿಸ್ತಾನವು ಈಗಾಗಲೇ ಒಪ್ಪಿಕೊಂಡಿದೆ. ನಮ್ಮ ಸೇನಾ ಅಧಿಕಾರಿಗಳೇ ಪತ್ರಿಕಾಗೋಷ್ಠಿ ನೀಡಿ, ಪಾಕಿಸ್ತಾನದ ಮೇಲೆ ದಾಳಿ ಮಾಡಿರುವುದಕ್ಕೆ ಸಾಕ್ಷಿ ಸಮೇತ ಉತ್ತರ ನೀಡಿದ್ದಾರೆ. ಆದರೂ ಪಾಕಿಸ್ತಾನ ಜಿಂದಾಬಾದ್ ಎನ್ನುವವರಿಗೆ ನಂಬಲು ಆಗುತಿಲ್ಲ ಮತ್ತು ಭಾರತದ ಕಾರ್ಯಾಚರಣೆಯನ್ನು ಸಹಿಸಲು ಆಗುತ್ತಿಲ್ಲ ಎಂದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,660/Gram24ct ₹8,855/Gram22ct | ಬೆಳ್ಳಿ: ₹97.90/Gram

# ರಸ್ತೆ ಸೌಕರ್ಯ ಸರಿಯಾಗಿದ್ರೆ ಟ್ರಾಫಿಕ್ ಸಮಸ್ಯೆ ಇರಲ್ಲ

## ಫ್ಲೈ ಓವರ್ ನಿರ್ಮಾಣ ಸಂಚಾರ ದಟ್ಟಣೆ ಪರಿಹಾರಕ್ಕೆ ಮದ್ದಲ್ಲ: ಕಮಿಷನರ್ ದಯಾನಂದ್

• ಉದಯವಾಹಿನಿ, ಬೆಂಗಳೂರು

ಟ್ರಾಫಿಕ್ ಟ್ರಾಫಿಕ್ ಟ್ರಾಫಿಕ್ ಐ ಡೋಂಟ್ ಲೈಕ್ ಟ್ರಾಫಿಕ್ ಬಟ್ ಬೆಂಗಳೂರು ಲೈಕ್ಸ್ ಅಂತ ಟಾಲಿವುಡ್‌ನ ನಟ ನವೀನ್ ಪೋಲಿಶೆಟ್ಟಿ ತೆರೆದ ವೇದಿಕೆಯಲ್ಲಿ ಟೀಕೆ ಮಾಡಿದ್ದರು. ಇನ್ನೂ ಸಿಲಿಕಾನ್ ಸಿಟಿ ದಟ್ಟಣೆ ಬಗ್ಗೆ ಮೀಮ್ಸ್ ಮಾಡಿ ವಾಟ್ಸಾಪ್ ಸ್ಟೇಟಸ್, ಎಕ್ಸ್‌ನಲ್ಲಿ ನಗಾಡೋದು ಉಂಟು. ಆದ್ರೆ ಅದನ್ನು ಸುಧಾರಿಸಲು ಪೊಲೀಸರು ಎಷ್ಟು ಕಷ್ಟ ಪಡುತ್ತಾರೆ. ದಟ್ಟಣೆ ಕಡಿಮೆ ಮಾಡೋದು ಪೊಲೀಸರಷ್ಟೇನಾ ಸರ್ಕಾರದ ಕೆಲಸ ಏನು ಅನ್ನೋದನ್ನ ಕಮಿಷನರ್ ದಯಾನಂದ್, ಅನುಚೇತ್ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ್ದಾರೆ.

ಝೆರೋಧಾ ಸಹ-ಸಂಸ್ಥಾಪಕ ಬಿಲಿಯನೇರ್ ನಿಖಿಲ್ ಕಾಮತ್ ಚರ್ಚೆ ನಡೆಸಿದ್ದಾರೆ. ಅವರು ತಮ್ಮ ಇತ್ತೀಚಿನ ವೀಡಿಯೊ ಪಾಡ್‌ಕ್ಯಾಸ್ಟ್‌ನಲ್ಲಿ ಬೆಂಗಳೂರಿನ ಇಬ್ಬರು ಉನ್ನತ ಪೊಲೀಸ್ ಅಧಿಕಾರಿಗಳಾದ ಪೊಲೀಸ್ ಆಯುಕ್ತರು ಬಿ. ದಯಾನಂದ, ಐಪಿಎಸ್ ಮತ್ತು ಸಂಚಾರ ಜಂಟಿ ಪೊಲೀಸ್ ಆಯುಕ್ತ ಎಂಎನ್ ಅನುಚೇತ್, ಐಪಿಎಸ್ ಅವರೊಂದಿಗೆ ಪಾಡಕಾಸ್ಟ್ ಮಾಡಿದ್ದಾರೆ.

ನಾನು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿದ್ದು. ನನ್ನ ಮನೆ ಬನ್ನೇರುಘಟ್ಟದ ಬಳಿ ಇದೆ. ಅಲ್ಲಿ ಹತ್ತು ವರ್ಷದಿಂದ ಮೆಟ್ರೋ




ಕಾಮಗಾರಿ ನಡೆಯುತ್ತಲೇ ಇದೆ. ಬೆಂಗಳೂರಿನ ಬಗ್ಗೆ ಯಾರ ಬಳಿ ಮಾತನಾಡಿದರು ಟ್ರಾಫಿಕ್ ಕಿರಿಕಿರಿ ಬಗ್ಗೆ ಅಸಮಾಧಾನ ಹೇಳಿಕೊಳ್ಳುತ್ತಾರೆ. ಹಾಗಾದ್ರೆ ಈ ತಲೆನೋವು ಸರಿಪಡಿಸೋದು ಹೇಗೆ ಎಂದು ಕೇಳಿದ್ದಾರೆ. ಈ ಬಗ್ಗೆ ಬಿ. ದಯಾನಂದ, ಅನುಚೇತ್ ಮಾತನಾಡಿರುವ ಬಗ್ಗೆ ಮಾಹಿತಿ ಇಲ್ಲಿದೆ. ಪ್ರತಿದಿನ, ನಗರದಾದ್ಯಂತ ಸಾವಿರಾರು ಜನರು ಗಂಟೆಗಟ್ಟಲೆ ರಸ್ತೆಗಳಲ್ಲಿ ಸಿಲುಕಿಕೊಳ್ಳುತ್ತಾರೆ, ವಿಶೇಷವಾಗಿ ಕಚೇರಿ ಕೆಲಸದ ಸಮಯದಲ್ಲಿ. ಇದು ಹೆಚ್ಚಿನ ಬೆಂಗಳೂರಿಗರ ಜೀವನದ ಒಂದು ಸಾಮಾನ್ಯ ಭಾಗವಾಗಿದೆ, ಇದು ಬೆಂಗಳೂರನ್ನು ಭಾರತದ ಅತ್ಯಂತ ಸಂಚಾರ ದಟ್ಟಣೆಯ ನಗರಗಳಲ್ಲಿ ಒಂದನ್ನಾಗಿ ಮಾಡಿದೆ

**ಕಮಿಷನರ್ ದಯಾನಂದ್ ಸಲಹೆ**

**ಫ್ಲೈ ಓವರ್ ಸಮಸ್ಯೆಗೆ ಪರಿಹಾರವಲ್ಲ**

**ಟ್ರಾಫಿಕ್ ಸಮಸ್ಯೆ ಏಂದಾಕ್ಷಣ ಫ್ಲೈ ಓವರ್, ಅಂಡರ್ ಪಾಸ್‌ನಿಂದ ನಿವಾರಣೆ ಯಾಗಲ್ಲ. ಬೆಂಗಳೂರಿನಲ್ಲಿ ರಸ್ತೆಗಳ ಬಳಕೆ, ಅದರ ನಿರ್ಮಾಣ ವ್ಯವಸ್ಥಿತವಾಗಿ ಆಗಬೇಕು. ವೈಜ್ಞಾನಿಕವಾಗಿ ಚರಂಡಿ ನಿರ್ಮಾಣ ಮಾಡಬೇಕು ಎಂದು ಕಮಿಷನರ್ ದಯಾನಂದ್ ಸಲಹೆ ನೀಡಿದ್ದಾರೆ.**

ಎಂದು ಅನುಚೇತ್ ಹೇಳಿದ್ದಾರೆ.

**ಮೆಟ್ರೋ ಸಿಟಿಗಳಲ್ಲಿ ಟ್ರಾಫಿಕ್ ಸಮಸ್ಯೆ ಸಾಮಾನ್ಯ:** ದೇಶದ ಯಾವುದೇ ಮೆಟ್ರೋ ಸಿಟಿಗಳು ಟ್ರಾಫಿಕ್ ಸಮಸ್ಯೆಗಳನ್ನು ಎದಿರಿಸುತ್ತವೆ. ಈ ಸಮಸ್ಯೆ ಸಾಮಾನ್ಯ. ಕೆಲಸ ಮಾಡುವ ನೌಕರರಿಗೆ ಸಿಟಿಗಳು ಒಂದು ಆಯಸ್ಕಾಂತದಂತೆ ಎಳೆಯುವ ತಾಣ. ಜನಸಂಖ್ಯೆ, ವಾಹನಗಳ ದಟ್ಟಣೆ ಹೆಚ್ಚಾದಂತೆ ಬೆಂಗಳೂರಿನಲ್ಲಿ ಮೂಲ ಸೌಕರ್ಯ ಸರಿಯಾಗಿ ಸಿಗುತ್ತಿಲ್ಲ. ಬೆಂಗಳೂರಿನಲ್ಲಿ ಖಾಸಗಿ ವಾಹನಗಳ ಖರೀದಿದಾರರ ಸಂಖ್ಯೆ ಹೆಚ್ಚಾಗುತ್ತಿದೆ. ದೆಹಲಿ ಮುಂಬೈ, ಕೋಲ್ಕತ್ತಾ ನಂತರ ಬೆಂಗಳೂರು ಹೆಚ್ಚು ಜನರನ್ನು ಹೊಂದಿದ ಪ್ರದೇಶ ಆನಂತರ ಚೆನ್ನೈ, ಹೈದರಾಬಾದ್ ಇದೆ.

**ಐಟಿ ಕ್ಷೇತ್ರವು ಬೆಳೆದಂತೆ ಮೂಲಭೂತ ಸೌಕರ್ಯ ಕಡಿತಗೊಳ್ಳುತ್ತಾ ಬಂತು:** ಬೆಂಗಳೂರು ನಗರವು ಅಭಿವೃದ್ಧಿಯಿಂದ ಸಮಸ್ಯೆಗಳನ್ನು ಎದುರಿಸುತ್ತಿದೆ. 2000 ರ ನಂತರ ಐಟಿ ಕ್ಷೇತ್ರವು ಬೆಳೆದಂತೆ, ನಗರವು ವೇಗವಾಗಿ ಅಭಿವೃದ್ಧಿ ಹೊಂದಿತು. ಆದರೆ, ರಸ್ತೆಗಳಂತಹ ಮೂಲಭೂತ ಸೌಕರ್ಯಗಳು ಮಾತ್ರ ಅಭಿವೃದ್ಧಿ ಆಗಲಿಲ್ಲ ಎಂದು ಅನುಚೇತ್ ಹೇಳಿದ್ದಾರೆ. ಇದರಿಂದ ಬೆಂಗಳೂರಿನಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಸುಮಾರು 1.23 ಕೋಟಿ ವಾಹನಗಳು 1.5 ಕೋಟಿ ಜನರ ನಗರದಲ್ಲಿವೆ. ಅಂದರೆ, ಪ್ರತಿ 1,000 ಜನರಿಗೆ 872 ವಾಹನಗಳಿವೆ. ಕಳೆದ ಹತ್ತು ವರ್ಷಗಳಲ್ಲಿ ವಾಹನಗಳ ಸಂಖ್ಯೆ ದುಪ್ಪಟ್ಟಾಗಿದೆ. 2013 ರಿಂದ 2023 ರವರೆಗೆ, ವಾಹನಗಳ ಸಂಖ್ಯೆ ವಾರ್ಷಿಕವಾಗಿ ಶೇ.8 ರಷ್ಟು ಹೆಚ್ಚಾಗಿದೆ. ಆದರೆ, ರಸ್ತೆಗಳ ಸಂಖ್ಯೆ ಮಾತ್ರ ಹೆಚ್ಚಾಗಿಲ್ಲ.ಚೀನಾ ಭಾರತ ಒಂದೇ ಜನಸಂಖ್ಯೆ ಹೊಂದಿದೆ. ಆದರೆ, ಅಲ್ಲಿ ಗುಂಡಿಗಳಿಲ್ಲ. ಬೆಂಗಳೂರಲ್ಲಿ ಹೆಚ್ಚಿದೆ ಯಾಕೆ ಎಂದು ನಿಖಿಲ್‌ಪ್ರಶ್ನಿಸಿದ್ದಾರೆ.

# ಅಕ್ಟೋಬರ್‌ನಲ್ಲಿ ಸುವರ್ಣ ಮಹೋತ್ಸವ ಆಚರಿಸಲು ನಿರ್ಧಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳು ಆರಂಭಗೊಂಡು ಅಕ್ಟೋಬರ್‌ಗೆ 50 ವರ್ಷಗಳು ತುಂಬಲಿವೆ. ಈ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಆಚರಣೆಗೆ ನಿರ್ಧರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾಹಿತಿ ನೀಡಿದರು. ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ವಿಕಾಸ ಯೋಜನೆ ಬೆಂಗಳೂರು ಮತ್ತು ಮೈಸೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಅರಮನೆ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಿದ್ದೇವೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಅನ್ನಪೂರ್ಣ ದೇವಿಯವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು. ಈ ಸಂಬಂಧ ನಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ್ದೇವೆ. ಒಂದು ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತು ಇತರರು ಈ ಕಾರ್ಯಕ್ರಮಕ್ಕೆ ಹಾಜರಾಗಲಿದ್ದಾರೆ ಎಂದು ಅವರು ಹೇಳಿದರು. ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ (ಐಸಿಡಿಎಸ್) ಸಭೆಯನ್ನು ಪರಿಶೀಲಿಸಿದ ಹೆಬ್ಬಾಳ್ಕರ್, ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ ಒತ್ತಿ ಹೇಳಿದರು. ನಾವು ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿಯನ್ನು ಪ್ರಾರಂಭಿ ಸಬೇಕಾಗಿದೆ ಎಂದರು. ಈ ತರಗತಿಗಳು ಪ್ರಾರಂಭವಾಗುವಂತೆ ನೋಡಿಕೊಳ್ಳಲು ಅವರು ಉಪ ನಿರ್ದೇಶಕರು ಮತ್ತು ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಗಳಿಗೆ ಸೂಚಿಸಿದರು.

# ಪಿಸ್ತೂಲು ತೋರಿಸಿ ಕಳ್ಳತನ; ಮಲ್ಲೇಶ್ವರದ ಪಬ್‌ನಲ್ಲಿ 60 ಸಾವಿರ ದೋಚಿ ಪರಾರಿ

• ಉದಯವಾಹಿನಿ, ಬೆಂಗಳೂರು

ಮಲ್ಲೇಶ್ವರದ ಮಿಲ್ಕ್ ಕಾಲೋನಿ ರಸ್ತೆಯಲ್ಲಿ ಜೊಮೆಟ್ರಿ ಬ್ರೆವರಿ ಆ್ಯಂಡ್ ಚಿಕನ್ ಪಬ್‌ಗೆ ಸೋಮವಾರ ಮುಂಜಾನೆ ಪಿಸ್ತೂಲು ಹಿಡಿದು ವ್ಯಕ್ತಿಯೊಬ್ಬ ನುಗ್ಗಿ ಹಣ ದೋಚಿ ಪರಾರಿ ಆಗಿದ್ದಾನೆ.ಪಬ್‌ನ ಕ್ಯಾಶ್ ಕೌಂಟರ್‌ನಲ್ಲಿದ್ದ 60 ಸಾವಿರವನ್ನು ಕಳ್ಳ ಹೊತ್ತೊಯ್ದಿದ್ದಾನೆ. ಭದ್ರತಾ ಸಿಬ್ಬಂದಿ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 309 (ದರೋಡೆ) ಹಾಗೂ 331 (ಅಕ್ರಮ ಪ್ರವೇಶ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸ ಲಾಗುತ್ತಿದೆ ಎಂದು ಪೊಲೀಸರು ಹೇಳಿದರು. **ಸಹಾಯವಾಣಿಗೆ ಕರೆ:** 'ಪಬ್ ಅನ್ನು ಭಾನುವಾರ ರಾತ್ರಿ ಬಂದ್ ಮಾಡಿಕೊಂಡು ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ಮನೆಗೆ ತೆರಳಿದ್ದರು. ಭದ್ರತಾ ಸಿಬ್ಬಂದಿ ಮಾತ್ರ ಕಾವಲು ಕಾಯುತ್ತಿದ್ದರು. ಮುಂಜಾನೆ ಪಿಸ್ತೂಲು ಹಿಡಿದುಕೊಂಡಿದ್ದ ವ್ಯಕ್ತಿಯೊಬ್ಬ ಪಬ್‌ಗೆ ನುಗ್ಗಿದ್ದಾನೆ. ಬಳಿಕ ಮೂರನೇ ಮಹಡಿಗೆ ತೆರಳಿ ಸಿಸಿಟಿವಿ ಕ್ಯಾಮೆರಾಗಳನ್ನು ಬಂದ್ ಮಾಡಿ ಕಳ್ಳತನ ಮಾಡಿ ಪರಾರಿ ಆಗಿದ್ದಾನೆ' ಎಂದು ಮೂಲಗಳು ತಿಳಿಸಿವೆ. ಕಳ್ಳ ಪಿಸ್ತೂಲ್ ಹಿಡಿದುಕೊಂಡು ಪಬ್ ಒಳಕ್ಕೆ ನುಗ್ಗಿದ್ದಾನೆ ಎಂದು ಭದ್ರತಾ ಸಿಬ್ಬಂದಿ ಮಾಹಿತಿ ನೀಡಿದ್ದರಿಂದ ಶಸ್ತ್ರಾಸ್ತ್ರ ಸಜ್ಜಿತರಾಗಿ ಸ್ಥಳಕ್ಕೆ ಪೊಲೀಸರು ಬಂದು ಕಾರ್ಯಾಚರಣೆ ನಡೆಸಿದರು.

# ಡ್ರಗ್ಸ್: ನೈಜೀರಿಯಾ ಪ್ರಜೆಗೆ 15 ವರ್ಷ ಶಿಕ್ಷೆ

• ಉದಯವಾಹಿನಿ, ಬೆಂಗಳೂರು

ಮಾದಕ ವಸ್ತು ಮಾರಾಟ ಮಾಡುವ ವೇಳೆ ಸಿಕ್ಕಿಬಿದ್ದ ನೈಜಿರಿಯಾ ಪ್ರಜೆಗೆ 15 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಸಿಸಿಎಚ್ 33ನೇ ನ್ಯಾಯಾಲಯ (ಎನ್ ಡಿಪಿಎಸ್ ವಿಶೇಷ ನ್ಯಾಯಾಲಯ) ಆದೇಶಿಸಿದೆ.ಹಾರ್ಲಿ ಒಕನೊವ ಶಿಕ್ಷೆಗೆ ಗುರಿಯಾದ ಅಪರಾಧಿ. ಕೆ.ಆರ್.ಪುರದ ಚಂದ್ರವದನಾ ಲೇಔಟ್‌ನ ಕಲ್ಕೆರೆ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕರಿಗೆ ಮಾದಕ ವಸ್ತು ಮಾರಾಟ ಮಾಡಲು ಪ್ರಯತ್ನಿಸು ತ್ತಿದ್ದ ವೇಳೆ ಸಿಸಿಬಿ ಪೊಲೀಸರು ಆತನನ್ನು ಬಂಧಿಸಿ, 200 ಗ್ರಾಂ ಎಂಡಿಎಂಎ ಕ್ರಿಸ್ಟೆಲ್ ವಶಪಡಿಸಿಕೊಂಡಿದ್ದರು. ಪೊಲೀಸರು ತನಿಖೆ ನಡೆಸಿ, ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ವಿವಿಧ ಕಲಂನ ವಿದೇಶಿ ಕಾಯ್ದೆ ಅಡಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಆರೋಪ ಸಾಬೀತಾದ ಕಾರಣ 15 ವರ್ಷ ಜೈಲು ಹಾಗೂ 1.75 ಲಕ್ಷ ದಂಡ ವಿಧಿಸಿ ನ್ಯಾಯಾಧೀಶ ವಿಜಯ ದೇವರಾಜ ಅರಸು ಆದೇಶಿಸಿದ್ದಾರೆ. ಅಭಿಯೋಜಕ ಕೆ.ವಿ.ಅಶ್ವಥ್‌ನಾರಾಯಣ ವಾದ ಮಂಡಿಸಿದರು.

# ಬೆಂಗಳೂರಿಗೆ ಯಲ್ಲೋ ಅಲರ್ಟ್

## ಮುಂದಿನ 3 ಗಂಟೆ ಭಾರೀ ಮಳೆ




• ಉದಯವಾಹಿನಿ, ಬೆಂಗಳೂರು

ನಗರದ ಹಲವೆಡೆ ಮಳೆ ಆರಂಭವಾಗಿದ್ದು, ಮುಂದಿನ ಮೂರು ಗಂಟೆಗಳ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ನಗರದಾದ್ಯಂತ ಮೋಡ ಕವಿದ ವಾತಾವರಣವಿದ್ದು, ಔಟರ್‌ರಿಂಗ್ ರೋಡ್ ಭಾಗದಲ್ಲಿ ಧಾರಾಕಾರ ಮಳೆಯಾಗುತ್ತಿದೆ. ಎಂ.ಜಿ ರೋಡ್, ಚಿನ್ನಸ್ವಾಮಿ ಸ್ಟೇಡಿಯಂ, ವಿಧಾನಸೌಧ, ಕೆ.ಆರ್ ಸರ್ಕಲ್, ಮೆಜೆಸ್ಟಿಕ್, ಕೆ.ಆರ್ ಮಾರ್ಕೆಟ್, ಟೌನ್ ಹಾಲ್ ಸೇರಿದಂತೆ ಹಲವು ಕಡೆ ಮಳೆ ಆರಂಭವಾಗಿದ್ದು, ವಾಹನ ಸವಾರರು ಪರದಾಡುತ್ತಿದ್ದಾರೆ. ಮುಂದಿನ ಮೂರು ಗಂಟೆಗಳ ಕಾಲ ಗುಡುಗು ಸಹಿತ ಭಾರೀ ಮಳೆಯಾಗಲಿದ್ದು, ಯಲ್ಲೋ ಅಲರ್ಟ್ ಘೋಷಿಸಲಾಗಿದೆ

# ಮೇ 15ರಂದು ಬೆಂಗಳೂರಿನಲ್ಲಿ ತಿರಂಗ ಯಾತ್ರೆ

• ಉದಯವಾಹಿನಿ, ಬೆಂಗಳೂರು

ಆಪರೇಷನ್ ಸಿಂಧೂರ ಮತ್ತು ಸಶಸ್ತ್ರ ಪಡೆಗಳಿಗೆ ಬೆಂಬಲ ಸೂಚಿಸಲು ಬೆಂಗಳೂರಿನಲ್ಲಿ ತಿರಂಗ ಯಾತ್ರೆಯನ್ನು ಮೇ 15 ರಂದು ನಡೆಸಲಾಗುವುದು ಎಂದು ಬಿಜೆಪಿ ನಾಯಕ ಮತ್ತು ವಿರೋಧ ಪಕ್ಷದ ನಾಯಕ (ಎಲ್‌ಒಪಿ) ಆರ್ ಅಶೋಕ ಮಂಗಳವಾರ ಹೇಳಿದ್ದಾರೆ. ಅದಾದ ಒಂದು ವಾರದ ಬಳಿಕ ರಾಜ್ಯದಲ್ಲಿ ಅಭಿಯಾನ ನಡೆಯಲಿದೆ. ಇದು ರಾಜಕೀಯೇತರ ಅಭಿಯಾನವಾಗಿದ್ದು, ಸಾರ್ವಜನಿಕರು ಭಾಗವಹಿಸುವಂತೆ ಒತ್ತಾಯಿಸಿದರು.

ಆಪರೇಷನ್ ಸಿಂಧೂರ ಮತ್ತು ಸಶಸ್ತ್ರ ಪಡೆಗಳಿಗೆ ನಮ್ಮ ಬೆಂಬಲ ಸೂಚಿಸಲು, ನಾವು ಕರ್ನಾಟಕದಾದ್ಯಂತ ತಿರಂಗ ಯಾತ್ರೆಯನ್ನು ನಡೆಸುತ್ತೇವೆ. ಬೆಂಗಳೂರಿನಲ್ಲಿ, ನಾವು ಮೇ 15ರಂದು ಮತ್ತು ಅದರ ನಂತರ ಕರ್ನಾಟಕದ ಉಳಿದ ಸ್ಥಳಗಳಲ್ಲಿ ತಿರಂಗ ಯಾತ್ರೆಯನ್ನು




ನಡೆಸುತ್ತೇವೆ. ಇದು ರಾಜಕೀಯೇತರವಾಗಿದ್ದು, ಎಲ್ಲಾ ಜನರು ಇದರಲ್ಲಿ ಭಾಗವಹಿಸಬೇಕು...' ಎಂದು ಅಶೋಕ ANI ಜೊತೆ ಮಾತನಾಡಿದರು.

ಮೂಲಗಳ ಪ್ರಕಾರ, ಮೇ 13ರಿಂದ ಮೇ 23ರವರೆಗೆ ದೇಶದಾದ್ಯಂತ ಬಿಜೆಪಿ ಈ ಅಭಿಯಾನವನ್ನು ನಡೆಸಲಿದೆ. ಸಂಬಿತ್ ಪಾತ್ರ, ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಮತ್ತು ತರುಣ್ ಚುಗ್ ಸೇರಿದಂತೆ ಹಿರಿಯ ಬಿಜೆಪಿ ನಾಯಕರು ತಿರಂಗ ಯಾತ್ರೆಯನ್ನು ಸಂಯೋಜಿಸಲಿದ್ದಾರೆ. ಪ್ರಮುಖ ಕೇಂದ್ರ ಸಚಿವರು, ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಪಕ್ಷದ ಹಿರಿಯ ನಾಯಕರು ದೇಶದ ವಿವಿಧ ಭಾಗಗಳಲ್ಲಿ ಮೆರವಣಿಗೆಗಳನ್ನು ಮುನ್ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ತಿರಂಗಾ ಯಾತ್ರೆಯಲ್ಲಿ ಮಾಜಿ ಸೈನಿಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಪ್ರಮುಖ ಸಾಮಾಜಿಕ ವ್ಯಕ್ತಿಗಳು ಭಾಗವಹಿಸಲಿದ್ದು, ಅವರು ಯಾತ್ರೆಯನ್ನು ಮುನ್ನಡೆಸಲಿದ್ದಾರೆ.

ಈ ಅಭಿಯಾನದ ಭಾಗವಾಗಿ, ಆಪರೇಷನ್ ಸಿಂಧೂರದ ಯಶಸ್ಸನ್ನು ಎತ್ತಿ ತೋರಿಸಲು ಬಿಜೆಪಿ ದೇಶದಾದ್ಯಂತ ಪತ್ರಿಕಾಗೋಷ್ಠಿಗಳನ್ನು ಆಯೋಜಿಸುತ್ತದೆ.

ಹೆಚ್ಚಿನ ಪ್ರೇಕ್ಷಕರನ್ನು ತಲುಪಲು ಪಕ್ಷವು ಸಾಮಾಜಿಕ ಮಾಧ್ಯಮ ಪ್ರಭಾವಿಗಳನ್ನು ಸಹ ಬಳಸಿಕೊಳ್ಳುತ್ತದೆ ಎಂದು ಮೂಲಗಳು ANIಗೆ ತಿಳಿಸಿವೆ.

# ವೈಟ್ ಟಾಪಿಂಗ್ ರಸ್ತೆಗಳು ಕನಿಷ್ಠ 30 ವರ್ಷ ಕಾಲ ಬಾಳಿಕೆ ಬರಬೇಕು: ಅಧಿಕಾರಿಗಳಿಗೆ ಡಿಕೆಶಿ ಸೂಚನೆ

• ಉದಯವಾಹಿನಿ, ಬೆಂಗಳೂರು

ವೈಟ್ ಟ್ಯಾಪಿಂಗ್ ನಡೆಯುತ್ತಿರುವ ರಸ್ತೆಗಳ ಗುಣ ಮಟ್ಟ ಚೆನ್ನಾಗಿರಬೇಕು. ಈ ರಸ್ತೆಗಳು 30 ವರ್ಷಗಳ ಕಾಲ ಬಾಳಿಕೆ ಬರಬೇಕು ಎಂದು ಅಧಿಕಾರಿಗಳಿಗೆ ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿಕೆ.ಶಿವಕುಮಾರ್ ಅವರು ಸೋಮವಾರ ಸೂಚನೆ ನೀಡಿದರು, ನಗರದ ವಿವಿಧ ಕಡೆಗಳಲ್ಲಿ ಸೋಮವಾರ ರಸ್ತೆ ಕಾಮಗಾರಿಗಳ ಗುಣಮಟ್ಟವನ್ನು ಡಿಕೆಶಿ ಅವರು ಪರಿಶೀಲನೆ ಮಾಡಿದರು, ಈ ವೇಳೆ ಮಾತನಾಡಿದ ಅವರು, ವೈಟ್ ಟ್ಯಾಪಿಂಗ್ ನಡೆಯುತ್ತಿರುವ ರಸ್ತೆಗಳ ಗುಣಮಟ್ಟ ಚೆನ್ನಾಗಿರಬೇಕು.

ಈ ರಸ್ತೆಗಳು 30 ವರ್ಷಗಳ ಕಾಲ ಬಾಳಿಕೆ ಬರಬೇಕು. ಹೀಗಾಗಿ ನಾನು ಆಗಾಗ್ಗೆ ಕಾಮಗಾರಿಗಳ ಪರಿಶೀಲನೆ ಮಾಡುತ್ತಿದ್ದೇನೆ. ಅಧಿಕಾರಿಗಳು ತೋರಿಸುವ ಜಾಗದಲ್ಲಿ ಪರಿಶೀಲನೆ ಮಾಡುವುದಿಲ್ಲ, ನಾನು ಎಲ್ಲಿ ಹೇಳುತ್ತೇನೋ





ಅಲ್ಲಿ ನಿಲ್ಲಿಸಿ ಪರಿಶೀಲನೆ ಮಾಡಲಾಗುವುದು. ಈಗ ಪರಿಶೀಲನೆ ಮಾಡಿದಾಗ ಅರ್ಧ ಅಡಿ ರಸ್ತೆ ಇದೆ. ಈ ರಸ್ತೆಯಲ್ಲಿ ನೀರು, ಕೇಬಲ್‌ಗಳಿಗೆ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಎಲ್ಲಾ ಶಾಸಕರು ಅಗತ್ಯ ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿದರು. ಬೆಂಗಳೂರಿನ ಕಸ ವಿಲೇವಾರಿ ಮಾಫಿಯಾವಾಗಿದೆ ಎಂದು ಹೇಳಿದ್ದೀರಿ ಎಂಬ ಪ್ರಶ್ನೆಗೆ ಉತ್ತರಿಸಿ, ಕಸ ವಿಲೇವಾರಿ ಟೆಂಡರ್ ಕರೆಯಲು ಇದ್ದ ತಡೆಯಾಜ್ಞೆಯನ್ನು ನ್ಯಾಯಾಲಯ ವಜಾಗೊಳಿಸಿದೆ.

# ಡಿ.ಎಸ್. ವೀರಯ್ಯ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಡಿ ದೇವರಾಜ್ ಉರ್ಸ್ ಟ್ರಕ್ ಟರ್ಮಿನಲ್ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಡಿ.ಎಸ್. ವೀರಯ್ಯ ಅವರ ವಿರುದ್ಧ ಹಣ ದುರುಪಯೋಗಕ್ಕಾಗಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದೆ, ಅವರ ವಿರುದ್ಧ ಮೊಕದ್ದಮೆ ದಾಖಲಿಸುವ ಮೊದಲು ಯಾವುದೇ ಪೂರ್ವಾನುಮತಿ ಪಡೆದಿರಲಿಲ್ಲ ಎಂದು ತಿಳಿಸಿದೆ.

ಡಿ ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ ಕಂಪೆನಿ ವತಿಯಿಂದ ನಿರ್ಮಿಸುವ ಎಲ್ಲಾ ಟ್ರಕ್ ಟರ್ಮಿನಲ್‌ಗಳಲ್ಲಿ ಮತ್ತು ಟ್ರಕ್ ಟರ್ಮಿನಲ್‌ಗಳಿಗಾಗಿ ಪಡೆದಿರುವ ಜಮೀನಿನಲ್ಲಿ ಕೆಲವು ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ ನಡೆಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆಗೆ (ಕೆಪಿಟಿಟಿ) ವಿರುದ್ಧವಾಗಿ ಡಿ ಎಸ್ ವೀರಯ್ಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ತುಂಡು ಗುತ್ತಿಗೆ ಆಧಾರದ




ಮೇಲೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ದೂರು ದಾಖಲಿಸಿದ್ದರು. ಸೆಪ್ಟೆಂಬರ್ 22, 2023 ರಂದು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಟರ್ಮಿನಲ್‌ನ ವ್ಯವಸ್ಥಾಪಕ ನಿರ್ದೇಶಕರು ತಮ್ಮ ವಿರುದ್ಧ ದಾಖಲಿಸಿದ ಅಪರಾಧದ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ವೀರಯ್ಯ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅನುಮತಿಸಿದ್ದಾರೆ. ಅರ್ಜಿದಾರ ಮತ್ತು ಆರೋಪಿ ನಂ.1 ರ ಅವಧಿಯಲ್ಲಿ ಕೈಗೊಂಡ ಸುಮಾರು 47.10 ಕೋಟಿ ರೂ.ಗಳ ಕಾಮಗಾರಿಗಳು ಅನುಮಾನಾಸ್ಪದವೆಂದು ಕಂಡುಬಂದಿವೆ ಎಂದು ದೂರಿನಲ್ಲಿ ಹೇಳಲಾಗಿತ್ತು, ಏಕೆಂದರೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999 ರ ನಿಬಂಧನೆಗಳನ್ನು ಆಶ್ರಯಿಸದೆ ಗುತ್ತಿಗೆದಾರರಿಗೆ ಕೆಲಸಗಳನ್ನು ನೀಡಲಾಗಿದೆ ಎಂದು ದೂರಲಾಗಿದೆ. ಅರ್ಜಿದಾರರ ಪರ ಹಾಜರಾದ ವಕೀಲರು, ಅರ್ಜಿದಾರರು ಸಾರ್ವಜನಿಕ ಸೇವಕರಾಗಿದ್ದು, ಸಂಬಂಧಿತ ಸಮಯದಲ್ಲಿ ಸರ್ಕಾರಿ ಉದ್ಯಮದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಯಾವುದೇ ತನಿಖೆಯನ್ನು ಪ್ರಾರಂಭಿಸಲು ಪಿಸಿ ಕಾಯ್ದೆ 1988 ರ ಸೆಕ್ಷನ್ 17-ಎ ಅಡಿಯಲ್ಲಿ ಪೂರ್ವಾನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಬೇಕಾಗಿತ್ತು ಎಂದು ವಾದಿಸಿದರು. ಐಪಿಸಿ ಅಡಿಯಲ್ಲಿ ಅಪರಾಧವನ್ನು ದಾಖಲಿಸಲಾಗಿದ್ದರೂ, ವೀರಯ್ಯ ವಿಚಾರದಲ್ಲಿ ಯಾವುದೇ ಪ್ರಕ್ರಿಯೆ ಪಾಲಿಸಿಲ್ಲ ಎಂದು ವಾದಿಸಿದ್ದರು

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆ**

# ಹಂದಿ ಮಾಂಸ ಕಳುಹಿಸುವುದಾಗಿ ಬೆದರಿಕೆ

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ತಮ್ಮ ಮನೆ ವಿಳಾಸ ಮೊಬೈಲ್ ಸಂಖ್ಯೆ ಸೋರಿಕೆಯಾಗಿದ್ದು, ಇದಾದ ಬಳಿಕ ಜೀವ ಬೆದರಿಕೆ ಬಂದಿದ್ದರಿಂದ ಪೊಲೀಸರಿಗೆ ದೂರು ನೀಡಿದ್ದೇನೆ ಎಂದು ಫ್ಯಾಕ್ಟ್ ಚೆಕ್ಕಿಂಗ್ ವೆಬ್‌ಸೈಟ್ ಆಲ್ಟ್ ನ್ಯೂಸ್ ಸಹ-ಸಂಸ್ಥಾಪಕ ಮೊಹಮ್ಮದ್ ಜುಬೈರ್ ಹೇಳಿದ್ದಾರೆ.

ಆದಾಗ್ಯೂ, ಈ ಸಂಬಂಧ ಇನ್ನೂ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಸೋಮವಾರ ರಾತ್ರಿನಲ್ಲಿ ಪೋಸ್ಟ್ ಮಾಡಿರುವ ಅವರು, ಜನರು ತಮ್ಮ ಮನೆ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಸೋರಿಕೆ ಮಾಡಿದ್ದಾರೆ. ಬಳಿಕ ನಮ್ಮ ಮನೆ ವಿಳಾಸಕ್ಕೆ ಹಂದಿ ಮಾಂಸ ಕಳುಹಿಸುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.



**'ಈ ಸಂಬಂಧ ಅವರಿಂದ ನಮಗೆ ದೂರು ಬಂದಿದೆ. ಆದರೆ, ಇನ್ನೂ ಯಾವುದೇ ಎಫ್ ಐಆರ್ ದಾಖಲಾಗಿಲ್ಲ. ದೂರನ್ನು ಆರ್‌ಟಿ ನಗರ ಪೊಲೀಸ್ ಠಾಣೆ ವ್ಯಾಪ್ತಿಗೆ ವರ್ಗಾಯಿಸಲಾಗುತ್ತಿದ್ದು, ಅವರು ಅಲ್ಲೇ ವಾಸಿಸುತ್ತಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

ನನ್ನ ವಿರುದ್ಧ ಈಗಾಗಲೇ ಜೀವ ಬೆದರಿಕೆಗಳಿವೆ. ಇದು ಮೊದಲ ಬಾರಿಗೆ ಅಲ್ಲ. 2023ರಲ್ಲಿಯೂ ಅದೇ ವ್ಯಕ್ತಿ ನನ್ನ ವಿಳಾಸಕ್ಕೆ ಹಂದಿ ಮಾಂಸ ಕಳುಹಿಸಿದ್ದ ಮತ್ತು ಟ್ವಿಟರ್‌ನಲ್ಲಿ ಶಿಪ್ಪಿಂಗ್ ವಿಳಾಸವನ್ನು ಹಂಚಿಕೊಂಡಿದ್ದ. ನಾನು ಪೊಲೀಸರಿಗೆ ದೂರು ದಾಖಲಿಸಿದ್ದೇನೆ. ಪೂರ್ವ ವಿಭಾಗದ ಡಿಸಿಪಿ, ಬೆಂಗಳೂರು ಪೊಲೀಸ್ ಆಯುಕ್ತರು ಮತ್ತು ಡಿಜಿಪಿ ಈ ಬೆದರಿಕೆಯನ್ನು ಈ ಬಾರಿಯಾದರೂ ಗಂಭೀರವಾಗಿ ಪರಿಗಣಿಸುತ್ತಾರೆ ಎಂದು ನಂಬಿದ್ದೇನೆ' ಎಂದು ಅವರು ತಮ್ಮ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಕಳೆದ ಬಾರಿ ಕೂಡ ಇದೇ ರೀತಿಯ ದೂರು ದಾಖಲಿಸಿದಾಗ, ಕೆಲವು ತಿಂಗಳುಗಳ ನಂತರ ಎಫ್‌ಐಆರ್ ಅನ್ನು ರದ್ದುಗೊಳಿಸಲಾಯಿತು ಎಂದಿದ್ದಾರೆ. ತಮ್ಮ ವೈಯಕ್ತಿಕ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸೋರಿಕೆ ಮಾಡಿದ ಹ್ಯಾಂಡಲ್‌ಗಳನ್ನು ಸಹ ಹಂಚಿಕೊಂಡಿದ್ದು, 'ಆ ವಿಳಾಸದಲ್ಲಿ ವಾಸಿಸುತ್ತಿರುವ ನನಗೆ ಮತ್ತು ನನ್ನ ಕುಟುಂಬಕ್ಕೆ ಬೆದರಿಕೆ ಇದೆ' ಎಂದಿದ್ದಾರೆ.

# ವೈದ್ಯರ ಮನೆಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳು

• ಉದಯವಾಹಿನಿ, ಬೆಂಗಳೂರು

ದುಷ್ಕರ್ಮಿಗಳ ಗುಂಪೊಂದು ವೈದ್ಯರ ಮನೆಗೆ ಬೆಂಕಿ ಹಚ್ಚಲು ಯತ್ನಿಸಿದ್ದು, ಪರಿಣಾಮ ಮನೆಯ ಸೆಕ್ಯೂರಿಟಿ ಗಾರ್ಡ್ ಗಾಯಗೊಂಡು, 45 ಲಕ್ಷ ರೂ ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾಗಿರುವ ಘಟನೆ ನಗರದ ಬಾಪೂಜಿ ಲೇಔಟ್‌ನಲ್ಲಿ ಬೆಳಗಿನ ಜಾವ ನಡೆದಿದೆ. ಬಾಪೂಜಿ ಲೇಔಟ್‌ನ 4ನೇ ಕ್ರಾಸ್‌ನಲ್ಲಿರುವ ಡಾ. ಬಿ.ಎಸ್. ಗಂಗಾಧರ್ (67) ಅವರ ಮನೆಗೆ ನಾಲ್ವರು ದುಷ್ಕರ್ಮಿಗಳಿದ್ದ ಗುಂಪೊಂದು ಬೆಳಗಿನ ಜಾವ 12.20 ರಿಂದ 12.25 ರ ನಡುವೆ ಬೆಂಕಿ ಹಚ್ಚಿದ್ದಾರೆ.

ಘಟನೆ ವೇಳೆ ಕರ್ತವ್ಯದಲ್ಲಿದ್ದ ಸೆಕ್ಯೂರಿಟಿ ಗಾರ್ಡ್ ತ್ಯಾಗರಾಜ್ ಅವರಿಗೆ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆಂದು ತಿಳಿದುಬಂದಿದೆ. ಘಟನೆ ಸಂಬಂಧ ವೈದ್ಯ ಗಂಗಾಧರ್ (44) ಅವರು ಪೊಲೀಸರಿಗೆ ದೂರು ನೀಡಿದ್ದು, ದೂರಿನಲ್ಲಿ, ಕಳೆದ ಎಂಟು ವರ್ಷಗಳಿಂದ ತಮ್ಮ ಕುಟುಂಬದೊಂದಿಗೆ ಆ ಮನೆಯಲ್ಲಿ ವಾಸಿಸುತ್ತಿದ್ದು, ಬೆಂಕಿ ಅವಘಡದಲ್ಲಿ 45 ಲಕ್ಷ ರೂಪಾಯಿ ಮೌಲ್ಯದಷ್ಟು ನಷ್ಟವಾಗಿದೆ ಎಂದು ಹೇಳಿದ್ದಾರೆ. ಕಳೆದ ವರ್ಷ ಜುಲೈ 30 ರಂದು, ವಿಜಯನಗರದ ಎಂಆರ್‌ಬಿಹೆಚ್ ಕಾಲೋನಿಯಲ್ಲಿರುವ ನನ್ನ ಪುತ್ರ ಡಾ. ತುಷಾರ್‌ಗೆ ಸೇರಿದ ಫಾರ್ಮಾ ಕಂಪನಿಯಲ್ಲಿಯೂ ಇದೇ ರೀತಿಯ ಘಟನೆ ನಡೆದಿತ್ತು. ಇಬ್ಬರು ದುಷ್ಕರ್ಮಿಗಳು ಕಂಪನಿಯ ಬಾಗಿಲುಗಳಿಗೆ ಬೆಂಕಿ ಹಚ್ಚಿದ್ದರು. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಇಬ್ಬರು ವ್ಯಕ್ತಿಗಳು ಕಂಪನಿಯ ಸಿಸಿಟಿವಿ ಕ್ಯಾಮೆರಾಗಳನ್ನು ಕದ್ದಿದ್ದರು ಎಂದು ಹೇಳಿದ್ದಾರೆ.

**ಘಟನೆ ಸಂಬಂಧ ತುಷಾರ್ ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಎರಡೂ ಪ್ರಕರಣಗಳು ತನಿಖೆಯಲ್ಲಿವೆ. ಎಲ್ಲಾ ಪ್ರಕರಣಗಳು ಒಂದೇ ರೀತಿಯ ಮಾದರಿಯನ್ನು ಹೊಂದಿರುವುದರಿಂದ, ದೂರುದಾರರಿಗೆ ತಿಳಿದಿರುವ ಯಾರಾದರೂ ಈ ಘಟನೆಗಳ ಹಿಂದೆ ಇರಬೇಕೆಂದು ಶಂಕಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

ಗಂಗಾಧರ್ ಅವರ ದೂರಿನ ಆಧಾರದ ಮೇಲೆ, ಚಂದ್ರ ಲೇಔಟ್ ಪೊಲೀಸರು ಕೊಲೆ ಯತ್ನ (ಬಿಎನ್‌ಎಸ್ 109), ದುಷ್ಕೃತ್ಯ (ಬಿಎನ್‌ಎಸ್ 326 (ಜಿ)) ಮತ್ತು ಬಿಎನ್‌ಎಸ್‌ನ ಇತರ ವಿಭಾಗಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದು, ತನಿಖೆ ನಡೆಸುತ್ತಿದ್ದಾರೆ.

# ಮಾಜಿ ಸಚಿವ ಗೋಪಾಲಯ್ಯ ವಿರುದ್ಧದ ಅಬಕಾರಿ ಪ್ರಕರಣ

## ಕೆಎನ್ ರಿಸೋರ್ಸಸ್ ಪ್ರೈವೇಟ್ ಲಿಮಿಟೆಡ್‌ಗೆ 2 ಲಕ್ಷ ಮೆಟ್ರಿಕ್ ಟನ್ ಕಾಕಂಬಿ ರಫ್ತು ಮಾಡಲು ಅನುಮತಿ ನೀಡುವಾಗ ನಿಯಮ ಉಲ್ಲಂಘನೆ

• ಉದಯವಾಹಿನಿ, ಬೆಂಗಳೂರು

ಮಾಜಿ ಅಬಕಾರಿ ಸಚಿವ ಕೆ. ಗೋಪಾಲಯ್ಯ, ಇತರ ಅಧಿಕಾರಿಗಳು ಒಳಗೊಂಡ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ ಮುಕ್ತಾಯ ವರದಿಯನ್ನು ಹಾಲಿ ಮತ್ತು ಮಾಜಿ ಸಂಸದರು/ ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯವು ರದ್ದುಗೊಳಿಸಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಬಕಾರಿ ಸಚಿವರಾಗಿದ್ದ ಅವಧಿಯಲ್ಲಿ 2 ಲಕ್ಷ ಮೆಟ್ರಿಕ್ ಟನ್‌ನಷ್ಟು ಕಾಕಂಬಿಯನ್ನು ನಿಯಮಬಾಹಿರವಾಗಿ ರಫ್ತು ಮಾಡಲು ಅನುಮತಿ ನೀಡಿದ್ದ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಮುಕ್ತಾಯ ವರದಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ತಿರಸ್ಕರಿಸಿದೆ. 2021 ರಿಂದ 2023 ರವರೆಗೆ ಕೆಎನ್ ರಿಸೋರ್ಸಸ್ ಪ್ರೈವೇಟ್ ಲಿಮಿಟೆಡ್‌ಗೆ 2 ಲಕ್ಷ ಮೆಟ್ರಿಕ್ ಟನ್ ಕಾಕಂಬಿ ರಫ್ತು ಮಾಡಲು ಅನುಮತಿ ನೀಡುವಾಗ ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಪ್ರಕರಣದ ಕುರಿತು ಕರ್ನಾಟಕ ಲೋಕಾಯುಕ್ತ ಪೊಲೀಸರು ನಡೆಸಿರುವ ತನಿಖೆಯು ಕಾನೂನಿಗೆ ಅನುಗುಣವಾಗಿಲ್ಲ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. ಇದಲ್ಲದೆ, ಯಾವುದೇ ಅಪರಾಧ ನಡೆದಿದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ತನಿಖಾ ಸಂಸ್ಥೆಯು ಪ್ರಕರಣದಲ್ಲಿ ಲಭ್ಯವಿರುವ ಸುಳಿವುಗಳನ್ನು ಸೇರಿಸಬೇಕಾಗಿತ್ತು. ಆದರೆ ಇದಾವುದನ್ನೂ ಈ ಪ್ರಕರಣದ ತನಿಖೆಯಲ್ಲಿ ಮಾಡಿಲ್ಲ ಎಂದು ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಹೇಳಿರುವುದು ಲೋಕಾಯುಕ್ತ ಪೊಲೀಸರ ತನಿಖೆಯ ವಿಶ್ವಾಸರ್ಹತೆಯ ಬಗೆಗೆ ಹಲವು ಪ್ರಶ್ನೆಗಳು ಮತ್ತು ಅನುಮಾನಗಳಿಗೆ ದಾರಿಮಾಡಿಕೊಟ್ಟಂತಾಗಿದೆ.

**ಲೋಕಾಯುಕ್ತ ಪೊಲೀಸರು ಸಲ್ಲಿಕೆ**

ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ, ತನಿಖಾ ಸಂಸ್ಥೆಯು ಈ ಪ್ರಕರಣವನ್ನು ಸರಿಯಾದ ದೃಷ್ಟಿಕೋನದಿಂದ ಗಮನಿಸದೇ ಇರುವುದನ್ನೂ ಸಹ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಅವಲೋಕಿಸಿದೆ. ಆರ್ಥಿಕ ಇಲಾಖೆಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಐ ಎಸ್ ಎನ್ ಪ್ರಸಾದ್, ಆರ್ಥಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ ಏಕರೂಪ್ ಕೌರ್,




ಅಬಕಾರಿ ಇಲಾಖೆ ಆಯುಕ್ತ ಡಾ ಜೆ ರವಿಶಂಕರ್, ಇಲಾಖೆಯ ಅಧೀನ ಕಾರ್ಯದರ್ಶಿಯಾಗಿದ್ದ ಮಂಜುಳ ನಟರಾಜ್ ಅವರನ್ನೂ ಲೋಕಾಯುಕ್ತ ಪೊಲೀಸರು ತನಿಖೆಗೆ ಒಳಪಡಿಸಬೇಕಾದ ಅನಿವಾರ್ಯತೆ ಎದುರಾಗಿದೆ.

**ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ವರದಿಯನ್ನು ಬದಿಗೆ ಸರಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಈ ಪ್ರಕರಣವನ್ನು ಕಾನೂನುಬದ್ಧವಾಗಿ ತನಿಖೆ ನಡೆಸಿ 3 ತಿಂಗಳ ಒಳಗೇ ವರದಿ ಸಲ್ಲಿಸಬೇಕು ಎಂದು ಲೋಕಾಯುಕ್ತ ಪೊಲೀಸರಿಗೆ ನಿರ್ದೇಶನ ನೀಡಿದ್ದಾರೆ.**

ಸರ್ಕಾರಿ ಖಜಾನೆಗೆ ಯಾವುದೇ ನಷ್ಟ ಉಂಟಾಗಿಲ್ಲ ಎಂದು ಮುಕ್ತಾಯ ವರದಿಯಲ್ಲಿ ಸೂಚಿಸಲಾಗಿದೆ. 'ಆದಾಗ್ಯೂ, ಈ ಅಂಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ, ಪ್ರತಿ ಮೆಟ್ರಿಕ್ ಟನ್ ರಫ್ತಿಗೆ 458 ರು.ಗಳನ್ನು ಪಾವತಿಸಬೇಕಾಗಿತ್ತು ಮತ್ತು ದೂರುದಾರರು ಲೆಕ್ಕಹಾಕಿದ ಅಂದಾಜು ನಷ್ಟ ಒಂಬತ್ತು ಕೋಟಿ ಹದಿನಾರು ಲಕ್ಷ ಎಂದು ಗಮನಿಸಲಾಗಿದೆ. ಪರವಾನಗಿದಾರರು ರಾಜ್ಯ ಸರ್ಕಾರ ಅಥವಾ ಅಬಕಾರಿ ಆಯುಕ್ತರು ಹೊರಡಿಸಬಹುದಾದ ಆದೇಶಗಳಿಗೆ ಬದ್ಧರಾಗಿದ್ದರು ಎಂಬುದನ್ನು ಸಹ ಗಮನಿಸುವುದು ಪ್ರಸ್ತುತವಾಗಿದೆ. ಆದಾಗ್ಯೂ, ಮೂಲಭೂತ ತತ್ವಗಳನ್ನು ಪಾಲಿಸದೆಯೇ ಆಕ್ಷೇಪಾರ್ಹ ಕೃತ್ಯವನ್ನು ಎಸಗಲಾಗಿದೆ,' ಎಂದು ನ್ಯಾಯಾಲಯವು ತೀರ್ಪಿನಲ್ಲಿ ವಿವರಿಸಿರುವುದು ಗೊತ್ತಾಗಿದೆ.

ಸಂಪೂರ್ಣ ದಾಖಲೆಗಳನ್ನು ಲಭ್ಯವಿರುವ ಸಾಮಗ್ರಿಗಳನ್ನು ಪರಿಶೀಲಿಸುವ ಮೂಲಕ, ಕರ್ನಾಟಕ ಲೋಕಾಯುಕ್ತ ನಡೆಸಿದ ತನಿಖೆ ಕಾನೂನಿಗೆ ಅನುಗುಣವಾಗಿಲ್ಲ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ ಎಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ್ ಭಟ್ ಹೇಳಿದರು.

ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆಯ ಉಪಾಧ್ಯಕ್ಷ ಮಂಜುನಾಥ ಎಸ್ ಸಲ್ಲಿಸಿದ ಖಾಸಗಿ ದೂರಿನ ತನಿಖೆಗೆ ನ್ಯಾಯಾಲಯ ಆದೇಶಿಸಿತು. ಲೋಕಾಯುಕ್ತ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ ನಂತರ ಅಕ್ಟೋಬರ್ 12, 2023 ರಂದು ಮುಕ್ತಾಯ ವರದಿಯನ್ನು ಸಲ್ಲಿಸಿದರು. ಆದರೆ ಮಂಜುನಾಥ್ ಅವರು ಅದು ಕಳಪೆ ಮತ್ತು ಸ್ಪಷ್ಟತೆಯ ಕೊರತೆಯಿದೆ ಎಂದು ವಾದಿಸಿ ಅದನ್ನು ಪ್ರಶ್ನಿಸಿದರು.

# ಗಣಿ ಬಾಧಿತ ಪ್ರದೇಶಕ್ಕೆ 1,200 ಕೋಟಿ ಹಂಚಿಕೆ: ಜಿ.ಪರಮೇಶ್ವರ

• **ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ತಾಲ್ಲೂಕಿನ ಗಣಿ ಬಾಧಿತ ಪ್ರದೇಶದ ಅಭಿವೃದ್ಧಿಗೆ 1,200 ಕೋಟಿ ಹಂಚಿಕೆಯಾಗಿದೆ. 150 ಮನೆ ಮಂಜೂರಾಗಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಹೇಳಿದರು. ಪಟ್ಟಣದಲ್ಲಿ ಮಂಗಳವಾರ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಶಾಲೆಗಳ ಅಭಿವೃದ್ಧಿಗೆ 90 ಕೋಟಿ ಅನುದಾನ ಬಿಡುಗಡೆಯಾಗಿದ್ದು, 78 ಕೋಟಿ ವೆಚ್ಚದ ಕಾಮಗಾರಿಗೆ ಅನುಮೋದನೆ ದೊರೆತಿದೆ. ನಿಗದಿತ ಅವಧಿಯಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸಬೇಕು. ಸರ್ಕಾರದಿಂದ ಬಡವರಿಗೆ ಮನೆ ಹಂಚಿಕೆ ಮಾಡಲಾಗುತ್ತಿದೆ. ನಿವೇಶನ, ಮನೆ ಇಲ್ಲದವರನ್ನು ಗುರುತಿಸಿ ಎಂದು ನಿರ್ದೇಶಿಸಿದರು. ಶಾಸಕ ಸಿ.ಬಿ.ಸುರೇಶ್ ಬಾಬು, ಹೇಮಾವತಿ ನಾಲೆ ಕಾಮಗಾರಿಗೆ 150 ಕೋಟಿ ಮಂಜೂರು ಮಾಡಬೇಕು. ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆ ಭರ್ತಿಗೆ ಕ್ರಮಕ್ಕೈಗೊಳ್ಳಬೇಕು.

ದಸೂಡಿ ಭಾಗಕ್ಕೆ ಪಶು ಆಸ್ಪತ್ರೆ ಮಂಜೂರು ಮಾಡಬೇಕು. ತಾಲ್ಲೂಕಿನಲ್ಲಿ ಕಾಲುಬಾಯಿ ರೋಗಕ್ಕೆ ಸರಿಯಾಗಿ ಔಷಧಿ ಸಿಗುತ್ತಿಲ್ಲ ಎಂಬ ವಿಚಾರ ಪ್ರಸ್ತಾಪಿಸಿದರು. ಕಂದಿಕೆರೆ, ಬೋರನಕಣಿವೆ ಭಾಗಕ್ಕೆ ಹೇಮಾವತಿ ನೀರು ಹರಿಸಲು ಅನುದಾನದ ಕೊರತೆಯಿದೆ. ಹೊಯ್ಸಳಕಟ್ಟೆ ಭಾಗಕ್ಕೆ ಪೊಲೀಸ್ ಠಾಣೆ, ಅಗ್ನಿಶಾಮಕ ಠಾಣೆ



ಉದಯವಾಹಿನಿ ಚಿತ್ರ

ಅವಶ್ಯಕತೆ ಇದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿ.ಪಂ ಸಿಇಒ ಜಿ.ಪ್ರಭು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಗೋಪಾಲ್, ಹೆಚ್ಚುವರಿ ಜಿಲ್ಲಾಧಿಕಾರಿ ಎನ್.ತಿಪ್ಪೇಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಚಂದ್ರಶೇಖರಗೌಡ ಇತರರು ಹಾಜರಿದ್ದರು.

ತೆಂಗಿನ ಮರಕ್ಕೆ ಬಿಳಿ ನೊಣ ಕಾಟ ಹೆಚ್ಚಾಗಿದ್ದು ಇಳುವರಿ ಕಡಿಮೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಬೇಕು ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ಒತ್ತಾಯಿಸಿದರು.

**ತೆಂಗು:** ಹೆಚ್ಚಿದ ಬಿಳಿನೊಣ ಬಾಧೆ' ಶೀರ್ಷಿಕೆಯಡಿ ಮೇ 12ರಂದು ಪ್ರಕಟವಾದ ವರದಿ ಪ್ರಸ್ತಾಪಿಸಿ ಮಾತನಾಡಿದರು. ಮಳೆ ಬಿರುಸು ಪಡೆದರೆ ಬಿಳಿ ನೊಣಗಳು ಉದುರಿ ಹೋಗುತ್ತವೆ. ರೋಗದ ನಿಯಂತ್ರಣಕ್ಕಾಗಿ ಅಗತ್ಯ ಕ್ರಮಕ್ಕೈಗೊಳ್ಳಲಾಗುತ್ತಿದೆ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

### ತಹಶೀಲ್ದಾರ್ ಸಹಿ ನಕಲು

**ನಕಲಿ ದಾಖಲೆ ಸೃಷ್ಟಿಸಿ ರೈತರ ಜಮೀನು ಮಾರಾಟ ಮಾಡಿ ಅವರನ್ನು ಬೀದಿಗೆ ತರುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಕೆಆರ್‌ಎಸ್ ಮುಖಂಡರು ಜಿ.ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿದರು. 'ಇತ್ತೀಚೆಗೆ ಡಿ-ಗ್ರೂಪ್ ನೌಕರರೊಬ್ಬರು ತಹಶೀಲ್ದಾರ್ ಸಹಿಯನ್ನೇ ನಕಲು ಮಾಡಿ ನಕಲಿ ಮರಣ ಪತ್ರ ಸೃಷ್ಟಿಸಿದ್ದರು. ನೌಕರನನ್ನು ತಾಲ್ಲೂಕು ಆಡಳಿತ ರಕ್ಷಣೆ ಮಾಡುತ್ತಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.**

## ಸ್ಥಳೀಯ ಉದ್ಯೋಗ ಸೃಷ್ಟಿಗೆ ಆದ್ಯತೆ: ಶಾಸಕ




ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬಂಗಾರಪೇಟೆ**

ಉದ್ಯೋಗ ಅರಸಿಕೊಂಡು ಪ್ರತಿನಿತ್ಯ ತಾಲ್ಲೂಕಿನ ಯುವಕ ಯುವತಿಯರು ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದಾರೆ. ಇದನ್ನು ತಪ್ಪಿಸುವ ಸ್ಥಳೀಯವಾಗಿ ಉದ್ಯೋಗ ಅವಕಾಶ ಸೃಷ್ಟಿಸಲು ಆದ್ಯತೆ ನೀಡಲಾಗುವುದು. ಈ ನಿಟ್ಟಿನಲ್ಲಿ ಕೈಗಾರಿಕಾ ವಲಯ ಮತ್ತು ಯೋಜಿತ ನಗರ ನಿರ್ಮಾಣ ಮಾಡಲು ಜಮೀನು ಗುರುತಿಸಿ, ಮಂಜೂರು ಮಾಡಲಾಗಿದ್ದು, ಅತಿ ಶೀಘ್ರದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಶಾಸಕ ಎಸ್.ಎನ್. ನಾರಾಯಣಸ್ವಾಮಿ ಹೇಳಿದರು. ತಾಲ್ಲೂಕಿನ ಡಿ.ಕೆ ಹಳ್ಳಿ ಗ್ರಾಮ ಪಂಚಾಯಿತಿಯಿಂದ ಮಂಗಳವಾರ ಆಯೋಜಿಸಿದ್ದ ಗ್ರಾಮ ಸಭೆಯಲ್ಲಿ ಮಾತನಾಡಿದರು.

ಭಾರತ್ ನಗರದಲ್ಲಿನ ಉದ್ಯಾನವನದಲ್ಲಿ 1 ಕೋಟಿ ಅನುದಾನದಲ್ಲಿ ಸಮುದಾಯ ಭವನವನ್ನು ನಿರ್ಮಿಸಲಾಗುವುದು. 3 ಕೋಟಿ ಅನುದಾನದಲ್ಲಿ ದಾಸರ ಹೊಸಹಳ್ಳಿ ಕೆರೆ ಅಭಿವೃದ್ಧಿ ಮಾಡಲಾಗುವುದು. 20 ಕೋಟಿ ವೆಚ್ಚದಲ್ಲಿ ಆಲದಮರದಿಂದ ಕೃಷ್ಣಾವರಂವರಿಗೆ ಡಬಲ್ ರಸ್ತೆ ನಿರ್ಮಿಸಿ, ಬೀದಿ ದೀಪಗಳನ್ನು ಅಳವಡಿಸಲಾಗುವುದು ಎಂದು ಭರವಸೆ ನೀಡಿದರು. ರಸ್ತೆ ಬದಿಯಲ್ಲಿ ಕಸ ಸುರಿಯುವುದರಿಂದ ವಾತಾವರಣ ಕಲುಷಿತಗೊಂಡು, ರೋಗರುಜಿನಗಳು ಬರುತ್ತವೆ. ಸಾರ್ವಜನಿಕರು ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ಕಸ ಸಂಗ್ರಹಿಸುವ ವಾಹನಕ್ಕೆ ನೀಡಬೇಕು. ಮನೆಮನೆಯಿಂದ ಕಸ ಸಂಗ್ರಹಿಸಲು ಶಾಸಕರ ವಿಶೇಷ ಅನುದಾನದಲ್ಲಿ ಎರಡು ಕಸದ ವಾಹನಗಳನ್ನು ನೀಡಲಾಗುವುದು. ನಗರವನ್ನು ಸ್ವಚ್ಛವಾಗಿಡಲು ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯ ಎಂದು ಹೇಳಿದರು.

ಕಾರ್ಯ ನಿರ್ವಹಣಾಧಿಕಾರಿ ಎಚ್. ರವಿ ಕುಮಾರ್, ಗ್ರಾಮಗಳಲ್ಲಿನ ವಾರ್ಡ್ ಸಭೆಗಳಲ್ಲಿ ನರೇಗಾ ಯೋಜನೆ ಮತ್ತು 15ನೇ ಹಣಕಾಸು ಯೋಜನೆಯಡಿ ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಚರಂಡಿ ಸ್ವಚ್ಛತೆ ಮತ್ತು ನೈರ್ಮಲ್ಯ, ಸಿಸಿ ರಸ್ತೆಗಳ ನಿರ್ಮಾಣ, ರಾಜ ಕಾಲುವೆಗಳು, ಕೆರೆ ಅಭಿವೃದ್ಧಿ, ಸಮುದಾಯ ಭವನ, ಉದ್ಯಾನವನಗಳ ಅಭಿವೃದ್ಧಿ, ಗೋ ಕಟ್ಟೆ, ಅಂಗನವಾಡಿ, ಶಾಲಾ ಶೌಚಾಲಯ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಕುಡಿಯುವ ನೀರಿನ ತೊಟ್ಟಿಗಳ ನಿರ್ಮಾಣ ಮುಂತಾದ ಕಾಮಗಾರಿಗಳಿಗೆ ಅನುಮೋದನೆ ಪಡೆಯುವ ಉದ್ದೇಶದಿಂದ ಗ್ರಾಮ ಸಭೆ ಆಯೋಜಿಸಲಾದೆ ಎಂದು ಹೇಳಿದರು.

### ಗ್ರಾಮಾಯಣ– ಮನೆಮನೆಗೆನಲ್ಲಿ ನೀರು, ಟ್ಯಾಂಕ್ ನೀರನ್ನು ಕೇಳುವವರಿಲ್ಲ

# ನಿರುಪಯುಕ್ತ ಕಿರು ಟ್ಯಾಂಕ್ ತೆರವಿಗೆ ಆಗ್ರಹ

• **ಉದಯವಾಹಿನಿ, ವೇಮಗಲ್:**

ವೇಮಗಲ್ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದ್ದು, ಪಟ್ಟಣದ ಅಭಿವೃದ್ಧಿ, ಅಂದದ ದೃಷ್ಟಿಯಿಂದ ಅನೇಕ ಕೆಲಸ ಕಾರ್ಯಗಳನ್ನು ಆರಂಭಿಸಲಾಗಿದೆ. ಆದರೆ ವೇಮಗಲ್‌ನ ಅಂದಕ್ಕೆ ಕುಂದು ತರುತ್ತಿರುವ ನಿರುಪಯುಕ್ತ ಕಿರು ನೀರಿನ ಟ್ಯಾಂಕ್‌ಗಳು ಮಾತ್ರ ದಾರಿಯ ಮಧ್ಯ ಮಧ್ಯ ಹಾಗೇ ನಿಂತಿವೆ.

ಆದರೆ ಈಗ ಟ್ಯಾಂಕಿನಿಂದ ಪ್ರತಿ ಮನೆಗೆ ನೀರಿನ ಕೊಳಾಯಿ ಹಾಗೂ ಬೀದಿ ಕೊಳವೆಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಮಿನಿ ಟ್ಯಾಂಗ್‌ಗಳು ಯಾವುದೇ ಉಪಯೋಗಕ್ಕೆ ಬರುತ್ತಿಲ್ಲ. ಈ ಟ್ಯಾಂಕ್‌ಗಳಿಗೆ ಈಗ ನೀರು ಸರಬರಾಜು ಕೂಡ ಮಾಡುತ್ತಿಲ್ಲ. ಯಾರೂ ಕೂಡ ಈ ಟ್ಯಾಂಕ್‌ಗಳ ನೀರನ್ನು ಬಳಸುತ್ತಿಲ್ಲ. ಆದ್ದರಿಂದ ಇವುಗಳನ್ನೆಲ್ಲ ತೆರುಗುಗೊಳಿಸಿದರೆ ಪಟ್ಟಣದ ಅಂದ ಹೆಚ್ಚುತ್ತದೆ ಎನ್ನುವುದು ಸ್ಥಳೀಯರವಾದ. ಪಟ್ಟಣದ ಚಿಕ್ಕ ಚಿಕ್ಕ ರಸ್ತೆಗಳ ಪಕ್ಕದಲ್ಲಿಯೇ ಕಿರು ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿರುವುದರಿಂದ ರಸ್ತೆಗಳು ಇಕ್ಕಟ್ಟಾಗಿವೆ. ದೊಡ್ಡ ದೊಡ್ಡ ವಾಹನಗಳ ಬಂದರೆ ಸುಗಮವಾಗಿ ಪಾಸ್ ಆಗಲು ಇದರಿಂದ ಅಡೆತಡೆ ನಿರ್ಮಾಣವಾಗುತ್ತದೆ. ಅದೂ ಅಲ್ಲದೆ ಕೆಲವೊಂದು ಕಡೆ ಈ ಮಿನಿ ಟ್ಯಾಂಕ್‌ಗಳ ಮೇಲ್ಭಾಗ ಮುಚ್ಚಳವೇ ಇಲ್ಲ. ಮಳೆ ಬಂದಾಗ ಇದರಲ್ಲಿ ನೀರು ಶೇಖರಣೆಗೊಂಡು ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗುತ್ತದೆ. ಗಾಳಿಗೆ ಮರಗಿಡಗಳ ಎಲೆ, ಕಸಕಡ್ಡಿ ಬಿದ್ದು ನೀರಿನ ಜೊತೆ ಸೇರಿ ಕೊಳೆತು ಕಬ್ಬು ವಾಸನೆ ಬರುತ್ತದೆ.

ವೇಮಗಲ್‌ನ ಬಸ್ ನಿಲ್ದಾಣದ ಸಮೀಪ, ನರಸಾಪುರ ಸರ್ಕಲ್‌ನಲ್ಲಿರುವ ಮಿನಿ ನೀರಿನ ಟ್ಯಾಂಕ್ ರಸ್ತೆಯ ಜಾಗವನ್ನು ಆವರಿಸಿರುವುದರಿಂದ ರಾಜ್ಯ ಹೆದಾರಿ ಮುಖ್ಯ ರಸ್ತೆಯ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಲು ತೊಂದರೆಯಾಗುತ್ತದೆ.




ಉದಯವಾಹಿನಿ ಚಿತ್ರ

**ಟ್ಯಾಂಕ್ ನೀರನ್ನು ಬಳಸುತ್ತಿಲ್ಲ**

**ಈ ಹಿಂದೆ ಮನೆಮನೆಗೆ ಕೊಳಾಯಿ ಸಂಪರ್ಕ ಇಲ್ಲದಿದ್ದ ಸಂದರ್ಭದಲ್ಲಿ ಕಿರುಟ್ಯಾಂಕ್ ನಿರ್ಮಿಸಿ ನೀರು ಸರಬರಾಜು ಮಾಡುತ್ತಿದರು. ಈಗ ಪ್ರತಿ ಮನೆಗೂ ಕೊಳವೆ ಸಂಪರ್ಕವಿದ್ದು ಜನ ಇದನ್ನು ಬಳಸುತ್ತಿಲ್ಲ. ಶೀಘ್ರದಲ್ಲಿ ಅನುಪಯುಕ್ತವಾದ ಟ್ಯಾಂಕ್‌ಗಳನ್ನು ತೆರವುಗೊಳಿಸಲಾಗುವುದು**

**- ವೆಂಕಟೇಶ್**
**ವೇಮಗಲ್ ಕುರುಗಲ್ ಪ.ಪಂ ಮುಖ್ಯಾಧಿಕಾರಿ**

**ಮಿನಿ ಟ್ಯಾಂಕರ್‌ಗಳು ಈಗ ಉಪಯೋಗಕ್ಕೆ ಇಲ್ಲ. ಯಾವ ಟ್ಯಾಂಕಿಗೂ ನೀರಿನ ಪೂರೈಕೆ ಇಲ್ಲ ಬಳಕೆಯೂ ಇಲ್ಲ. ರಸ್ತೆಯ ಜಾಗ ವ್ಯರ್ಥವಾಗಿದೆ. ಸೊಳ್ಳೆಗಳಿಂದ ರೋಗಗಳಿಗೂ ಕಾರಣವಾಗಬಹುದು. ಪ.ಪಂ ಅಧಿಕಾರಿಗಳು ಕೂಡಲೇ ತೆರವುಗೊಳಿಸಬೇಕು**

**-ಕಲ್ವಮಂಜಲಿ ರಾಮು ಶಿವಣ್ಣ**
**ಸ್ಥಳೀಯ ಮುಖಂಡ**

### ಆರಂಭದಲ್ಲಿ ಇದಕ್ಕೆ ಪೈಪ್ ಸಂಪರ್ಕ

**ವೇಮಗಲ್ ಗ್ರಾಮ ಪಂಚಾಯಿತಿಯಾಗಿದ್ದ ಸಂದರ್ಭದಲ್ಲಿ ಮನೆಮನೆಗೂ ನಳದ ಸಂಪರ್ಕವನ್ನು ಕಲ್ಪಿಸಿರಿರಲಿಲ್ಲ, ಹೀಗಾಗಿ ಎರಡು ಬೀದಿಗೆ ಒಂದರಂತೆ ಕಿರು ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿತ್ತು. ಆರಂಭದಲ್ಲಿ ಇದಕ್ಕೆ ಪೈಪ್ ಸಂಪರ್ಕ ಕಲ್ಪಿಸಿ ನಲ್ಲಿಗಳನ್ನು ಜೋಡಿಸಿ ನೀರು ಪೂರೈಸಲಾಗುತ್ತಿತ್ತು. ಜನ ಇದರಲ್ಲಿನ ನೀರನ್ನೇ ಅವಲಂಬಿಸಿದ್ದರು.**

ಇನ್ನು ಚಿಕ್ಕಬಳ್ಳಾಪುರ ಮುಖ್ಯ ರಸ್ತೆಯಲ್ಲಿರುವ ಮಿನಿ ನೀರಿನ ಟ್ಯಾಂಕ್ ಸುತ್ತಲು ಕಸ ತುಂಬಿಕೊಂಡಿದ್ದು, ಸೊಳ್ಳೆ ಹಾಗೂ ಗಬ್ಬು ವಾಸನೆಗೆ ಕಾರಣವಾಗಿದೆ. ಬಿ2 ಬ್ಲಾಕ್‌ನ ಮುಖ್ಯ ರಸ್ತೆಯಲ್ಲಿ ಮಿನಿ ಟ್ಯಾಂಕ್ ಇದ್ದು, ಇದೂ ಕೂಡ ಯಾರಿಗೂ ಪ್ರಯೋಜನವಿಲ್ಲ. ಪಟ್ಟಣದ ಒಳಭಾಗದ ರಸ್ತೆಗಳಲ್ಲಿ ಇಂತಹ ಸುಮಾರು ಹತ್ತಕ್ಕೂ ಹೆಚ್ಚು ಉಪಯೋಗಕ್ಕೆ ಬಾರದ ಮಿನಿ ನೀರಿನ ಟ್ಯಾಂಕ್‌ಗಳಿದ್ದು ಪಟ್ಟಣ ಪಂಚಾಯಿತಿಯು ಕೂಡಲೇ ಇವುಗಳನ್ನು ತೆರವುಗೊಳಿಸಬೇಕು ಎಂದು ಪಟ್ಟಣದ ನಿವಾಸಿಗಳು ಆಗ್ರಹಿಸಿದ್ದಾರೆ.

## ನಗರದ ಅಭಿವೃದ್ಧಿಗೆ 13 ಕೋಟಿ ಬಿಡುಗಡೆ

• **ಉದಯವಾಹಿನಿ, ನಂಜನಗೂಡು**

ಇಲ್ಲಿ ಮಂಗಳವಾರ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ 46 ವಿಷಯಗಳ ಬಗ್ಗೆ ಸದಸ್ಯರುಗಳು ನಿರ್ಣಯ ಕೈಗೊಂಡರು ಅಧ್ಯಕ್ಷ ಶ್ರೀಕಂಠಸ್ವಾಮಿ, ಆಯುಕ್ತ ವಿಜಯ್ ಕುಮಾರ್ ಮಾತನಾಡಿ, ನಗರದ 31 ವಾರ್ಡ್‌ಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ತಲಾ 10 ಲಕ್ಷ ಅನುದಾನ ನೀಡಲು ತೀರ್ಮಾನಿಸಲಾಯಿತು.

ಕಾಮಗಾರಿಗಳಿಗಾಗಿ ನಗರಸಭಾ ನಿಧಿಯಿಂದ 7.5 ಕೋಟಿ, 15ನೇ ಹಣಕಾಸು ನಿಧಿಯಿಂದ 3 ಕೋಟಿ, ಎಸ್‌ಎಫ್‌ಸಿ ನಿಧಿಯಿಂದ 50 ಲಕ್ಷ ಹಾಗೂ ಉಳಿಕೆ ಅನುದಾನದಿಂದ 1 ಕೋಟಿ ಸೇರಿದಂತೆ 13 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲು ಸಭೆ ಅನುಮೋದನೆ ನೀಡಿದೆ ಎಂದರು. ಸದಸ್ಯ ಎಚ್.ಎಸ್.ಮಹದೇವಸ್ವಾಮಿ ಮಾತನಾಡಿ, ನಗರದ ನ್ಯಾಯಾಲಯ, ದೇವಿರ ಮ್ಮನಹಳ್ಳಿ



ಉದಯವಾಹಿನಿ ಚಿತ್ರ

ವೃತ್ತ, ಚಿಂತಾಮಣಿ ಗಣಪತಿ ಬಸ್ ಶೆಲ್ಟರ್ ಬಳಿ ಅನಧಿಕೃತವಾಗಿ ಹಾಲಿನ ಬೂತ್‌ಗಳು ನಿರ್ಮಾಣವಾಗಿವೆ, ನಗರಸಭೆಗೆ ಅರ್ಜಿ ಸಲ್ಲಿಸಿದ ದಾಖಲೆಯಿಲ್ಲ. ಈ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು. ಸದಸ್ಯರಾದ ಸಿದ್ದರಾಜು, ಖಾಲೀದ್ ಅಹಮ್ಮದ್ ಕಲಾಪದಲ್ಲಿ ಪ್ರತಿಭಟನೆ ನಡೆಸಿದರು.

ಆಯುಕ್ತ ಮಾತನಾಡಿ ಸಭೆಯಲ್ಲಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಹಾನ ಬಾನು ಹಾಗೂ ಸದಸ್ಯರು ಅಭಿವೃದ್ಧಿ ಕಾಮಗಾರಿಗಳಿಗೆ ಒಪ್ಪಿಗೆ ನೀಡಿದ್ದು, ಟೆಂಡರ್ ಆರಂಭಿಸಲಾಗುವುದು, ಶಾಸಕ ದರ್ಶನ್ ಧ್ರುವನಾರಾಯಣ್ ಮಾರ್ಗ ದರ್ಶನದಂತೆ ಯೋಜನೆಗಳಿಗೆ ಒಪ್ಪಿಗೆ ಪಡೆಯಲಾಗಿದೆ ಎಂದು ಹೇಳಿದರು.

**ನಗರದ ರಾಷ್ಟ್ರಪತಿ ರಸ್ತೆಯ ಭಾರ್ಗವಿ ಚಿತ್ರಮಂದಿರದ ಬಳಿ ರೈಲ್ವೆ ಮೇಲೇತುವೆ ನಿರ್ಮಾಣ ಕಾಮಗಾರಿಯ ಬಗ್ಗೆ ಮಾತನಾಡಿ, ಮೇಲೇತುವೆ ಬಗ್ಗೆ ರೈಲ್ವೆಯಿಂದ ಮಾಹಿತಿ ಪಡೆದು, ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ನಗರದ ಆರ್.ಪಿ ಮತ್ತು ಎಂ.ಜಿ.ಎಸ್ ರಸ್ತೆಗಳಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಫುಟ್‌ಪಾತ್ ತೆರವು ಕಾರ್ಯಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.**

## ಸರ್ಕಾರಿ ಶಾಲೆ ಉಳಿಸಲು ಸಹಿ ಸಂಗ್ರಹ ಎಐಡಿಎಸ್‌ಒ ಕಾರ್ಯಕರ್ತರಿಂದ ಅಭಿಯಾನ

• **ಉದಯವಾಹಿನಿ, ಮೈಸೂರು**

ರಾಜ್ಯ ಸರ್ಕಾರ 473 ಖಾಸಗಿ ಶಾಲೆ ತೆರೆಯಲು ಅನುಮತಿ ನೀಡುವ ಮೂಲಕ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹುನ್ನಾರ ನಡೆಸಿದೆ' ಎಂದು ಆರೋಪಿಸಿ, ಸರ್ಕಾರಿ ಶಾಲೆಗಳ ಉಳಿವಿಗೆ ಕ್ರಮವಹಿಸುವಂತೆ ಒತ್ತಾಯಿಸಿ ಎಐಡಿಎಸ್‌ಒ ಮೈಸೂರು ಜಿಲ್ಲಾ ಸಮಿತಿ ಸದಸ್ಯರು ನಗರದ ರೈಲು ನಿಲ್ದಾಣದ ಬಳಿ ಸೋಮವಾರ ಸಹಿ ಸಂಗ್ರಹ ಅಭಿಯಾನ ನಡೆಸಿದರು. ಸಂಘಟನೆಯ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಕಡಿಮೆ ದಾಖಲಾತಿ ನೆಪವೊಡ್ಡಿ 6,200ಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ. ಈ ನಡುವೆಯೇ ಸರ್ಕಾರ ಖಾಸಗಿ ಶಾಲೆ ತೆರೆಯಲು ಅನುಮತಿ ನೀಡಿದೆ ಎಂದು ದೂರಿದರು.

ಮೂಲ ಸೌಕರ್ಯಗಳಿಂದ ಸೊರಗಿರುವ ಶಾಲೆಗಳಲ್ಲಿ ಮುಖ್ಯಶಿಕ್ಷಕರನ್ನೂ ಒಳಗೊಂಡಂತೆ ಒಬ್ಬಿಬ್ಬ ಶಿಕ್ಷಕರು ಮಾತ್ರ ಇರುತ್ತಾರೆ. 50 ಸಾವಿರ ಶಿಕ್ಷಕ ಹುದ್ದೆಗಳು ಖಾಲಿ ಇವೆ. ಅವುಗಳ ಭರ್ತಿ ಮಾಡಿಲ್ಲ ಎಂದರು. ಕಳೆದ ಆರು ವರ್ಷದಲ್ಲಿ




ಉದಯವಾಹಿನಿ ಚಿತ್ರ

3,378 ಖಾಸಗಿ ಶಾಲೆಗಳಿಗೆ ಸರ್ಕಾರ ಪರವಾನಗಿ ನೀಡಿದೆ. ಸರ್ಕಾರಿ ಶಾಲೆಗಳನ್ನು ಮುಚ್ಚುವ ತೀರ್ಮಾನದಿಂದ ಹಿಂದೆ ಸರಿಯಬೇಕು. ದಿನಗೂಲಿ ಕಾರ್ಮಿಕ, ಕಟ್ಟಡ ಕಾರ್ಮಿಕರ ಮತ್ತು ಬಡ ರೈತರ ಮಕ್ಕಳು ಓದಲು ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು ಎಂದು ಒತ್ತಾಯಿಸಿದರು.

ಸಂಘಟನೆಯ ಜಿಲ್ಲಾ ಸಮಿತಿ ಅಧ್ಯಕ್ಷೆ ಚಂದ್ರಕಲಾ, ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಚಂದನಾ, ಚಂದ್ರಿಕಾ, ಹೇಮಾ, ದಿಶಾ, ಅಂಜಲಿ, ಕಾರ್ಯಕರ್ತರಾದ ದೀಕ್ಷಾ, ಆರತಿ, ಪ್ರಿಯಾಂಕಾ, ಚೈತ್ರಾ ಇದ್ದರು.

## 66 ಕೆವಿ ವಿದ್ಯುತ್ ವಿನಿಮಯ ಕೇಂದ್ರ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗೋಣಿಕೊಪ್ಪಲು**

ಹುದಿಕೇರಿಯಲ್ಲಿ 66 ಕೆವಿ ವಿದ್ಯುತ್ ವಿನಿಮಯ ಕೇಂದ್ರ ನಿರ್ಮಾಣಗೊಳ್ಳಲಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು. ಬಿರುನಾಣಿ ಗ್ರಾಮ ಪಂಚಾಯತಿ ವ್ಯಾಪ್ತಿಯ ತೆರಾಲು ಗ್ರಾಮದಲ್ಲಿ 15 ಲಕ್ಷ ವೆಚ್ಚದಲ್ಲಿ ನಡೆಯಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಕಾಮಗಾರಿ ನಡೆಸಲು ಟೆಂಡರ್ ಪ್ರಕ್ರಿಯೆ ಮುಗಿದಿದೆ. ಹುದಿಕೇರಿಯಿಂದ ಬಿರುನಾಣಿಗೆ 33 ಕೆವಿ ಫೀಡರ್ ಮೂಲಕ ಪ್ರತ್ಯೇಕ ವಿದ್ಯುತ್ ವಿನಿಮಯ ಕೇಂದ್ರ ಸ್ಥಾಪಿಸಲು ಯೋಜನೆ ರೂಪಿಸಲಾಗುವುದು. ಇದರಿಂದಾಗಿ ಈ ವ್ಯಾಪ್ತಿಯ ಬಹುಕಾಲದ ವಿದ್ಯುತ್ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಗ್ರಾಮಸ್ಥರು ತೆರಾಲು ಗ್ರಾಮದಲ್ಲಿ 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆ ಅಡಿ ನಿರ್ಮಾಣಗೊಳ್ಳುತ್ತಿರುವ ರಸ್ತೆ ಕಾಮಗಾರಿ ಕಳಪೆ ಮಟ್ಟದಾಗಿದೆ ಎಂದು ಸ್ಥಳೀಯರ ದೂರನ್ನು ಪರಿಶೀಲಿಸಿದ ಶಾಸಕ ಪೊನ್ನಣ್ಣ ಗುತ್ತಿಗೆದಾರರಿಗೆ ಮರು ಡಾಂಬರೀಕರಣ ಮಾಡುವಂತೆ ಖಡಕ್ ಸೂಚನೆ ನೀಡಿದರು.

## ಕಾವೇರಿ ನದಿಯಿಂದ 12 ಗ್ರಾಮಗಳ ಕೆರೆ, ಕಟ್ಟೆಗೆ ನೀರು: ಶಾಸಕ

• **ಉದಯವಾಹಿನಿ, ಶ್ರೀರಂಗಪಟ್ಟಣ**

ತಾಲ್ಲೂಕಿನ ಅರಕೆರೆ ಹೋಬಳಿಯ 12 ಗ್ರಾಮಗಳ ಕೆರೆ-ಕಟ್ಟೆಗಳಿಗೆ ಕಾವೇರಿ ನದಿಯಿಂದ ನೀರು ತುಂಬಿಸುವ ಯೋಜನೆ ಈ ವರ್ಷಾಂತ್ಯಕ್ಕೆ ಅನುಷ್ಠಾನಗೊಳ್ಳಲಿದೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ತಾಲ್ಲೂಕಿನ ಅರಕೆರೆ, ನೇರಲಕೆರೆ, ಕಾಲ್ಕೆರೆ, ಮಾರಸಿಂಗನಹಳ್ಳಿ, ಗಾಮ ನಹಳ್ಳಿ ಇತರ ಗ್ರಾಮ ಗಳಿಗೆ ಕಾವೇರಿ ನೀರಾವರಿ ನಿಗಮ ಮತ್ತು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳ ಜತೆ ಭೇಟಿ ನೀಡಿ ಆಯಾ ಗ್ರಾಮಗಳ ರೈತರ ಜತೆ ಅವರು ಚರ್ಚಿಸಿದರು.

ಈ ಭಾಗದ ಕೆರೆ, ಕಟ್ಟೆಗಳಿಗೆ ನೀರು ತುಂಬಿಸಬೇಕು ಎಂಬುದು ನನ್ನ ತಂದೆ, ಮಾಜಿ ಸಚಿವ ಎ.ಎಸ್. ಬಂಡಿಸಿದ್ದೇಗೌಡ ಅವರ ಆಶಯವಾಗಿತ್ತು. ಈ ಯೋಜನೆ ಅನುಷ್ಠಾನಕ್ಕೆ ಕಾಲ ಕೂಡಿ ಬಂದಿದೆ ಎಂದು ಹೇಳಿದರು.

ಕಾವೇರಿ ನದಿಯಿಂದ ಕೆರೆ, ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೆ. ತಕ್ಷಣ ಸ್ಪಂದಿಸಿದ ಅವರು ಈ ಯೋಜನೆಗೆ 35 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**35 ಕೋಟಿ ಅನುದಾನ**

**ಮಂಡ್ಯಕೊಪ್ಪಲು ಬಳಿ ಕಾವೇರಿ ನದಿಯಿಂದ, ಏತ ನೀರಾವರಿ ಯೋಜನೆ ಮೂಲಕ ನೇರಲಕೆರೆ ಮಾರ್ಗವಾಗಿ ಮೊತ್ತಹಳ್ಳಿ ವರೆಗೂ ನೀರು ಕೊಂಡೊಯ್ಯಲಾಗುತ್ತದೆ. ಇದರಿಂದ ಮಳೆಯಾಶ್ರಿತ ಗ್ರಾಮಗಳ ಜನ, ಜಾನುವಾರುಗಳಿಗೆ ಬೇಸಿಗೆಯಲ್ಲೂ ನೀರು ಸಿಗಲಿದೆ. ಕೃಷಿಗೂ ಅನುಕೂಲವಾಗಲಿದೆ ಎಂದು ತಿಳಿಸಿದರು.**

# ಬೆಂಬಲ ಬೆಲೆ ಕೇಂದ್ರದಲ್ಲಿ ರೈತರಿಗೆ ಶೋಷಣೆ

### ರಾಗಿ ಬೆಳೆದು ತಂದ ತಾಲ್ಲೂಕಿನ ರೈತರ ಆರೋಪ

• **ಉದಯವಾಹಿನಿ, ಹುಣಸೂರು**

ತಾಲ್ಲೂಕಿನಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಬೆಳೆದಿರುವ ರಾಗಿ ಬೆಳೆಯನ್ನು ಬೆಂಬಲ ಬೆಲೆಗೆ ಮಾರಾಟ ಮಾಡುವ ಸಂದರ್ಭದಲ್ಲಿ ಖರೀದಿ ಕೇಂದ್ರದಲ್ಲಿ ರೈತರನ್ನು ಶೋಷಿಸಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ನಗರದ ಎಪಿಎಂಸಿ ಕೇಂದ್ರದಲ್ಲಿ ರಾಜ್ಯ ಕೃಷಿ ಮಾರಾಟ ಮಂಡಳಿಯು ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸುತ್ತಿದೆ. ಮಂಡಳಿಯ ಸೂಚನೆಯಂತೆ ಮಾರುಕಟ್ಟೆಗೆ ತರುವ ರೈತರನ್ನು ಸಿಬ್ಬಂದಿ ಶೋಷಿಸುತ್ತಿದ್ದಾರೆ. ಲೋಡರ್‌ನಿಂದ ಅಧಿಕಾರಿವರೆಗೆ ಲಂಚದ ಹಾವಳಿ ಹೆಚ್ಚಿದೆ ಎಂದು ರೈತರು ಆರೋಪಿಸಿದ್ದಾರೆ.

ನಗರದ ಎಪಿಎಂಸಿ ಆವರಣದಲ್ಲಿರುವ ಖರೀದಿ ಕೇಂದ್ರಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ರೈತರು ಸಮಸ್ಯೆಗಳು ಗಮನ ಸೆಳೆದರು. ರೈತರು ತರುವ ರಾಗಿ ಕುರಿತು ತಕರಾರು ಮಾಡುವ ಅಧಿಕಾರಿಗಳು, ದಲ್ಲಾಳಿಗಳು ತರುವ ರಾಗಿಯನ್ನು ಚಕಾರವೆತ್ತದೆ ಖರೀದಿಸುತ್ತಿದ್ದಾರೆ. ಲೋಡರ್‌ಗಳಿಗೆ ಪ್ರತಿ ಚೀಲಕ್ಕೆ ರೈತರು 15 ನೀಡಬೇಕು. ಇದಲ್ಲದೆ ಹೆಚ್ಚುವರಿ ಬೆಳೆದ ರಾಗಿ ಹಣ ನೀಡಿದರಷ್ಟೇ ಖರೀದಿಸುತ್ತಾರೆ ಎಂದು ಹಳ್ಳಿಕೆರೆ ಗ್ರಾಮದ ರೈತ ವೀರೇಂದ್ರ ದೂರಿದರು. ಕಟ್ಟೆಮಳಲವಾಡಿ ಗ್ರಾಮದ



ಉದಯವಾಹಿನಿ ಚಿತ್ರ

**ದಲ್ಲಾಳಿಗಳ ಹಾವಳಿ ನಿಯಂತ್ರಣ ಸಾಧ್ಯವಿಲ್ಲ**

ರೈತ ಬಸವ ಮಾತನಾಡಿ, ಕೃಷಿ ಇಲಾಖೆಯಿಂದ ನಡೆದ ಬೆಳೆ ಸಮೀಕ್ಷೆಯಲ್ಲಿ ಲೋಪವಾಗಿದೆ.

ರಾಗಿ ಬೆಳೆಯದವರ ಪಹಣಿಯಲ್ಲೂ ಅಧಿಕಾರಿಗಳು ರಾಗಿ ಎಂದು ನಮೂದಿಸಿದ್ದು, ಇದರಿಂದ ದಲ್ಲಾಳಿಗಳಿಗೆ ಪರೋಕ್ಷವಾಗಿ ಅಧಿಕಾರಿಗಳು ಸಹಕರಿಸಿದ್ದಾರೆ.

**ಕೇಂದ್ರದಲ್ಲಿ ರೈತರನ್ನು ಶೋಷಿಸುವ ಪ್ರಶ್ನೆಯೇ ಇಲ್ಲ, ಎಪಿಎಂಸಿ ನಿಯಮಾನುಸಾರ ಖರೀದಿ ನಡೆಯುತ್ತಿದೆ. ಲೋಡಿಂಗ್ ಟೆಂಡರ್ ಪಡೆದಿರುವವರಿಂದ ಶೋಷಣೆ ನಡೆದಿದ್ದರೆ ನಮ್ಮ ವ್ಯಾಪ್ತಿಗೆ ಬಾರದು.**

**-ಸುರೇಶ್ ಬಾಬು,**
**ರಾಗಿ ಖರೀದಿ ಕೇಂದ್ರದ ಅಧಿಕಾರಿ.**

ನಿಜವಾದ ಬೆಳೆಗಾರರಿಗೆ ಮಾನ್ಯತೆ ಇಲ್ಲವಾಗಿದೆ ಎಂದರು. ರಾಗಿಯಲ್ಲಿ ಹೊಟ್ಟು (ಧೂಳು) ಇದೆ ಎಂದು ಸಿಬ್ಬಂದಿ ತಿರಸ್ಕರಿಸುವ ಭೀತಿಯೂ ಮೂಡಿದೆ. ರಾಗಿ ಕಟಾವು ಮುಗಿದು 7 ತಿಂಗಳಾಗಿದೆ. ಮನೆಯಲ್ಲೇ ಸಂಗ್ರಹಿಸಿದ ರಾಗಿಯನ್ನು ಖರೀದಿಸಲು ತಕರಾರು ಮಾಡುತ್ತಾರೆ' ಎಂದು ಕಳ್ಳಿಕೊಪ್ಪಲು ಗ್ರಾಮದ ಪ್ರಗತಿಪರ ರೈತ ಚಂದ್ರೇಗೌಡ ಆತಂಕ ವ್ಯಕ್ತಪಡಿಸುವರು. ತಟ್ಟೆಕೆರೆ ರಾಮಕೃಷ್ಣ ಮಾತನಾಡಿ, ಹನಗೋಡು ಹೋಬಳಿ ಭಾಗದಲ್ಲಿ ಪೋಡು ಮಾಡದ ಕಾರಣ ಒಂದೇ ಸರ್ವೆ ನಂಬರ್‌ನಲ್ಲಿ ನೂರಾರು ಎಕರೆ ಇದ್ದು, ದಲ್ಲಾಳಿಗಳು ಲಾಭಕ್ಕೆ ಬಳಸಿಕೊಂಡಿದ್ದಾರೆ. ಈ ಲೋಪ ಸರಿಯಾಗದ ಹೊರತು ರಾಗಿ ಖರೀದಿ ಕೇಂದ್ರ ದಲ್ಲಿ ದಲ್ಲಾಳಿಗಳ ಹಾವಳಿ ನಿಯಂತ್ರಣ ಸಾಧ್ಯವಿಲ್ಲ ಎಂದು ವಿವರಿಸಿದರು. ರೈತರು ಫಸಲನ್ನು ನೆಮ್ಮದಿಯಿಂದ ಮಾರಾಟ ಮಾಡುವ ವಾತಾವರಣವನ್ನು ಮಂಡಳಿ ಸೃಷ್ಟಿಸಬೇಕು ಎಂಬುದು ಈ ರೈತರ ಆಗ್ರಹ.

**ರಾಗಿ ಬೆಳೆದ ರೈತರಿಗೆ ಆಧಾರ್ ಕಾರ್ಡ್ ಮಾದರಿಯಲ್ಲಿ ಕೃಷಿ ಇಲಾಖೆಯು ಗುರುತಿನ ಕಾರ್ಡ್ ನೀಡುವುದರಿಂದ ಖರೀದಿ ಕೇಂದ್ರದಲ್ಲಿ ನಡೆಯುವ ಅನ್ಯಾಯ, ದಲ್ಲಾಳಿಗಳ ನಿಯಂತ್ರಣದಿಂದ ಶೋಷಣೆ ತಗ್ಗಿಸಬಹುದು.**

**-ಗೋವಿಂದೇಗೌಡ,**
**ನಿಲುವಾಗಿಲು ಪ್ರಗತಿಪರ ರೈತ**

## ಮಿನಿ ನ್ಯೂಸ್

### ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮದ ಎಚ್ಚರಿಕೆ: ಪಿಎಸ್‌ಐ

• **ಉದಯವಾಹಿನಿ, ಕೊರಟಗೆರೆ**

ಇತ್ತೀಚೆಗೆ ನಡೆದ ಭಾರತ, ಪಾಕಿಸ್ತಾನ ಯುದ್ಧ ಬೆಳವಣಿಗೆಗೆ ಸಂಬಂಧಿಸಿದಂತೆ ದೇಶದ ಸೈನಿಕರು ಸೂಕ್ತ ಕ್ರಮ ಕೈಗೊಂಡಿದ್ದು, ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಸುದ್ದಿಗಳಿಂದ ಯಾರೂ ಪ್ರಚೋದನೆಗೆ ಒಳಗಾಗದೆ ಎಚ್ಚರವಹಿಸಬೇಕು ಎಂದು ಪಿಎಸ್‌ಐ ವೈ.ಜಿ.ತೀರ್ಥೇಶ್ ತಿಳಿಸಿದರು.

ಪಟ್ಟಣದಲ್ಲಿ ಸಾರ್ವಜನಿಕರ ಸಭೆಯಲ್ಲಿ ಮಾತನಾಡಿದ ಅವರು, ದೇಶದ ಪ್ರಜೆಗಳಿಗೆ ಯಾವುದೇ ತೊಂದರೆಯಾಗದಂತೆ ಈಗಾಗಲೇ ಸೈನಿಕರು ಅಗತ್ಯ ಕ್ರಮ ಕೈಗೊಂಡಿದ್ದಾರೆ. ಅನೇಕ ಸುಳ್ಳು ಸುದ್ದಿಗಳನ್ನು ಹರಿಬಿಡಲಾಗುತ್ತಿದೆ. ಅಂತಹವರ ವಿರುದ್ಧ ಅಗತ್ಯ ಕಾನೂನು ಕ್ರಮ ವಹಿಸಲಾಗುವುದು. ಆದರೆ ಇಂತಹ ಪ್ರಚೋದನಕಾರಿ, ಸುಳ್ಳು ಸುದ್ದಿಗಳ ಬಗ್ಗೆ ಸಾರ್ವಜನಿಕರು ಭಯ ಪಡದೆ ಸದಾ ಎಚ್ಚರದಿಂದ ಇರಬೇಕು ಎಂದು ಅರಿವು ಮೂಡಿಸಿದರು. ಸಿಪಿಐ ಆರ್.ಪಿ. ಅನಿಲ್, ಪಿಎಸ್‌ಐ ಬಸವರಾಜು, ಎಎಸ್‌ಐ ನಾಗರಾಜು, ಸಿಬ್ಬಂದಿ ಪ್ರದೀಪ್, ಚೆನ್ನಮಲ್ಲಿಕಾರ್ಜುನ, ದೊಡ್ಡಲಿಂಗಯ್ಯ ಹಾಜರಿದ್ದರು.

### ಲಂಚಕ್ಕೆ ಬೇಡಿಕೆ- ಲೋಕಾಯುಕ್ತ ಬಲೆಗೆ ಕೋಡ್ಲಾಪುರ ಪಿಡಿಒ

• **ಉದಯವಾಹಿನಿ, ಕೊಡಿಗೇನಹಳ್ಳಿ**

ಆಸ್ತಿ ಖಾತೆ ಮಾಡಿಕೊಡಲು ಲಂಚ ತೆಗೆದುಕೊಳ್ಳುವ ಸಮಯದಲ್ಲಿ ಪುರವರ ಹೋಬಳಿಯ ಕೋಡ್ಲಾಪುರ ಗ್ರಾಮ ಪಂಚಾಯಿತಿ ಪಿಡಿಒ ಪುಂಡಲೀಕ ಬೊಮ್ಮಗೊಂಡ ಅವರು ಲೋಕಾಯುಕ್ತ ಪೊಲೀಸರಿಗೆ ಮಂಗಳವಾರ ಸಿಕ್ಕಿ ಬಿದ್ದಿದ್ದಾರೆ. ವೀರನಾಗೇನಹಳ್ಳಿ ಗ್ರಾಮದ ಆನಂದ್ ಅವರು ಮನೆಯ ಇ-ಖಾತೆಗಾಗಿ ಅರ್ಜಿ ಸಲ್ಲಿಸಿದ್ದರು. ಖಾತೆ ಮಾಡಿಕೊಡಲು ಹಣಕ್ಕೆ ಬೇಡಿಕೆ ಇಟ್ಟಿದ್ದು, ಪಿಡಿಒ ಪುಂಡಲೀಕ ಬೊಮ್ಮಗೊಂಡ ಅವರಿಗೆ 6 ಸಾವಿರ ನೀಡುವಾಗ ಲೋಕಾಯುಕ್ತ ಎಸ್ಪಿ ಲಕ್ಷ್ಮಿನಾರಾಯಣ ನೇತೃತ್ವದ ತಂಡ ದಾಳಿ ನಡೆಸಿದೆ.

ಮಂಗಳವಾರ ಮಧ್ಯಾಹ್ನ 2 ಗಂಟೆಗೆ ದಾಳಿ ನಡೆಸಿದ ಅಧಿಕಾರಿಗಳ ತಂಡ, ಗ್ರಾಮ ಪಂಚಾಯಿತಿ ಕಚೇರಿಯಲ್ಲಿ 4 ಗಂಟೆ ತನಿಖೆ ನಡೆಸಿ ದಾಖಲೆ ಪರಿಶೀಲಿಸಿತು. ದಾಳಿಯಲ್ಲಿ ಡಿವೈಎಸ್‌ಪಿ ಕೆ.ವಿ.ಸಂತೋಷ್, ಇನ್‌ಸ್ಪೆಕ್ಟರ್‌ಗಳಾದ ಶಿವರುದ್ರಪ್ಪ ಮೇಟಿ, ರಾಜು, ಮಹಮದ್ ಸಲೀಂ, ಸುರೇಶ್ ಪಾಲ್ಗೊಂಡಿದ್ದರು.

### ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದ ಪರಿಶೀಲನೆ

• **ಉದಯವಾಹಿನಿ, ಮುಳಬಾಗಿಲು**

ಇತ್ತೀಚೆಗೆ ಪಾಕಿಸ್ತಾನದ ಗಡಿಯಲ್ಲಿ ನಡೆಯುತ್ತಿರುವ ಸಂಘರ್ಷಗಳಿಂದ ಮುನ್ನೆಚ್ಚರಿಕೆ ಕ್ರಮಗಳಿಗಾಗಿ ಕೋಲಾರ ಜಿಲ್ಲಾ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದಿಂದ ಮುಳಬಾಗಿಲು ನಗರದಲ್ಲಿ ತಪಾಸಣೆ ನಡೆಸಿ, ಜನನಿಬಿಡ ಪ್ರದೇಶಗಳನ್ನು ಪರಿಶೀಲಿಸಲಾಯಿತು. ನಗರದ ಬಸ್ ನಿಲ್ದಾಣ, ಕೆಇಬಿ ವೃತ್ತ, ಆಸ್ಪತ್ರೆ ಮತ್ತಿತರ ಸ್ಥಳಗಳಲ್ಲಿ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಶ್ವಾನದಳದಿಂದ ಪ್ರಯಾಣಿಕರ ಲಗೇಜುಗಳು, ಚೇರು, ಬೆಂಚು, ಮೆಟ್ಟಿಲುಗಳ ಸಂಧಿ ಗಳನ್ನೆಲ್ಲಾ ತಪಾಸಣೆ ನಡೆಸಲಾಯಿತು. ಕೋಲಾರದಿಂದ ಬಂದಿದ್ದ ಪರಿಶೀಲನಾ ತಂಡದ ಅಧಿಕಾರಿಗಳು, ಸಿಬ್ಬಂದಿ ಮುಳಬಾಗಿಲು ನಗರದಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದ ವರೆಗೂ ಜನ ಹೆಚ್ಚಾಗಿ ಸೇರುವ ಸ್ಥಳಗಳನ್ನು ಪರಿಶೀಲಿಸಿ ಸಾರ್ವಜನಿಕರಿಗೆ, ಪ್ರಯಾಣಿಕರಿಗೆ ಜಾಗೃತಿ ಮೂಡಿಸಿದರು. ಇತ್ತೀಚಿಗೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಅನುಚಿತವಾಗಿ ವರ್ತನೆ ತೋರುತ್ತಿದ್ದಾರೆ. ದೇಶದ ಬಗ್ಗೆ ಅವಹೇಳನಕಾರಿ ಹೇಳಿಕೆ ಗಳನ್ನು ಪ್ರಕಟಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಾಜದ ಶಾಂತಿ ಕದಡಬಹುದಾದ ಚಟುವಟಿಕೆಗಳನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮವಾಗಿ ಪರಿಶೀಲನಾ ಕಾರ್ಯ ಕೂಗೊಳ್ಳಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

### ಗ್ಯಾರಂಟಿ ಯೋಜನೆ ಪರಿಣಾಮಕಾರಿಯಾಗಿ ಜಾರಿಗೊಳಿಸಿ

• **ಉದಯವಾಹಿನಿ, ಪಿರಿಯಾಪಟ್ಟಣ**

ಜನರಿಗೆ ಗ್ಯಾರಂಟಿ ಯೋಜನೆ ಸೌಲಭ್ಯಗಳನ್ನು ತಲುಪಿಸಲು ವಿಳಂಬ ನೀತಿ ಅನುಸರಿಸಬಾರದು ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ನಿತಿನ್ ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ತಾಲ್ಲೂಕು ಪಂಚಾತಯಿತಿ ಕಚೇರಿಯಲ್ಲಿ ನಡೆದ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಘಟಕದ ಸಭೆಯಲ್ಲಿ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು. ತಾಲೂಕಿನಲ್ಲಿ 2000 ಹೊಸ ನೋಂದಣಿ ಆಗಿದೆ. 1,800 ಮಂದಿಗೆ ಯೋಜನೆ ತಲುಪಿಲ್ಲ, ಈ ಸಮಸ್ಯೆಯನ್ನು ಅಧಿ ಕಾರಿಗಳು ಮುಂದಿನ ಸಭೆಯೊಳಗೆ ಬಗೆಹರಿಸಬೇಕು.

ಯುವ ನಿಧಿಯ 931 ಫಲಾನುಭವಿಗಳಲ್ಲಿ 700 ಮಂದಿಗೆ ಹಣ ಸಂದಾಯವಾಗಿದೆ. ಉಳಿದವರು ಬಗ್ಗೆ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು. 28 ಹೊಸ ಬಸ್‌ಗಳು ಇಲ್ಲಿಯ ಡಿಪೋಗೆ ಬಂದಿವೆ. ಶಕ್ತಿ ಯೋಜನೆಯಲ್ಲಿ ಪ್ರತಿನಿತ್ಯ 22 ಸಾವಿರ ಮಹಿಳೆಯರು ಪ್ರಯಾಣ ಮಾಡುತ್ತಿದ್ದು, ಚಾಲಕರ ಕೊರತೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

### ಶಾರ್ಟ್ ಸರ್ಕಿಟ್: ಕಂಪ್ಯೂಟರ್, ಪೀಠೋಪಕರಣ ಭಸ್ಮ


• **ಉದಯವಾಹಿನಿ, ಕೊಳ್ಳೇಗಾಲ**

ಇಲ್ಲಿನ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಕಂಪ್ಯೂಟರ್ ಸೇರಿದಂತೆ ಪೀಠೋಪಕರಣಗಳು ಸುಟ್ಟು ಕರಕಲಾಗಿವೆ. ಮಂಗಳವಾರ ಮುಂಜಾನೆ ಬೆಂಕಿ ಹೊತ್ತಿಕೊಂಡಿದ್ದನ್ನು ಗಮನಿಸಿದ ವಾಯುವಿಹಾರಿ ರಾಜಶೇಖರ್ ಅವರು ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದರು. ಅಲ್ಲದೆ, ವಾಯುವಿಹಾರಿಗಳಾದ ಮನೋರಂಜನ್, ಸುನೀಲ್ ಸೇರಿದಂತೆ ಇತರರು ಕಾಲೇಜಿನ ಒಳಗೆ ಹೋಗಿದ್ದು, ಭೂಗೋಳ ಶಾಸ್ತ್ರ ವಿಭಾಗದ ಪ್ರಯೋಗಾಲಯದಲ್ಲಿ ಹೊತ್ತಿಕೊಂಡಿದ್ದ ಬೆಂಕಿಯನ್ನು ಆರಿಸಲು ಪ್ರಯತ್ನಿಸಿದರು. ಆದರೂ ಬೆಂಕಿಯ ಕೆನ್ನಾಲಿಗೆ ಹೆಚ್ಚಾಗಿದ್ದು, ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿದರು. ಪ್ರಯೋಗಾಲಯದಲ್ಲಿದ್ದ 7 ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಕುರ್ಚಿ, ಮೇಜುಗಳು, 50ಕ್ಕೂ ಹೆಚ್ಚು ಭೂಪಟಗಳು, ಅನೇಕ ಪುಸ್ತಕಗಳು ಸುಟ್ಟು ಕರಕಲಾಗಿವೆ. ಕಾಲೇಜು ತುಂಬಾ ಹಳೆಯದಾಗಿದೆ. ವಿದ್ಯುತ್ ಶಾರ್ಟ್ ಸರ್ಕಿಟ್ ಆಗಿರಬಹುದು ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

ಅಂತರಾಳದಿಂದ...
EDITORIAL

# ಮಾನವ ಅಭಿವೃದ್ಧಿ ಸೂಚ್ಯಂಕ ಸ್ಥಾನ ಉತ್ತಮಪಡಿಸಿಕೊಂಡ ಭಾರತ

ಭಾರತ ಸಾಧಿಸಬೇಕಿರುವುದು ಇನ್ನೂ ಬಹಳಷ್ಟಿದೆ ಎಂಬುದನ್ನು ಕೂಡ ಸೂಚ್ಯಂಕವು ಹೇಳುತ್ತಿರುವುದು ಗಮನಾರ್ಹವಾಗಿದೆ. ಹೊಸದಾಗಿ ಬಿಡುಗಡೆ ಆಗಿರುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (ಎಚ್‌ಡಿಐ) ಭಾರತದ ಸ್ಥಾನವು ತುಸು ಉತ್ತಮ ಹಂತಕ್ಕೆ ಬಂದಿದೆ. ಆದರೆ ಭಾರತವು ಸಾಧಿಸಬೇಕಿರುವುದು ಇನ್ನೂ ಬಹಳಷ್ಟಿದೆ ಎಂಬುದನ್ನು ಕೂಡ ಸೂಚ್ಯಂಕವು ಹೇಳುತ್ತಿದೆ. 2022ರಲ್ಲಿ 133ನೇ ಸ್ಥಾನ ಪಡೆದಿದ್ದ ಭಾರತವು ಈ ಬಾರಿ 130ನೇ ಸ್ಥಾನಕ್ಕೆ ಬಂದಿದೆ. ಒಟ್ಟು 193 ದೇಶಗಳ ಸಾಧನೆಯನ್ನು ಪರಿಶೀಲಿಸಿ ಈ ಸ್ಥಾನ ನೀಡಲಾಗಿದೆ. ಹೀಗಿದ್ದರೂ ಭಾರತದ ಸಾಧನೆಯು ಶ್ಲಾಘನೀಯ ಎಂಬುದು ನಿಜ. ದೀರ್ಘಾಯಸ್ಸು ಮತ್ತು ಆರೋಗ್ಯ, ಮಾಹಿತಿಯ ಲಭ್ಯತೆ ಮತ್ತು ಉತ್ತಮ ಜೀವನಮಟ್ಟದಂತಹ ಮಾನದಂಡಗಳಲ್ಲಿ ಭಾರತವು ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದೆ. 1990ರಲ್ಲಿ ಭಾರತದಲ್ಲಿ ಸರಾಸರಿ ಜೀವಿತಾವಧಿಯು 56.6 ವರ್ಷಗಳು ಇದ್ದಿದ್ದು 2023ರಲ್ಲಿ 72 ವರ್ಷಗಳಿಗೆ ಹೆಚ್ಚಳ ಆಗಿದೆ. ಇದೇ ಅವಧಿಯಲ್ಲಿ ಭಾರತದ ಮಕ್ಕಳು ಶಾಲೆಯಲ್ಲಿ ಕಳೆಯುವ ಅವಧಿಯು 8.2 ವರ್ಷಗಳಿಂದ 13 ವರ್ಷಗಳಿಗೆ ಹೆಚ್ಚಳ ಕಂಡಿದೆ. 1990ರಲ್ಲಿ 2,167 ಡಾಲರ್‌ನಷ್ಟು ಇದ್ದ ಭಾರತೀಯರ ತಲಾವಾರು ವರಮಾನವು 2023ರಲ್ಲಿ 9,046 ಡಾಲರ್‌ಗೆ ಏರಿಕೆ ಆಗಿದೆ. ಇದು ಸಾಧ್ಯವಾಗಿದ್ದರ ಹಿಂದೆ ನರೇಗಾ, ಶಿಕ್ಷಣ ಹಕ್ಕು ಕಾಯ್ದೆಯ ಪಾಲು ಇದೆ. ಆದರೆ ಇತರ ಹಲವು ಕ್ಷೇತ್ರಗಳಲ್ಲಿ ಭಾರತವು ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಭಾರತದಲ್ಲಿ ತೀರಾ ಎದ್ದು ಕಾಣುವಂತೆ ಇರುವ ಆದಾಯ ಅಸಮಾನತೆಯು ಮಾನವ ಅಭಿವೃದ್ಧಿ ಸೂಚ್ಯಂಕ ದಲ್ಲಿ ದೇಶದ ಸ್ಥಾನವನ್ನು ಶೇಕಡ 30ರಷ್ಟು ಕಡಿಮೆ ಮಾಡಿದೆ. ಆರೋಗ್ಯ ಮತ್ತು ಶಿಕ್ಷಣದಲ್ಲಿನ ಅಸಮಾನತೆಯು ಕಡಿಮೆ ಆಗಿದೆ. ಆದರೆ ಲಿಂಗ ಆಧಾರಿತ ಅಸಮಾನತೆ ಮತ್ತು ಆದಾಯದಲ್ಲಿನ ಅಸಮಾನತೆಯು ಬಹಳ ತೀವ್ರ ಸ್ವರೂಪದಲ್ಲಿದೆ. ಕಾರ್ಮಿಕ ಮತ್ತು ಉದ್ಯೋಗ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಹೆಚ್ಚಾಗಿದೆಯಾದರೂ ಅಲ್ಲಿ ದೊಡ್ಡ ಮಟ್ಟದ ಸುಧಾರಣೆ ಆಗಿಲ್ಲ. ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೂಡ ಕಡಿಮೆ ಇದೆ. ರಾಜಕೀಯದಲ್ಲಿ ಮಹಿಳೆಯರ ಭಾಗೀದಾರಿಕೆಯನ್ನು ಹೆಚ್ಚು ಮಾಡುವ ಉದ್ದೇಶದ ಸಂವಿಧಾನ ತಿದ್ದುಪಡಿಯು ಇನ್ನಷ್ಟೇ ಜಾರಿಗೆ ಬರಬೇಕಿದೆ. ನಮ್ಮ ದೇಶದ ನೆರೆಹೊರೆಯ ಕೆಲವು ದೇಶಗಳು ಕೂಡ ಇದೇ ಬಗೆಯ ಲೋಪಗಳನ್ನು, ಕೊರತೆಗಳನ್ನು ಹೊಂದಿವೆ. ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಸಾಧನೆ ಕಳಪೆಯಾಗಿದೆ. ಆದರೆ ಚೀನಾ ಮತ್ತು ಶ್ರೀಲಂಕಾ ಹೆಚ್ಚು ಉತ್ತಮವಾದ ಸಾಧನೆ ತೋರಿವೆ. ಈ ಎರಡು ದೇಶಗಳು ಸೂಚ್ಯಂಕದಲ್ಲಿ ಉತ್ತಮ ಸ್ಥಾನ ಪಡೆದಿವೆ. ಕೋವಿಡ್ ಸಾಂಕ್ರಾಮಿಕ ಕಾಡಿದ್ದರಿಂದಾಗಿ ಮತ್ತು ವಿಶ್ವದ ಹಲವೆಡೆ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿ ಇರುವ ಕಾರಣದಿಂದಾಗಿ ಮಾನವ ಅಭಿವೃದ್ಧಿಯ ವೇಗವು 35 ವರ್ಷಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂಬುದನ್ನು ವರದಿಯು ಹೇಳುತ್ತಿದೆ. ಮಾನವ ಅಭಿವೃದ್ಧಿ ಸೂಚ್ಯಂಕದ ವಾರ್ಷಿಕ ಬೆಳವಣಿಗೆ ಪ್ರಮಾಣವು 1990ರ ನಂತರದಲ್ಲಿ 2023ರಲ್ಲಿ ಅತ್ಯಂತ ಕಡಿಮೆ ಇತ್ತು. ಆದರೆ ಕೃತಕ ಬುದ್ಧಿಮತ್ತೆಯ ಬಳಕೆಯು ಮನುಕುಲದ ಅಭಿವೃದ್ಧಿಗೆ ಇಂಬು ಕೊಡಲಿದೆ ಎಂಬ ಆಶಾಭಾವನೆಯು ವ್ಯಾಪಕವಾಗಿರುವುದನ್ನು ಈ ವರದಿ ದಾಖಲಿಸಿದೆ. ಕೃತಕ ಬುದ್ಧಿಮತ್ತೆಯ ಬಳಕೆಯು ಉತ್ಪಾದಕತೆಯನ್ನು ಹೆಚ್ಚು ಮಾಡುತ್ತದೆ, ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ, ಶಿಕ್ಷಣ ಮತ್ತು ಆರೋಗ್ಯದಂತಹ ಕ್ಷೇತ್ರಗಳಲ್ಲಿ ಉತ್ತಮ ಫಲಿತಾಂಶಕ್ಕೆ ನೆರವಾಗುತ್ತದೆ ಎಂಬ ನಿರೀಕ್ಷೆ ಇದೆ. ಕೃತಕ ಬುದ್ಧಿಮತ್ತೆ ಕ್ಷೇತ್ರದ ಸಂಶೋಧಕರ ಪೈಕಿ ಶೇಕಡ 20ರಷ್ಟು ಮಂದಿಯನ್ನು ಉಳಿಸಿಕೊಳ್ಳಲು ಭಾರತಕ್ಕೆ ಸಾಧ್ಯವಾಗಿದೆ ಎಂದು ಕೂಡ ವರದಿಯು ಉಲ್ಲೇಖ ಮಾಡಿದೆ. ಕೃಷಿ, ಆರೋಗ್ಯ ಸೇವೆ, ಸಾರ್ವಜನಿಕರಿಗೆ ಇತರ ಅಗತ್ಯ ಸೇವೆಗಳನ್ನು ಒದಗಿಸುವ ಕ್ಷೇತ್ರಗಳಲ್ಲಿ ಭಾರತವು ಕೃತಕ ಬುದ್ಧಿಮತ್ತೆಯನ್ನು ಬಳಕೆ ಮಾಡಿಕೊಳ್ಳಬೇಕಿದೆ. ಇದೇ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಗೆ ನೀತಿ ನಿರೂಪಕರಿಂದ ಬೆಂಬಲ ಸಿಗಬೇಕಿದೆ. ಕೃತಕ ಬುದ್ಧಿಮತ್ತೆಯಿಂದಾಗಿಯೇ ಅಸಮಾನತೆ ಸೃಷ್ಟಿ ಆಗದಂತೆ ನೋಡಿಕೊಳ್ಳುವ ಕೆಲಸವೂ ಆಗಬೇಕಿದೆ.




**ಭಾರತದ ಸ್ಥಾನ ಸುಧಾರಿಸಿರುವುದು ನಿಜವಾದರೂ ಅದು ಬಹಳ ಕೆಳಗಿನ ಸ್ಥಾನ ಪಡೆದಿದೆ ಎಂಬುದು ವಾಸ್ತವ. ಮಾನವ ಅಭಿವೃದ್ಧಿ ವರದಿಯ ಪ್ರಕಾರ, ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 2023ರಲ್ಲಿ ಮೌಲ್ಯವನ್ನು ತುಸುಮಟ್ಟಿಗೆ ಹೆಚ್ಚಿಸಿಕೊಂಡಿದೆ. ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿದ್ದ ವರ್ಷಗಳಲ್ಲಿ ದೇಶದ ಅಭಿವೃದ್ಧಿಯು ಒಂದಿಷ್ಟು ಹಿಂದಕ್ಕೆ ಹೋಯಿತು, ಅದೇ ರೀತಿಯಲ್ಲಿ ವಿಶ್ವದ ಇತರ ರಾಷ್ಟ್ರಗಳ ಬೆಳವಣಿಗೆ ಕೂಡ ಹಿಂದೆ ಉಳಿಯಿತು.**

# ರಾಮಾಯಣ



## ಚಿತ್ರಕೂಟದಲ್ಲಿ ಶ್ರೀರಾಮನ ನಿವಾಸ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಎಲ್ಲಿ ನೋಡಿದರೂ ಕಂದ ಮೂಲ ಫಲಾದಿಗಳಿಂದ ಮನೋಹರವಾಗಿದೆ. ಇದು ನಮ್ಮ ಜೀವನಕ್ಕೆ ಅನುಕೂಲವಾಗಿದೆ. ಈ ಪರ್ವತದಲ್ಲಿ ಅನೇಕ ಮಹಾತ್ಮರಾದ ಋಷಿಗಳು ವಾಸ ಮಾಡಿ ಕೊಂಡಿದ್ದಾರೆ. ಇದೇ ನಮಗೆ ವಾಸಕ್ಕೆ ಯೋಗ್ಯವಾದ ಸ್ಥಳ ಎಂದು ಶ್ರೀರಾಮನು ನುಡಿದನು. ಆ ಮಾತನ್ನು ಲಕ್ಷ್ಮಣನೂ ಸೀತಾದೇವಿಯೂ ಮಹಾಪ್ರಸಾದವೆಂದು ಅಂಗೀಕರಿಸಿದರು. ಶ್ರೀರಾಮನು ಹರ್ಷದಿಂದ ಅವರನ್ನು ಕೂಡಿಕೊಂಡು ವಾಲ್ಮೀಕಿಮುನೀಶ್ವರನ ಆಶ್ರಮಕ್ಕೆ ಹೋಗಿ ಆ ಮುನೀಶ್ವರನನ್ನು ನೋಡಿ ವಂದನೆಮಾಡಿದನು. ಸಮಸ್ತ ಧರ್ಮರಹಸ್ಯಗಳನ್ನೂ ಬಲ್ಲ ವಾಲ್ಮೀಕಿಮುನಿಯು ಸೀತಾಲಕ್ಷ್ಮಣಸಮೇತನಾದ ಶ್ರೀರಾಮನಿಗೆ ಸಂತೋಷದಿಂದ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ಮಾಡಿ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಕುಶಲಪ್ರಶ್ನೆಯನ್ನು ಕೇಳಿ ಮನಸ್ಸಿನಲ್ಲಿ ಹರ್ಷಪಡುತ್ತಿದ್ದನು. ಆಮೇಲೆ ಶ್ರೀರಾಮನು ಲಕ್ಷ್ಮಣನನ್ನು ಕುರಿತು '' ಎಲೈ ಲಕ್ಷ್ಮಣ ನೀನು ವಾಲ್ಮೀಕಿಮುನೀಶ್ವರನ ಅಪ್ಪಣೆತೆಗೆದುಕೊಂಡು ಒಂದು ಪರ್ಣಶಾಲೆಯನ್ನು ನಿರ್ಮಿಸು ಎಂದು ಚಿಟಜಡಿ ಲಕ್ಷ್ಮಣನು ಆ ಮುನೀಶ್ವರನ ಅಪ್ಪಣೆಯನ್ನು ಪಡೆದು ಗಟ್ಟಿಯಾಗಿಯೂ ನೇರವಾಗಿಯೂ ಮನೋಹರವಾಗಿಯೂ ಇರುವ ಮರಗಳನ್ನು ಕಡಿದು ತಂದು ಒಂದು ಪರ್ಣಶಾಲೆಯನ್ನು ನಿರ್ಮಿಸಿದನು. ಶ್ರೀರಾಮನು ಅದನ್ನು ನೋಡಿ ಸಂತೋಷಪಟ್ಟು ದೇವತೆಗಳಿಗೆ ಬಲಿಯನ್ನು ಕೊಡುವುದಕ್ಕೆ ಎರಳೆಯ ಮಾಂಸವನ್ನು ತರಹೇಳಲು ಲಕ್ಷ್ಮಣನು ಶೀಘ್ರದಲ್ಲಿ ಒಂದು ಎರಳೆಯನ್ನು ಕೊಂದು ತಂದನು. ಅದನ್ನು ಜ್ವಲಿಸುತ್ತಿದ್ದ ಅಗ್ನಿಯಲ್ಲಿ ಪಚನಮಾಡಿ ಶ್ರೀರಾಮ, ಮೃಗವು ಪಕ್ವವಾಯಿತು. ನೀನು ದೇವತಾರ್ಚನೆಯನ್ನು ಮಾಡು ಎಂದು ಹೇಳಿದನು. ಶ್ರೀರಾಮನು ಶೀಘ್ರದಲ್ಲಿ ಸ್ನಾನಮಾಡಿ ನಿಯವಮಂಸ್ಥನಾಗಿ ತನ್ನ ಇಷ್ಟದೇವತಾಪ್ರಾರ್ಥನೆ ಯನ್ನು ಮಾಡಿ ದೇವಪೂಜೆಯ ಸ್ಥಳಕ್ಕೆ ಹೋಗಿ ದೇವತಾರ್ಚನೆಯನ್ನು ಮಾಡಿ ವಿಷ್ಣುಬಲಿ ರುದ್ರ ಬಲಿ ಮೊದಲಾದ ಬಲಿಪ್ರದಾನಗಳಿಂದ ವೈಶ್ವದೇವವನ್ನು ಮಾಡಿ ದೇವತೆಗಳಿಗೆ ಬಲಿಯನ್ನು ಕೊಟ್ಟನು... ಆಮೇಲೆ ಜಪಗಳನ್ನು ಮಾಡಿ ವೇದೋಕ್ತಗಳಾದ ಮಂತ್ರಗಳಿಂದ ದೇವತಾ ಸಂತರ್ಪಣೆಮಾಡಿ ಸೀತಾಲಕ್ಷ್ಮಣಸಮೇತನಾಗಿ ಪರ್ಣಶಾಲೆಯನ್ನು ಪ್ರವೇಶಿಸಿದನು. ನಾನಾವಿಧ ವಾದ ಪಕ್ಷಿಗಳ ಸ್ವರಗಳಿಂದಲೂ ಮನೋಹರವಾದ ಹೂದೋಟಗಳಿಂದಲೂ ವೃಕ್ಷಗಳಿಂದಲೂ ಇಟ್ಟಣಿಸಿದ ಚಿತ್ರಕೂಟಪರ್ವತದ ವನದಲ್ಲಿ ಹರಿಯುತ್ತಿದ್ದ ಮಾಲ್ಯವತಿ ಎಂಬ ನದೀತೀರದಲ್ಲಿ ಅಯೋಧ್ಯಾ ಪಟ್ಟಣವನ್ನು ಬಿಟ್ಟು ಬಂದ ದುಃಖವನ್ನು ಮರೆತು ಶ್ರೀರಾಮನು ಸೀತಾಲಕ್ಷ್ಮಣ ರೊಡನೆ ಅತ್ಯಂತ ಸಂತುಷ್ಟಚಿತ್ತನಾಗಿ ವಾಸಮಾಡಿದನು.

### ಸುಮಂತ್ರನು ಶ್ರೀರಾಮನನ್ನು ವನಕ್ಕೆ ಕಳುಹಿಸಿ ಬಂದದ್ದನ್ನು? ಕೇಳಿ ದಶರಥನು ಮೂರ್ಛೆಯಾದದ್ದು

ಶ್ರೀರಾಮನು ಗಂಗೆಯನ್ನು ದಾಟಿ ದಕ್ಷಿಣತೀರಕ್ಕೆ ಹೋದಮೇಲೆ, ಅವನು ಗಂಗಾ ಯಮುನವಾಸಂಗಮದಲ್ಲಿದ್ದ ಭರದ್ವಾಜಮುನೀಶ್ವರನೆ ದರ್ಶನಮಾಡಿ ಚಿತ್ರಕೂಟಕ್ಕೆ ಹೋದ ನೆಂಬ ವೃತ್ತಾಂತವನ್ನು ಆ ದಿಕ್ಕಿನಿಂದ ಬಂದವರ ಮೂಲಕ ಗುಹನು ತಿಳಿದು ಅದನ್ನು ಸುಮಂತ್ರನಿಗೆ ಹೇಳಿ ತನ್ನ ಮನೆಗೆ ಹೋದನು. ಸುಮಂತ್ರನು ಗುಹನಿಂದ ಬೀಳ್ಕೊಂಡು ರಥವನ್ನು ಹತ್ತಿ ಅತ್ಯಂತ ದುಗುಡದಿಂದ ಮಧ್ಯಮಾರ್ಗದಲ್ಲಿದ್ದ ನದಿಗಳನ್ನೂ ದೇಶಗಳನ್ನೂ ದಾಟಿ ಅಯೋಧ್ಯೆಗೆ ಬಂದನು. ಜನಗಳ ಸದ್ದಿಲ್ಲದ ಅಯೋಧ್ಯಾ ಪಟ್ಟಣವು ಶ್ರೀರಾಮನ ಅಗಲಿಕೆಯಿಂದುಂಟಾದ ಶೋಕಾಗ್ನಿಯಿಂದ ದಗ್ಧವಾಗಿ ಲಯವಾಯಿತೋ ಎಂದು ಚಿಂತಿಸುತ್ತ ಸುಮಂತ್ರನು ಪಟ್ಟಣವನ್ನು ಪ್ರವೇಶಿಸಿದನು.

**ಮುಂದುವರಿಯುವುದು...**

# ಆಲೋಚನಾ ವಿಧಾನವನ್ನು ಬದಲಾಯಿಸಿ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಒಂದು ದಿನ ಅಕ್ಬರ್ ಮತ್ತು ಬೀರ್‌ಬಲ್ ಬೇಟೆಗೆ ಹೋಗಿದ್ದಾಗ, ಚಕ್ರವರ್ತಿಯು ಒಂದು ಮರವನ್ನು ಬೀರ್‌ಬಲ್‌ಗೆ ತೋರಿಸಿ ಈ ಮರ ಅದೇಕೆ ವಕ್ರವಾಗಿದೆ ಎಂದು ಕೇಳಿದ. ಆ ಮರ ವಕ್ರವಾಗಿರಲು ಕಾರಣ ಅದು ಈ ಕಾಡಿನಲ್ಲಿನ ಎಲ್ಲ ಮರಗಳ ಅಳಿಯ ನೀನೇಕೆ ಹಾಗೆ ಹೇಳುತ್ತೀ? ಕೇಳಿದ ಅಕ್ಬರ್ ಬೀರ್‌ಬಲ್ ಒಂದು ನಾಣ್ಣುಡಿ ಹೇಳಿದ, ನಾಯಿಯ ಬಾಲ ಮತ್ತು ಅಳಿಯ ಯಾವಾಗಲೂ ವಕ್ರವೇ ಅಕ್ಬರ ಪ್ರತಿಯಾಗಿ ಕೇಳಿದ, ನನ್ನ ಅಳಿಯನೂ ವಕ್ರನೇ ಏನು? ಹೌದು, ಪ್ರಭು! ಎಂದ ಬೀರ್‌ಬಲ್ ಹಾಗಾದರೆ ಅವನನ್ನು ಶಿಲುಬೆಗೆ ಹಾಕಿಸು ಆಜ್ಞೆ ಮಾಡಿದ ಅಕ್ಬರ ಹಲವು ದಿನಗಳ ನಂತರ, ಬೀರ್‌ಬಲ್ ಮೂರು- ಚಿನ್ನ, ಬೆಳ್ಳಿ ಮತ್ತು ತಾಮ್ರ - ಶಿಲುಬೆಗಳನ್ನು ತಯಾರಿಕೆ ಮಾಡಿಸಿದ ಅಕ್ಬರ್ ಕೇಳಿದ, ಇವು ಏತಕ್ಕಾಗಿ?

ಪ್ರಭು, ಒಂದು ನಿಮಗೆ, ಒಂದು ನನಗೆ ಮತ್ತೊಂದು ನಿಮ್ಮ ಅಳಿಯನಿಗೆ ಉತ್ತರಿಸಿದ ಬೀರ್ ಬಲ್ ಆದರೆ ನಾವೇಕೆ ಶಿಲುಬೆಗೆ ಬಲಿಯಾಗಬೇಕು ಕೇಳಿದ ಅಕ್ಬರ್ ಏಕೆಂದರೆ ನಾವೂ ಸಹ ಯಾರೋ ಒಬ್ಬರಿಗೆ ಅಳಿಯರೇ ಅಲ್ಲವೇ? ಅಕ್ಬರ್ ನಕ್ಕು ಹೇಳಿದ ಸರಿ, ಹಾಗಾದರೆ ನನ್ನ ಅಳಿಯನನ್ನು ಬಿಟ್ಟು ಬಿಡೋಣ

ಬೀರ್‌ಬಲ್ ಮತ್ತು ಅಕ್ಬರ್ ನಡುವಿನ ಈ ಸಂವಾದ ನಮಗೊಂದು ಸರಳ ಸತ್ಯ ಬೋಧಿಸುತ್ತದೆ. ನೀವು ಪ್ರಪಂಚವನ್ನು ಸುಧಾರಿಸಲು ಸಾಧ್ಯವಿಲ್ಲ. ನೀವು ನಿಮ್ಮ ಬಾಸ್‌ನ್ನು, ಸಹೋದ್ಯೋಗಿಗಳನ್ನು, ನಿಮ್ಮ ಪತ್ನಿ, ನಿಮ್ಮ ಪತಿ, ನಿಮ್ಮ ಪುತ್ರರು, ಪುತ್ರಿಯರನ್ನು, ನಿಮ್ಮ ಸ್ನೇಹಿತರನ್ನು ಬದಲಾಯಿಸಲಾರಿರಿ, ಆದ್ದರಿಂದ ನಿಮ್ಮ ಪತ್ನಿ/ಪತಿ ಸಂಬಂಧಿಗಳನ್ನು ನೀವು ಬದಲಾಯಿಸಬಲ್ಲಿರೆಂದು ಏಕೆ ಅಂದುಕೊಳ್ಳುವಿರಿ ನೀವು ಅವರನ್ನು ಬದಲಾಯಿಸಲು ಸಾಧ್ಯವಿಲ್ಲವಾದ್ದರಿಂದ, ನಿಮ್ಮದು ಅವಿಭಕ್ತ ಕುಟುಂಬವಾಗಿದ್ದಲ್ಲಿ, ಅವರೊಡನೆ ಜೀವಿಸುವುದನ್ನು ಕಲಿಯಬೇಕು. ನೀವುಗಳು ಒಂದೇ ಸೂರಿನಡೆ ಜೀವಿಸದಿದ್ದರೂ, ಸ್ವಲ್ಪ ಪರಸ್ಪರತೆ ಅನಿವಾರ್ಯ. ನೀವು ನಿಮ್ಮ ಅತ್ತೆ, ಮಾವ, ಮೈದುನರನ್ನು ಬದಲಾಯಿಸಲು ಸಾಧ್ಯವಿಲ್ಲವಾದ್ದರಿಂದ, ನೀವು ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ, ಅವರ ಬಗ್ಗೆ ನಿಮ್ಮ ಮನೋಧರ್ಮ ಬದಲಾಯಿಸುವುದು, ಅದು ರೇಡಿಯೋಗೆ ಕಿವಿಗೊಟ್ಟು ಒಂದು ಚಟಪಟ ಶಬ್ದ ಕೇಳುವಂತೆ. ನೀವು ಸ್ವಲ್ಪ ತಿರುಗಣೆ ತಿರುಗಿಸಿದರೆ, ನಿಮಗೆ ಬೇಕಾದ ರೇಡಿಯೋ ಕೇಂದ್ರ, ಸ್ಪಷ್ಟ, ಪರಿಪೂರ್ಣ ಶಬ್ದ ಸಿಗುತ್ತದೆ. ಹಲವು ಬಾರಿ ನೀವು ನಿಮ್ಮ ಆಲೋಚನಾ ರೀತಿಯನ್ನು, ಮತ್ತೊಬ್ಬ ವ್ಯಕ್ತಿಗೆ ಸರಿಯಾಗುವಂತೆ ಬದಲಾಯಿಸುವುದು ಹೆಚ್ಚು ಲಾಭಕರ.ಅಂತಹ ಬದಲಾವಣೆ ಸಂಧಾನವಲ್ಲ, ಅದು ವಿವೇಕ. ಬುದ್ಧಿವಂತರು ಶಾಂತಿಗಾಗಿ ಏನೂ ಮಾಡಲು ಸಿದ್ಧರಿರುತ್ತಾರೆ.

ಒಂದು ಸಿಹಿ ನಾಲಿಗೆ ಮತ್ತು ದಯೆಯಿಂದ ನೀವು ಒಂದು ಆನೆಯನ್ನು ಒಂದು ಕೂದಲಿನಿಂದ ಎಳೆಯಬಹುದು. ಈ ಪ್ರಪಂಚದಲ್ಲಿ ಎಲ್ಲಾತರನಾದ ಜನರು ಇದ್ದಾರೆ ದಯಾಪರರು, ದಯಾರಹಿತರು. ದಯಾರಹಿತರ ಬಗ್ಗೆ ದಯೆಯುಳ್ಳವರಾಗಿ - ಅದರ ಅವಶ್ಯಕತೆ ಅವರಿಗೇ ಹೆಚ್ಚಾಗಿದೆ. ಇದೇ ರೀತಿ ಎಲ್ಲಾ ವಿಧವಾದ ಪತಿ, ಪತ್ನಿ ಸಂಬಂಧಿಗಳಿದ್ದಾರೆ. ನೀವು ಒಬ್ಬ ದಯಾರಹಿತ ಪತಿ, ಪತ್ನಿ ಸಂಬಂಧಿಯೊಂದಿಗಿರುವ ದೌರ್ಭಾಗ್ಯ ವಂತನಾಗಿದ್ದರೆ, ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನಿಮ್ಮ ಧರ್ಮವನ್ನು ಪಾಲಿಸಿ, ಉಳಿದುದನ್ನು ದೇವರಿಗೆ ಬಿಡಿ, ಒಳ್ಳೆಯ ನಂಬಿಕೆಯಿಂದ ಅತಿ ಕಠಿಣಕರ ಹೃದಯಗಳು ಸಹ ಕರಗುತ್ತವೆ. ದಯಾಪರತೆ ಎಂದೂ ನಿರುಪಯುಕ್ತವಾಗುವುದಿಲ್ಲವೆಂದು ಯಾವಾಗಲೂ ಜ್ಞಾಪಕವಿರಲಿ. ಅದು ಪಡೆಯುವಾತನ ಮೇಲೆ ಯಾವುದೇ ಪರಿಣಾಮ ಹೊಂದದಿದ್ದಲ್ಲಿ, ನೀಡುವಾತನಿಗೆ ಅನುಕೂಲ ನೀಡುತ್ತದೆ. ಸಂದರ್ಭ ಏನೇ ಆಗಿರಲಿ, ಪ್ರತಿದಿನ ಮಲಗುವಾಗ ನನ್ನ ಅತ್ಯುತ್ತಮ ಪ್ರಯತ್ನ ಮಾಡಿರುವೆ ಎಂದು ಹೇಳುವ ತೀರ್ಮಾನ ಮಾಡಿ.



# ಭಾರತದ ವಿಜಯಕ್ಕಾಗಿ ಗೋವಾದ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಲ್ಲಿ ಶಕ್ತಿಶಾಲಿ 'ಶತಚಂಡಿ ಯಜ್ಞ'



ಶ್ರೀ. ಚೇತನ ರಾಜಹಂಸ
• ಉದಯವಾಹಿನಿ, ವಿಶೇಷ

ಸದ್ಯದ ಸ್ಥಿತಿಯಲ್ಲಿ ಭಾರತ ಪಾಕಿಸ್ತಾನ ಯುದ್ಧದ ಕದನ ವಿರಾಮ ಘೋಷಣೆ ಆಗಿದ್ದರೂ ದುಷ್ಟ ಪಾಕಿಸ್ತಾನ ಈ ಮಧ್ಯ ಅನೇಕ ಬಾರಿ ಅದನ್ನು ಉಲ್ಲಂಘಿಸಿರುವುದು ನಾವು ನೋಡಿದ್ದೇವೆ. ಹಾಗಾಗಿ ಈ ಕದನಗಳಲ್ಲಿ ಭಾರತಕ್ಕೆ ವಿಜಯ ದೊರೆಯಬೇಕೆಂದು ಸನಾತನ ಸಂಸ್ಥೆಯ ವತಿಯಿಂದ 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'ದಲ್ಲಿ ಮೇ 20 ರಿಂದ 22 2025 ಈ ಮೂರು ದಿನದ ಕಾಲಾವಧಿಯಲ್ಲಿ 25 ಪುರೋಹಿತರ ಉಸ್ತುವಾರಿಯಲ್ಲಿ ಶಕ್ತಿಶಾಲಿ ಶತಚಂಡಿ ಯಜ್ಞ ಮಾಡಲಾಗುವುದು.

ಈ ಯಜ್ಞ ಎಲ್ಲಾ ನಾಗರಿಕರಿಗಾಗಿ ಮುಕ್ತವಾಗಿದ್ದು ಇದರಲ್ಲಿ ದೇಶ ವಿದೇಶದವರೂ ಪಾಲ್ಗೊಳ್ಳುವರು, ಎಂದು ಸನಾತನ ಸಂಸ್ಥೆಯ ರಾಷ್ಟ್ರೀಯ ವಕ್ತಾರ ಶ್ರೀ. ಚೇತನ ರಾಜಹಂಸ ಇವರು ಮಾಹಿತಿ ನೀಡಿದರು.


ಫರ್ಮಾಗುಡಿ, ಫೊಂಡಾ ಗೋವಾದಲ್ಲಿನ ಇಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ಮೇ 17 ರಿಂದ 19. 2025 ಈ ಕಾಲಾವಧಿಯಲ್ಲಿ ಸನಾತನ ರಾಷ್ಟ್ರದ ಶಂಖನಾದ ಮಹೋತ್ಸವದ ನಡೆಯುತ್ತಿದೆ. ಇದಕ್ಕಾಗಿ 23 ದೇಶಗಳಲ್ಲಿನ ಪ್ರತಿಷ್ಠಿತ ಗಣ್ಯರು, ವಿವಿಧ ಸಂಪ್ರದಾಯದ ಸಂತ - ಮಹಂತರು, ವಿವಿಧ ರಾಜ್ಯದ ಮುಖ್ಯಮಂತ್ರಿಗಳು, ದೇವಸ್ಥಾನದ ಟ್ರಸ್ಟಿಗಳು ಮತ್ತು 25 ಸಾವಿರಕ್ಕಿಂತಲೂ ಹೆಚ್ಚಿನ ಸಾಧಕರು, ಹಿಂದೂ ಧರ್ಮಪ್ರೇಮಿಗಳು ಭಾಗವಹಿಸುವರು. ಯಜ್ಞದಲ್ಲಿ ಸಹಭಾಗಿ ಆಗುವ ಜನರು ಭಾರತದ ವಿಜಯಕ್ಕಾಗಿ ಪ್ರಾರ್ಥನೆ ಮಾಡುವರು. ದೇವಭೂಮಿ, ತಪೋಭೂಮಿ, ಅವತಾರ ಭೂಮಿ ಮತ್ತು ಪೃಥ್ವಿಯಲ್ಲಿನ ಏಕೈಕ ಸನಾತನ ರಾಷ್ಟ್ರವಾದ ಭಾರತದ ರಕ್ಷಣೆಗಾಗಿ ಮತ್ತು ವಿಜಯಕ್ಕಾಗಿ ನಡೆಯುವ ಶತಚಂಡಿ ಯಜ್ಞದಲ್ಲಿ ಸಪ್ತಶತೀಯ ಸಾಮೂಹಿಕ ಪಾರಾಯಣ, ಯಜ್ಞ ವಿಧಿ, ಆಹುತಿ ಮತ್ತು ಪೂರ್ಣಾಹುತಿ ಮುಂತಾದರಂತೆ ನಡೆಯುವುದು. ಮೇ 20 ರಂದು ಮಧ್ಯಾಹ್ನ 4 ರಿಂದ ರಾತ್ರಿ 8 , ಮೇ 21 ರಂದು ಬೆಳಿಗ್ಗೆ 9.30 ಇಂದ ಮಧ್ಯಾಹ್ನ 12.30 ವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 8 ವರೆಗೆ, ಮೇ 22 ರಂದು ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 1.30 ಈ ಸಮಯದಲ್ಲಿ ಶತಚಂಡಿ ಯಜ್ಞ ನಡೆಯುವುದು.



ಈ ಯಜ್ಞದ ಮೊದಲು ಮೇ 17 ರಿಂದ 19.2025 ಈ ಕಾಲಾವಧಿಯಲ್ಲಿ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದ ರಾಷ್ಟ್ರಧರ್ಮ, ಹಿಂದೂ ಸಮಾಜ ರಕ್ಷಣೆಗೆ ಸಂಬಂಧಿಸಿದ ಮಹತ್ವಪೂರ್ಣ ಗಣ್ಯರ ವಿಚಾರ ಮಂಥನ, ಸಂತ ಸಭೆ, ಇತರ ಜಾಗೃತಿಪರ ಕಾರ್ಯಕ್ರಮಗಳು ನಡೆಯುವುದು. ಈ ಮಹೋತ್ಸವದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಲು SanatanRashtraShankhnad.in ಈ ಜಾಲತಾಣಕ್ಕೆ ಭೇಟಿ ನೀಡಿ .

# ಕ್ಯಾಲ್ಸಿಯಂ ಕೊರತೆ ಆದರೆ ಹಲ್ಲು ಮೂಳೆ ಮಾತ್ರವಲ್ಲ, ಹೃದಯಕ್ಕೂ ಸಮಸ್ಯೆ


ಅನಾರೋಗ್ಯ ಸಮಸ್ಯೆಗಳು ನಮ್ಮ ಹತ್ತಿರಕ್ಕೂ ಬರಬಾರದು, ಸದಾ ಆರೋಗ್ಯಕಾರಿ ಜೀವನಶೈಲಿಯನ್ನು ಅನುಸರಿಸಿಕೊಂಡು ಹೋಗಬೇಕು ಎಂದರೆ ನಮ್ಮ ದೇಹಕ್ಕೆ ಎಲ್ಲಾ ಬಗೆಯ ಪೋಷಕಾಂಶಗಳು ನಿಯಮಿತ ಪ್ರಮಾಣದಲ್ಲಿ ಸಿಗಂತಾಗಬೇಕು. ದೇಹಕ್ಕೆ ಬೇಕಾಗುವ ಪ್ರೋಟೀನ್, ಕ್ಯಾಲ್ಸಿಯಂ, ಕಾರ್ಬೋ ಹೈಡ್ರೇಟ್, ವಿವಿಧ ಬಗೆಯ ವಿಟಮಿನ್ಸ್, ಖನಿಜಾಂಶಗಳು, ಇವೆಲ್ಲವೂ ಕೂಡ ನಮಗೆ ಸಮರ್ಪಕವಾಗಿ ಸಿಗಬೇಕು. ಇವುಗಳಲ್ಲಿ ಯಾವುದಾದರೂ ಒಂದು ಪೋಷಕಾಂಶದಲ್ಲಿ ಕೊರತೆ ಕಾಣಿಸಿಕೊಂಡರೆ, ಮುಂದಿನ ದಿನಗಳಲ್ಲಿ ಗಂಭೀರ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ.



**ಕ್ಯಾಲ್ಸಿಯಂ ಅಂಶದ ಕೊರತೆ:** ನಿಮಗೆ ಗೊತ್ತಿರಲಿ ಒಂದೊಂದು ಬಗೆಯ ಪೌಷ್ಟಿಕ ಸತ್ವಕ್ಕೂ ಅದ ರದೇ ಆದ ಕಾರ್ಯ ಪ್ರವೃತ್ತಿ ಇರುತ್ತದೆ. ಅಕಸ್ಮಾತ್ ದೇಹದಲ್ಲಿ ಯಾವುದಾದರೂ ಒಂದು ಪೌಷ್ಟಿಕಾಂಶಗಳು ಕಡಿಮೆಯಾದರೂ ಅದಕ್ಕೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ದೇಹದಲ್ಲಿ ಕಾಣಿಸಿ ಕೊಳ್ಳಲು ಶುರು ವಾಗುತ್ತದೆ. ಅದರಂತೆ ಕ್ಯಾಲ್ಸಿಯಂ ಕೂಡ. ಮೂಳೆಗಳ ಗುಣಮಟ್ಟವನ್ನು ಇದು ಕಾಪಾ ಡುತ್ತದೆ.ಸಣ್ಣ ವಯಸ್ಸಿನಿಂದ ಡೈರಿ ಉತ್ಪನ್ನಗಳನ್ನು ಅಂದರೆ ಹಾಲು ಮೊಸರು ಸೇವನೆ ಮಾಡುತ್ತಾ ಬಂದಿರುವವರಿಗೆ ಮೂಳೆಗಳು, ಹಲ್ಲುಗಳಿಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ಅಷ್ಟೊಂದು ಕಾಡುವುದಿಲ್ಲ. ಇಲ್ಲದಿದ್ದರೆ ವಯಸ್ಸಾಗುತ್ತಾ ಹೋದಂತೆ, ಮೂಳೆಗಳಿಗೆ, ಹಲ್ಲುಗಳಿಗೆ ಸಂಬಂಧ ಪಟ್ಟಂತೆ ಕಾಯಿಲೆಗಳನ್ನು ಎದುರಿಸ ಬೇಕಾಗುತ್ತದೆ. ಇದಕ್ಕೆಲ್ಲಾ ಪ್ರಮುಖ ಕಾರಣ ದೇಹದಲ್ಲಿ ಕಾಣಿಸಿ ಕೊಂಡಿರುವ ಕ್ಯಾಲ್ಸಿಯಂ ಅಂಶದ ಕೊರತೆ.

**ಕ್ಯಾಲ್ಸಿಯಂ ಪೌಷ್ಟಿಕಾಂಶಗಳ ಬಗ್ಗೆ ನೋಡುವುದಾರೆ:** ಕ್ಯಾಲ್ಸಿಯಂ ನಮ್ಮ ದೇಹದಲ್ಲಿ ಅನೇಕ ಪ್ರಮುಖ ಕಾರ್ಯಗಳನ್ನು ನಿರ್ವ ಹಿಸುತ್ತದೆ. ಸಾಮಾನ್ಯವಾಗಿ ಮೂಳೆಗಳು ಮತ್ತು ಹಲ್ಲುಗಳನ್ನು ಬಲಪಡಿಸಲು ಇದು ಅವಶ್ಯಕವಾಗಿದೆ. ಅಷ್ಟೇ ಅಲ್ಲದೆ ಇಡೀ ದೇಹವು ತನ್ನ ಎಲ್ಲಾ ಕಾರ್ಯಗಳನ್ನು ಸರಾಗವಾಗಿ ನಿರ್ವಹಿಸಲು ಕೂಡ ಕ್ಯಾಲ್ಸಿಯಂ ಅಂಶ ಅವಶ್ಯಕವಾಗಿ ಬೇಕಾಗುತ್ತದೆ.

**ಕ್ಯಾಲ್ಸಿಯಂ ಕೊರತೆ ಕಾಣಿಸಿಕೊಂಡರೆ, ಹೃದಯಕ್ಕೆ ಸಮಸ್ಯೆ ಕಾಣಿಸಿಕೊಳ್ಳಬಹುದು:**



ದೇಹದಲ್ಲಿ ಕ್ಯಾಲ್ಸಿಯಂ ಕೊರತೆ ಉಂಟಾದಾಗ, ಮೊದಲು ಕಾಣಿಸಿಕೊಳ್ಳುವ ಸಮಸ್ಯೆಗಳು ಏನೆಂದ್ರೆ ಇದ್ದಕ್ಕಿದಂತೆ ಮೂಳೆಗಳು, ಸ್ನಾಯುಗಳಲ್ಲಿ ದೌರ್ಬಲ್ಯ. ಇದರ ಹೊರತಾಗಿ ನೋಡು ವುದಾದರೆ ಹಲ್ಲುಗಳಲ್ಲಿ ನೋವು ಕಾಣಿಸಿಕೊಳ್ಳಬಹುದು. ಕ್ಯಾಲ್ಸಿಯಂ ಕೊರ ತೆಯು ನರಮಂಡಲದ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು.

**ಕ್ಯಾಲ್ಸಿಯಂ ಕೊರತೆ ಕಾಣಿಸಿಕೊಂಡರೆ ಕಾಣಿಸಿಕೊಳ್ಳುವ ಇನ್ನಿತರ ಆರೋಗ್ಯ ಸಮಸ್ಯೆಗಳು:** ಪ್ರಮುಖವಾಗಿ ಕ್ಯಾಲ್ಸಿಯಂ ಕೊರತೆಯಿಂದಾಗಿ ಆಸ್ಟಿಯೊಪೆನಿಯಾ ಮತ್ತು ಆಸ್ಟಿಯೊಪೊರೋಸಿಸ್ ನಂತಹ ಆರೋಗ್ಯ ಸಮಸ್ಯೆಗಳು ಕಡಬಹುದು. ಮೂಳೆಗಳಿಗೆ ಸರಿಯಾಗಿ ಕ್ಯಾಲ್ಸಿಯಂ ಸಿಗದೇ ಇರುವಂತಹ ಸಂದರ್ಭದಲ್ಲಿ ಈ ಎರಡು ಪರಿಸ್ಥಿತಿಗಳು ನಿರ್ಮಾಣ ವಾಗುವುದು. ಕ್ಯಾಲ್ಸಿಯಂ ಕೊರತೆಯು ಇರುವ ಜನರಲ್ಲಿ ಮಾಂಸಖಂಡದ ನೋವು, ಸೆಳೆತ ಕಂಡುಬರಬಹುದು. ಈ ಪೋಷಕಾಂಶದಕೊರತೆಯಿಂದಾಗಿ ಅತಿಯಾದ ಬಳಲಿಕೆ ಕಂಡು ಬರಬಹುದು.

**ಕೂದಲು ಮತ್ತು ಚರ್ಮಕ್ಕೆ ಹಾನಿ ಆಗಬಹುದು:** ಹಲ್ಲಿನ ಆರೋಗ್ಯಕ್ಕೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳಾದ ದಂತಕುಳಿ, ಹಲ್ಲುಗಳು ತುಂಡಾಗುವುದು, ಒಸಡುಗಳ ಕಿರಿಕಿರಿ ಮತ್ತು ದುರ್ಬಲ ಹಲ್ಲಿನ ಬೇರುಗಳ ಸಮಸ್ಯೆಯಾಗಬಹುದು.

**ಕ್ಯಾಲ್ಸಿಯಂ ಕೊರತೆಗೆ ಕಾರಣಗಳು:** ದೇಹದಲ್ಲಿ ಕ್ಯಾಲ್ಸಿಯಂ ಕೊರತೆಗೆ ಪ್ರಮುಖ ಕಾರಣ ನಾವು ಸೇವನೆ ಮಾಡುವ ಆಹಾರ ಪದ್ಧತಿ ಎಂದು ಹೇಳಬಹುದು ಅನಾರೋಗ್ಯ ಕಾರಿ ಆಹಾರ ಪದ್ಧತಿಯಿಂದಾಗಿ ಈ ಪೋಷಕಾಂಶಗಳಲ್ಲಿ ಕೊರತೆ ಕಾಣಿಸಿ ಕೊಳ್ಳುತ್ತದೆ. ವಿಟ ಮಿನ್-ಡಿ ಕಾರಣದಿಂದಾಗಿ ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯೂ ಉಂಟಾಗುತ್ತದೆ.

**ಕ್ಯಾಲ್ಸಿಯಂ ಕೊರತೆ ಆಗದಂತೆ ನೋಡಿಕೊಳ್ಳುವುದು ಹೇಗೆ?:** ದೇಹದಲ್ಲಿ ಕ್ಯಾಲ್ಸಿಯಂ ಕೊರತೆ ಆಗದಂತೆ ನೋಡಿಕೊಳ್ಳಲು, ಮೊದಲಿಗೆ ಕ್ಯಾಲ್ಸಿಯಂ ಸಮೃದ್ಧವಾಗಿರುವ ಆಹಾರವನ್ನು ತೆಗೆದುಕೊಳ್ಳಬೇಕು. ಬೆಳಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಸೂರ್ಯನ ಬೆಳಕನ್ನು ತೆಗೆದು ಕೊಳ್ಳಬೇಕು. ಇದು ವಿಟಮಿನ್ ಡಿ ಅಗತ್ಯವನ್ನು ಪೂರೈಸುತ್ತದೆ. ಇದರ ಜೊತೆಗೆ, ನೀವು ವೈದ್ಯರನ್ನು ಕೇಳುವ ಮೂಲಕ ಕ್ಯಾಲ್ಸಿಯಂ, ವಿಟಮಿನ್ ಡಿ ಪೂರಕಗಳನ್ನು ಸಹ ತೆಗೆದುಕೊಳ್ಳಬಹುದು.

# ದೇಶದ ಉನ್ನತ ಪ್ರೀಮಿಯಂ ವಸತಿ ಶಾಲೆಗಳಲ್ಲಿ ಒಂದಾದ ಬೆಂಗಳೂರಿನ ಜೈನ್ ಇಂಟರ್‌ನ್ಯಾಶನಲ್ ರೆಸಿಡೆನ್ಶಿಯಲ್ ಸ್ಕೂಲ್

• ಉದಯವಾಹಿನಿ, ಬೆಂಗಳೂರು



SHIVEN RAJ JAIN | NISHIT MAHYANI | VAIBHAV KIRTAN RATHORE

**100% ಫಲಿತಾಂಶವನ್ನು ಸಾಧಿಸಿದೆ**

ವಾಣಿಜ್ಯ ವಿಭಾಗದ ಧ್ಯೇ ಕವತಿಯಾ 98.2% ರೊಂದಿಗೆ ಅತ್ಯಧಿಕ ಅಂಕಗಳನ್ನು ಗಳಿಸಿದರು, ನಂತರ ಖುಷ್‌ಕುಮಾರ್ ಕುಂದರಿಯಾ (ವಾಣಿಜ್ಯ) 98% ಮತ್ತು ತೇಜಸ್ ಪರ್ಮಾನಂದ್ಕ (ವಾಣಿಜ್ಯ) 97.2% ನೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ. ಗಮನಾರ್ಹವಾಗಿ, ಧ್ಯೇಕವತಿಯಾ ಮತ್ತು ಖುಷ್‌ಕುಮಾರ್ ಕುಂದರಿಯಾ ಇಬ್ಬರೂ ಮಾರ್ಕೆಟಿಂಗ್ ವಿಷಯದಲ್ಲಿ ಪರಿಪೂರ್ಣ 100 ಅಂಕಗಳನ್ನು ಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅನುಷ್ಕಾ ಮೊಹಂತಿ 94.6% ಅಂಕಗಳೊಂದಿಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಕಲಾ ವಿಭಾಗದಲ್ಲಿ ಅರುಣ್ ಇ ಶೇ. 96 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಬೆಂಗಳೂರಿನ ಜೈನ್ ಇಂಟರ್ನ್ಯಾಷನಲ್ ರೆಸಿಡೆನ್ಶಿಯಲ್ ಸ್ಕೂಲ್ (ಜೆಐಆರ್ ಎಸ್)ನ ಉಪ ಪ್ರಾಂಶುಪಾಲರಾದ ಶ್ರೀಮತಿ ಎಂ.ಎ. ಅನಿತಾ ಅವರು, ಜೈನ್ ಇಂಟರ್ನ್ಯಾಷನಲ್ ರೆಸಿಡೆನ್ಶಿಯಲ್ ಸ್ಕೂಲ್‌ನಲ್ಲಿ, ನಾವು ಪ್ರತಿ ಮಗುವನ್ನು ಗುಣಮಟ್ಟದ ಶಿಕ್ಷಣ ಮತ್ತು ಸುಸಂಗತ ಬೆಳವಣಿಗೆಯೊಂದಿಗೆ ಪೋಷಿಸುವುದರಲ್ಲಿ ನಂಬಿಕೆ ಇಡುತ್ತೇವೆ, ಅವರು ಆತ್ಮವಿಶ್ವಾಸ, ಸಮರ್ಥ ಜಾಗತಿಕ ನಾಗರಿಕರಾಗಿ ಬೆಳೆಯಲು ಸಹಾಯ ಮಾಡುತ್ತೇವೆ. ಆಧುನಿಕ ಬೋಧನಾ ಪದ್ಧತಿಗಳ ಮೂಲಕ ಬಲವಾದ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಪ್ರೋತ್ಸಾಹಿಸುವುದರ ಜೊತೆಗೆ, ನಾವು ಅವರ ದೈಹಿಕ, ಸಾಮಾಜಿಕ, ಭಾವನಾತ್ಮಕ, ಆಧ್ಯಾತ್ಮಿಕ ಬೆಳವಣಿಗೆಗೆ ಸಮಾನ ಗಮನ ನೀಡುತ್ತೇವೆ.

ನಮ್ಮ 2024-25 ಬ್ಯಾಚ್ ವಿದ್ಯಾರ್ಥಿಗಳ ಸಾಧನೆಗಳನ್ನು ಹಂಚಿಕೊಳ್ಳಲು ನನಗೆ ಅಪಾರ ಸಂತೋಷ, ಹೆಮ್ಮೆಯಿದೆ. ನಮ್ಮ ವಿದ್ಯಾರ್ಥಿಗಳು ನಮ್ಮ ಎಲ್ಲಾ ವಿದ್ಯಾರ್ಥಿಗಳು ಉನ್ನತ ಗುರಿಯನ್ನು ಸಾಧಿಸಲು, ತಮ್ಮ ಅತ್ಯುತ್ತಮವಾದದ್ದನ್ನು ನೀಡಲು ಪ್ರೇರೇಪಿಸುವ ಉಜ್ವಲ ಉದಾಹರಣೆಯನ್ನು ನೀಡುವ ಮೂಲಕ ಅಸಾಧಾರಣವಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ವಿದ್ಯಾರ್ಥಿಗಳನ್ನು ಪೋಷಿಸುವಲ್ಲಿ ಅವರ ಸಮರ್ಪಣೆ ಮತ್ತು ಪ್ರಯತ್ನಕ್ಕಾಗಿ ನಮ್ಮ ಶಿಕ್ಷಕರನ್ನು ನಾವು ಅಭಿನಂದಿಸುತ್ತೇವೆ ಎಂದು ಹೇಳಿದರು.

# ಕೂದಲು ಅತಿಯಾಗಿ ಉದುರುತ್ತಿದೆಯಾ? ವಿಟಮಿನ್ ಕೊರತೆ ಕಾರಣವಿರಬಹುದು ನೋಡಿ

ಚಿಕ್ಕ ವಯಸ್ಸಿನಲ್ಲಿಯೇ ಕೂದಲು ಉದುರಲು ಶುರುವಾಗುತ್ತದೆ, ಈ ಸಮಸ್ಯೆಯಿಂದ ಹೊರಬರಲು ಮಾರುಕಟ್ಟೆಯಿಂದ ಅನೇಕ ರೀತಿಯ ದುಬಾರಿ ಉತ್ಪನ್ನಗಳನ್ನು ಖರೀದಿಸಿದರೂ ಪ್ರಯೋಜನವಾಗುವುದಿಲ್ಲ. ಕೆಲವೊಮ್ಮೆ ವಿಟಮಿನ್ ಕೊರತೆಯಿಂದಲೂ ಕೂದಲು ಉದುರಲು ಪ್ರಾರಂಭವಾಗಬಹುದು. ಯಾವ ಜೀವಸತ್ವಗಳ ಕೊರತೆ ಕೂದಲು ಉದುರಲು ಕಾರಣವಾಗಬಹುದು, ಈ ಸಮಸ್ಯೆಯಿಂದ ಹೊರಬರಲು ಏನು ಮಾಡಬೇಕು ಎಂದು ಇಲ್ಲಿ ವಿವರವಾಗಿ ತಿಳಿಸಿದ್ದೇವೆ.



**ವಿಟಮಿನ್ ಎ:** ನಿಮ್ಮ ದೇಹದಲ್ಲಿ ವಿಟಮಿನ್ ಎ ಕೊರತೆಯಿದ್ದರೆ ಕೂದಲು ಉದುರುವುದು ಸಹಜ. ವಾಸ್ತವವಾಗಿ ಇದು ನೆತ್ತಿಯಲ್ಲಿ ಸೆಬಮ್ ಉತ್ಪಾದನೆಯನ್ನು ನಿಯಂತ್ರಿಸುತ್ತದೆ. ಆದಾಗ್ಯೂ, ಇದರ ಕೊರತೆ, ಅಧಿಕ ಎರಡೂ ಕೂದಲಿಗೆ ಹಾನಿಕಾರಕ. ನಿಮ್ಮ ಆಹಾರದಲ್ಲಿ ಕ್ಯಾರೆಟ್, ಸಿಹಿ ಗೆಣಸು ಮತ್ತು ಹಾಲನ್ನು ಸೇರಿಸಿಕೊಂಡಾಗ ವಿಟಮಿನ್ ಎ ಕೊರತೆಯನ್ನು ನೀಗಿಸಬಹುದು.

**ವಿಟಮಿನ್ ಬಿ7 (ಬಯೋಟಿನ್):** ಇದು ಕೂದಲಿನ ಬೆಳವಣಿಗೆಗೆ ಅಗತ್ಯವಾದ ವಿಟಮಿನ್. ಇದು ಕೂದಲನ್ನು ಹೊಳೆಯುವಂತೆ ಮಾಡುತ್ತದೆ. ಇದರ ಕೊರತೆಯಿಂದಾಗಿ ಕೂದಲು ದುರ್ಬಲಗೊಂಡು ಕೂದಲು ಉದುರಲು ಪ್ರಾರಂಭಿಸುತ್ತದೆ. ಈ ಕೊರತೆಯನ್ನು ನೀಗಿಸಲು, ನೀವು ನಿಮ್ಮ ದೇಹಕ್ಕೆ ಅಗತ್ಯ ಪ್ರಮಾಣದ ಮೊಟ್ಟೆ, ಬೀಜಗಳು, ಸೋಯಾ ಅಥವಾ ಧಾನ್ಯಗಳನ್ನು ತಿನ್ನಲು ಪ್ರಾರಂಭಿಸಬೇಕು. ಬಯೋಟಿನ್ ಕೂದಲ ಆರೋಗ್ಯಕ್ಕೆ ಪ್ರಮುಖ ವಿಟಮಿನ್ ಆಗಿದೆ.

**ವಿಟಮಿನ್ ಇ:** ವಿಟಮಿನ್ ಇ ಒಂದು ಉತ್ಕರ್ಷಣ ನಿರೋಧಕವಾಗಿದೆ. ಇದು ನೆತ್ತಿಯ ಆರೋಗ್ಯವನ್ನು ಸುಧಾರಿಸುತ್ತದೆ ಮತ್ತು ಕೂದಲಿಗೆ ಪೋಷಣೆಯನ್ನು ನೀಡುತ್ತದೆ.

# ಶ್ರೀ ಶಂಕರಾಚಾರ್ಯರು ಅವತರಿಸದಿದ್ದರೆ ನಾವು ಹಿಂದುಗಳಾಗಿ ಉಳಿಯುತ್ತಿರಲಿಲ್ಲ ನಿತ್ಯ ಶಂಕರಾಚಾರ್ಯರ ವಿಗ್ರಹಕ್ಕೆ ಭಾವಚಿತ್ರಕ್ಕೆ ಹೂವನ್ನು ಸಮರ್ಪಿಸಬೇಕು

• ವಿನುತ ಎಸ್ ಜೋಶಿ

ಶಂಕರಾಧ್ಯಯನ ಬಳಗ, ಕಲಬುರಗಿ ವತಿಯಿಂದ ನಗರದ ಕರುಣೇಶ್ವರ ನಗರದಲ್ಲಿರುವ ಜೈ ವೀರ ಹನುಮಾನ್ ಮಂದಿರದಲ್ಲಿ ಶಂಕರ ಜಯಂತೀ ಕಾರ್ಯಕ್ರಮವನ್ನು ಅತ್ಯಂತ ವಿನೂತನವಾಗಿ ಆಚರಿಸಲಾಯಿತು.

ಶ್ರೀ ಶಂಕರಾಚಾರ್ಯರ ದಿವ್ಯ ಜೀವನ ಚರಿತ್ರೆಯ ಉಪಲಬ್ಧ ಅತ್ಯಂತ ಪ್ರಾಚೀನವಾದ ಹಾಗೂ ಪರಮ ಪ್ರಾಮಾಣಿಕವಾದ ಮಾಧವೀಯ ಶಂಕರದಿಗ್ವಿಜಯ ಗ್ರಂಥದ ಸಂಕ್ಷೇಪರೂಪವಾದ ಮಾಧವೀಯ ಶಂಕರದಿಗ್ವಿಜಯ ಸಾರ ಎಂಬ ಗ್ರಂಥದ ಪಾರಾಯಣ ಮಾಡುವ ಮೂಲಕ ವಿಶೇಷವಾಗಿ ಆಚರಿಸಲಾಯಿತು. 108 ಜನ ಶಂಕರ ಭಕ್ತರು ಒಂದು ಕಡೆ ಸೇರಿ ಸಾಮೂಹಿಕವಾಗಿ ಸ್ಪಷ್ಟವಾಗಿ ಸುಶ್ರಾವ್ಯವಾಗಿ ಏಕ ಕಂಠದಲ್ಲಿ ಪಾರಾಯಣ ಮಾಡಿದ್ದು ಅಭೂತಪೂರ್ವವಾಗಿತ್ತು. ಈ ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಶಿರಳಗಿಯಲ್ಲಿರುವ ಶ್ರೀ ಚೈತನ್ಯ ರಾಜಾರಾಮ ಮಠದ ಸ್ವಾಮಿಗಳಾದ ಶ್ರೀ ಶ್ರೀ ಶ್ರೀಬ್ರಹ್ಮಾನಂದ ಭಾರತೀ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ ಆಸ್ತಿಕ ಮಹಾಜನರನ್ನು ಅನುಗ್ರಹಿಸಿದರು.



ಗುರುಗಳು ತಮ್ಮ ಅನುಗ್ರಹ ಭಾಷಣದಲ್ಲಿ, ಅಂದು ಶ್ರೀ ಶಂಕರಾಚಾರ್ಯರು ಅವತರಿಸದಿದ್ದರೇ ಇಂದು ನಾವು ಹಿಂದುಗಳಾಗಿಯೇ ಉಳಿಯುತ್ತಿರಲಿಲ್ಲ. ಬಾಹ್ಯ ಆಕ್ರಮಣ ಮತ್ತು ಆಂತರಿಕ ಕಲಹಗಳಿಂದ ಜರ್ಜರಿತವಾದ ವೈದಿಕ ಧರ್ಮವನ್ನು ಪುನರುಜ್ಜೀವನಗಳಿಸಿದರು. 72 ಅವೈದಿಕ ಮತಗಳು ಅರ್ಥಾತ್ ವೈದಿಕ ಸಿದ್ಧಾಂತದಿಂದ ವಿಮುಖರಾದವರನ್ನು ಕೇವಲ ವಾದ-ಸಂವಾದಗಳಿಂದಲೇ ಮನವೊಲಿಸಿ ಮುಖ್ಯ ವಾಹಿನಿಗೆ ಕರತಂದು ಮತ್ತೆ ವೈದಿಕ ಧರ್ಮವನ್ನು ಪ್ರತಿಷ್ಠಾಪಿಸಿದರು.

ಅಂತಹ ಮಹನೀ ಯರನ್ನು ನಾವುಗಳು ಪ್ರತಿನಿತ್ಯ ಸ್ಮರಿಸಿಕೊಳ್ಳಬೇಕು. ನಿತ್ಯ ಶಂಕರಾಚಾರ್ಯರ ವಿಗ್ರಹಕ್ಕೆ ಅಥವಾ ಭಾವಚಿತ್ರಕ್ಕೆ ಒಂದು ಹೂವನ್ನಾದರೂ ಸಮರ್ಪಿಸಬೇಕು ಎಂದು ಹೇಳಿದರು. ಅಲ್ಲದೇ ಶಂಕರರ ದಿವ್ಯ ಚರಿತ್ರೆಯ ಸಾಮೂಹಿಕ ಪಾರಾಯಣ ಕಾರ್ಯಕ್ರಮ ಶಂಕರ ಜಯಂತಾ ಆಚರಣೆಗ ಮಾದರಿ, ಎಂದು ಕೊಂಡಾಡಿದರು, ಎಲ್ಲಾ ಜಿಲ್ಲೆಗಳಲ್ಲಿ ಈ ರೀತಿ ಶಂಕರ ದಿಗ್ವಿಜಯ ಪಾರಾಯಣ ನಡೆಯಬೇಕೆಂದು ಆಶಿಸಿದರು. ಈ ಕಾರ್ಯಕ್ರಮದ ಮುಖ್ಯರೂವಾರಿಯಾದ ವೇ.ಮೂ. ಡಾ. ಯೋಗೇಶ ಮೋಹನಭಟ್ ಜೋಶಿ ಯವರು ಶಂಕರ ದಿಗ್ವಿಜಯದ ಪಾಠ ಮಾಡಿದ್ದಲ್ಲದೇ ಪಾರಾಯಣದ ನೇತೃತ್ವ ವಹಿಸಿ ಯಶಸ್ವಿಗೊಳಿಸಿದರು. ಶ್ರೀ ಜೈ ವೀರ ಹನುಮಾನ್ ದೇವಸ್ಥಾನದ ನಿಕಟ ಪೂರ್ವ ಅಧ್ಯಕ್ಷರಾದ ಶೇಷಗಿರಿರಾವ್ ಕುಲಕರ್ಣಿ, ಕಾರ್ಯದರ್ಶಿ ವಿಶ್ವಾಸ್ ಮೊಘೇಕರ್, ವಿನುತ ಜೋಶಿ ಶ್ರೀಪಾದಂಗಳವರಿಗೆ ದೇವಸ್ಥಾನದ ವತಿಯಿಂದ ಫಲಪುಷ್ಪ ಮತ್ತು ಜೈವೀರ್ ಹನುಮಂತನ ಭಾವಚಿತ್ರ ಸಮರ್ಪಣೆ ಮಾಡಿದರು. ನಗರದ ಗಂಗೋತ್ರೀ ವೇದಪಾಠಶಾಲೆಯ ಸಂಸ್ಥಾಪಕರು, ಪ್ರಧಾನಾಧ್ಯಾಪಕರೂ ಆದ ವೇ. ಮೂ. ಮೋಹನಭಟ್ ಜೋಶಿ, ಶ್ರೀ ಪಿ.ಹೆಚ್. ಕುಲಕರಣಿ, ಶ್ರೀ ರಾಘವೇಂದ್ರರಾವ ಆಗೂಡಕರ್, ಜೆಡಿಎ ಮಾಜೀ ಅಧ್ಯಕ್ಷರಾದ ಶ್ರೀ ವಿದ್ಯಾಸಾಗರ ಕುಲ್ಕರ್ಣಿ, ಮತ್ತಿತರ ಗಣ್ಯರು ಸಾಕ್ಷಿಯಾದರು. ಶಂಕರಾಧ್ಯಯನ ಬಳಗದ ಸಂಚಾಲಕರಾದ ಶ್ರೀ ಮಹೇಶ ಚಿಲ್ಲಾಪೂರಕರ್ ರವರು ಕಾರ್ಯಕ್ರಮ ನಿರ್ವಹಿಸಿದರು. ವೇ.ಮೂ. ಲೋಕೇಶ ಮೋಹನಭಟ್ ಜೋಶಿ ಅವರು ವಂದನಾರ್ಪಣೆ ಸಲ್ಲಿಸಿದರು.

### ಚಿತ್ತಾಪುರ ಕ್ಷೇತ್ರದ 87 ಹಳ್ಳಿ ಅಭಿವೃದ್ಧಿಗೆ ನೀಲಿ ನಕ್ಷೆ ಸಿದ್ಧ,150 ಕೋಟಿ ರೂ. ವೆಚ್ಚದಲ್ಲಿ ಗ್ರಾಮಾಭಿವೃದ್ಧಿ: ಪ್ರಿಯಾಂಕ್ ಖರ್ಗೆ

# ಚಿತ್ತಾಪುರ-ವಾಡಿ ಕುಡಿಯುವ ನೀರು ಯೋಜನೆಗೆ ಅಡಿಗಲ್ಲು

• ಉದಯವಾಹಿನಿ ಕಲಬುರಗಿ

ಚಿತ್ತಾಪುರ ಕ್ಷೇತ್ರದಾದ್ಯಂತ ರಾಜ್ಯದಲ್ಲಿಯೇ ಮಾದರಿಯಾಗಿ 150 ಕೋಟಿ ರೂ. ವೆಚ್ಚದಲ್ಲಿ 87 ಹಳ್ಳಿಗಳ ಗ್ರಾಮಾಭಿವೃದ್ಧಿಗೆ ನೀಲಿ ನಕ್ಷೆ ಸಿದ್ದಪಡಿಸಿದ್ದು, ಇನ್ನು 15 ದಿನದಲ್ಲಿ ಇದಕ್ಕೆ ಚಾಲನೆ ನೀಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮಂಗಳವಾರ ಚಿತ್ತಾಪುರ ಪಟ್ಟಣದಲ್ಲಿ ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿ ಕಾಗಿಣಾ ನದಿ ಮೂಲದಿಂದ 45.53 ಕೋಟಿ ರೂ. ವೆಚ್ಚದಲ್ಲಿ ಚಿತ್ತಾಪುರ ಪಟ್ಟಣಕ್ಕೆ ಸುಧಾರಿತ ಕುಡಿಯುವ ನೀರು ಯೋಜನೆ ಮತ್ತು 32.81ಕೋಟಿ ರೂ. ವೆಚ್ಚದಲ್ಲಿ ಭೀಮಾ ನದಿ ಮೂಲದಿಂದ ವಾಡಿ ಪಟ್ಟಣಕ್ಕೆ ಸುಧಾರಿತ ಕುಡಿಯುವ ನೀರು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.


ಉದಯವಾಹಿನಿ ಚಿತ್ರ

### ಐಟಿ ಬಿಟಿಯಲ್ಲಿ ಪ್ರಗತಿ

ಮೊದಲ ಬಾರಿಗೆ ಶಾಸಕ ಸ್ಥಾನಕ್ಕೆ ಸ್ಪರ್ಧಿಸುವ ಸಂದರ್ಭದಲ್ಲಿ ನಮಗೆ ಟಿಕೇಟ್ ನೀಡಲು ವಿರೋಧ ವ್ಯಕ್ತವಾಗಿತ್ತು. ಇನ್ನು ನಾನು ಮೊದಲ ಬಾರಿಗೆ ಐ.ಟಿ.-ಬಿ.ಟಿ ಸಚಿವನಾದ ನಂತರ ಪತ್ರಿಕೆಗಳು ಕೂಡಾ ಹಿಂದುಳಿದ ಚಿತ್ರಾಪುರ ಕ್ಷೇತ್ರದ ಶಾಸಕನಿಗೆ ಐ.ಟಿ. ಮಂತ್ರಿ ಮಾಡಲಾಗಿದೆ ಎಂದು ನನ್ನ ಬಗ್ಗೆ ವ್ಯಂಗ್ಯವಾಗಿ ಹೆಡ್ ಲೈನ್ ಕೊಟ್ಟರು. ಆಗ ಹಿರಿಯ ನಾಯಕ ಎಸ್.ಆರ್.ಪಾಟೀಲ್ ಅವರ ಬಳಿ ಇದ್ದ ಐಟಿ-ಬಿಟಿ ಖಾತೆ ನನಗೆ ನೀಡಿದ್ದರು. ನಾನು ಐಟಿ-ಬಿಟಿ ಸಚಿವನಾದ ನಂತರ ಕೆಲ ವರ್ಷಗಳಲ್ಲಿ ಚಿತ್ತಾಪುರ ಶಾಸಕರನ್ನೆ ಐಟಿ-ಬಿಟಿ ಸಚಿವರನ್ನಾಗಿ ಮಾಡಿ ಎಂದು ಎಲ್ಲರೂ ಒತ್ತಾಯಿಸಿದ್ದರು. ಇದಕ್ಕೆಲ್ಲಾ ನಿಮ್ಮ ಆಶೀರ್ವಾದವೇ ಕಾರಣ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಗ್ರಾಮೀಣಾಭಿವೃದ್ಧಿ ಇಲಾಖೆ ಅಡಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದ ಸಚಿವರು, ರಾಜ್ಯಾದ್ಯಂತ ಪ್ರಗತಿ ಪಥ ಮತ್ತು ಕಲ್ಯಾಣ ಪಥ ಯೋಜನೆಯಡಿ 8,260 ಕಿ.ಮೀ ಹಳ್ಳಿ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ.

5,770 ಅರಿವು ಕೇಂದ್ರಗಳನ್ನು ಸ್ಥಾಪಿಸಿ ಗ್ರಾಮೀಣ ಭಾಗದ ಯುವಕ ಯುವತಿಯರಿಗಾಗಿ ಜ್ಞಾನಾರ್ಜನೆ ನೀಡಲಾಗುತ್ತಿದೆ. ಜಿಲ್ಲೆಯ ಎಲ್ಲಾ ಅರಿವು ಕೇಂದ್ರಗಳನ್ನು ಮುಂದಿನ 3 ವರ್ಷದಲ್ಲಿ ಡಿಜಿಟಲೀಕರಣ ಮಾಡಲಾಗುವುದು ಎಂದರು. ಇಂದಿಲ್ಲಿ ಸುಮಾರು 78.74 ಕೋಟಿ ರೂ. ವೆಚ್ಚದ ಕುಡಿಯುವ ನೀರು ಕಾಮಗಾರಿಗೆ ಅಡಿಗಲ್ಲು, 8.50 ಕೋಟಿ ರೂ. ಮೊತ್ತದ ಕಾಮಗಾರಿಯನ್ನು ಲೋಕಾರ್ಪಣೆಗೊಳಿಸಲಾಗಿದೆ. ಮುಂದೆ 18 ತಿಂಗಳಿನಲ್ಲಿ ಚಿತ್ತಾಪುರ ಮತ್ತು ವಾಡಿ ಕುಡಿಯುವ ನೀರು ಯೋಜನೆ ಸಾಕಾರಗೊಂಡು ಪ್ರತಿ ವ್ಯಕ್ತಿಗೆ ತಲಾ 125 ಲೀಟರ್ ನೀರು ಸಿಗಲಿದೆ ಎಂದರು.

### ದಾಖಲೆಯ ಕರ ಸಂಗ್ರಹ

ರಾಜ್ಯದಲ್ಲಿ ಈ ಸಲ ಗ್ರಾಮ ಪಂಚಾಯತಿಗಳಿಂದ ಒಟ್ಟು 1,281 ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ. ಇದು ದಾಖಲೆಯ ಕರ ಸಂಗ್ರಹ. ನರೇಗಾ ಯೋಜನೆಯಡಿಯಲ್ಲಿ ತಾಯಂದಿರು ಕೆಲಸ ಮಾಡಲು ಹೋದಾಗ ಅವರ ಮಕ್ಕಳನ್ನು ಬಿಟ್ಟು ಹೋಗಲು 3,867 ಕೂಸಿನ ಮನೆ ಗಳನ್ನು ಸ್ಥಾಪಿಸಲಾಗಿದ್ದು ಅಲ್ಲಿ ಸುಮಾರು 50,000 ಮಕ್ಕಳನ್ನು ಆರೈಕೆ ಮಾಡಲಾಗುತ್ತಿದೆ. ತಾಲ್ಲೂಕಿನ ಗುಂಡಗುರ್ತಿಯಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಉತ್ಪಾದಿಸುವ ಸೋಲಾರ ಗ್ರಿಡ್ ಸ್ಥಾಪಿಸಲಾಗುತ್ತಿದೆ. ಇದರಿಂದ ಗ್ರಾಮಗಳು ಸ್ವಂತ ವಿದ್ಯುತ್ ಉತ್ಪಾದಿಸಲಿವೆ ಎಂದರು.

**ಉಪಕಾರವಲ್ಲ, ಋಣ ತೀರಿಸುತ್ತಿರುವೆ:**

ಚಿತ್ತಾಪುರ ಕ್ಷೇತ್ರದ ಶಾಸಕನಾಗಿ ಮತ್ತು ಮತದಾರರ ಸೇವಕನಾಗಿ ಪ್ರಗತಿಪರ ಕೆಲಸಗಳನ್ನು ಮಾಡುತ್ತಿರುವೆ. ಸಾರ್ವಜನಿಕರ ಕೆಲಸ ಮಾಡುವುದು ನನ್ನ ಧರ್ಮ ಮತ್ತು ಪರಮ ಕರ್ತವ್ಯವಾಗಿದೆ.

ತಾಲ್ಲೂಕಿನಲ್ಲಿ ಮೂಲಭೂತ ಸೌಕರ್ಯ, ಶೈಕ್ಷಣಿಕ ಪ್ರಗತಿ ಸೇರಿದಂತೆ ನೀರಾವರಿ ಯೋಜನೆಗಳ ಅಭಿವೃದ್ದಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ.

> ಪ್ರತಿಷ್ಠಿತ ಸಂಸ್ಥೆಗಳಿಂದ ಹಳ್ಳಿ ಬದುಕು ಹಸನಗೊಳಿಸಲು ಸಂಪೂರ್ಣ ಗ್ರಾಮಾಭಿವೃದ್ಧಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. ಜನಸಂಖ್ಯೆ ಅನುಗುಣವಾಗಿ ಪ್ರತಿ ಹಳ್ಳಿಗೆ 1 ರಿಂದ 3.50 ಕೋಟಿ ರೂ. ಅನುದಾನ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ನೀಡಲಾಗುವುದು. ಇದರ ಜೊತೆಗೆ ವಾಡಿ ಮತ್ತು ಚಿತ್ತಾಪುರ ಪಟ್ಟಣ ಸಹ ತಲಾ 150 ಕೋಟಿ ರೂ. ವೆಚ್ಚದಲ್ಲಿ ಅಧುನಿಕ ಮೂಲಸೌಕರ್ಯ ಕಲ್ಪಿಸಿ ನಾಗರಿಕರಿಗೆ ಅನುಕೂಲ ಮಾಡಿಕೊಡಲಾಗುವುದು
>
> -ಪ್ರಿಯಾಂಕ್ ಖರ್ಗೆ, ಸಚಿವ

ನನ್ನ ಅವಧಿಯಲ್ಲಿ ಶಕ್ತಿಮೀರಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನೀವು ಎಷ್ಟು ಶಕ್ತಿ ತುಂಬುತ್ತಿರೋ ಮತ್ತಷ್ಟು ಕೆಲಸ ಮಾಡುತ್ತೇನೆ. ಇಲ್ಲಿ ನಾನು ಯಾವುದೇ ಉಪಕಾರ ಮಾಡುತ್ತಿಲ್ಲ. ಬದಲಾಗಿ ಚುನಾವಣೆಯಲ್ಲಿ ನೀವು ನೀಡಿದ ಒಂದು ಮತಕ್ಕೆ ಉತ್ತರವಾಗಿ ನಿಮ್ಮ ಋಣ ತೀರಿಸುತ್ತಿರುವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

## ಕೊಳಚೆ ಪ್ರದೇಶ ನಿವಾಸಿಗಳಿಗೆ ಉಚಿತ ಯೋಗ ತರಬೇತಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

> ಆರೋಗ್ಯವೇ ಭಾಗ್ಯ ಎಂಬಂತೆ, ಆರೋಗ್ಯವನ್ನು ಕಾಪಾಡಿಕೊಳ್ಳುವುದು ಎಲ್ಲರ ಹಕ್ಕು. ಹಣದ ಕೊರತೆಯಿಂದ ಯಾರೂ ಚಿಕಿತ್ಸೆಗೆ ದೂರ ಉಳಿಯಬಾರದು ಎಂಬ ಆಶಯದೊಂದಿಗೆ ಹಾಗೂ ಎಲ್ಲರಿಗೂ ಆರೋಗ್ಯದ ಹಕ್ಕನ್ನು ಕೊಡುವ ಗುರಿಯೊಂದಿಗೆ ಜಾರಿಗೊಳಿಸಿದ ಯೋಜನೆಯೇ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಇದರಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಉಚಿತ ಯೋಗ ತರಬೇತಿ ನೀಡುವ ಯೋಜನೆ ತುಂಬಾ ಮಹತ್ವದ್ದಾಗಿದೆ ನಮ್ಮ ದೈನಂದಿನ ಜೀವನದಲ್ಲಿ ಯೋಗದ ಮಹತ್ವದ್ದಾಗಿದೆ ಯೋಗವು ದೈಹಿಕ ಆರೋಗ್ಯ, ಮಾನಸಿಕ ಧೃಢತೆ ಹೆಚ್ಚಿಸುತ್ತದೆ, ಸಮತೋಲಿತ ಮತ್ತು ಸಾಮರಸ್ಯದ ದೈನಂದಿನ ಜೀವನಕ್ಕಾಗಿ ನಿತ್ಯ ಯೋಗಭ್ಯಾದ ಅತಿಅವಶ್ಯಕ -ಕು.ಪ್ರಿಯಾ, ಅಳಗವಾಡಿ ಆಯುಷ್ಮಾನ್ ಆರೋಗ್ಯ ಮಂದಿರದ ಸಮುದಾಯ ಆರೋಗ್ಯಾಧಿಕಾರಿ

ಜಿಲ್ಲಾ ಪಂಚಾಯತಿ ಚಿತ್ರದುರ್ಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿತ್ರದುರ್ಗ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇ ಗುಂಟನೂರು ಇವರುಗಳ ಸಹಯೋಗದಲ್ಲಿ ಸಿರಿಗೆರೆಯ ಅಳಗವಾಡಿ ಗ್ರಾಮದ ಆಯುಷ್ಮಾನ್ ಆರೋಗ್ಯ ಮಂದಿರ ವತಿಯಿಂದ ಅಳಗವಾಡಿ ಗ್ರಾಮದ ಹಟ್ಟಿ ಮಾರಮ್ಮ ದೇವಸ್ಥಾನದ ಆವರಣದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ವಿಶೇಷ ಯೋಗ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತು.

ಸಂಪನ್ಮೂಲ ವ್ಯಕ್ತಿಯಾಗಿ ಯೋಗ ತರಬೇತಿ ನೀಡಿ ಮಾತನಾಡಿದ ಯೋಗ ತರಬೇತುದಾರ ರವಿ ಕೆ.ಅಂಬೇಕರ್ ಮಾತನಾಡಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರು ಸಾಮಾನ್ಯವಾಗಿ ಅಸುಚಿತ್ವ ವಾತಾವರಣ, ಕಲುಷಿತ ನೀರು ಮತ್ತು ಅನಾರೋಗ್ಯಕರ ಜೀವನಶೈಲಿಯಿಂದಾಗಿ ಅನೇಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ.

ಇಂತಹವರಲ್ಲಿ ಯೋಗವು ದೇಹವನ್ನು ಬಲಪಡಿಸಲು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ಉಸಿರಾಟದ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಪ್ರತಿದಿನದ ಅಭ್ಯಾಸ ಮಾಡುವ ಸರಳವಾದ ಯೋಗಾಸನಗಳು ಮತ್ತು ಪ್ರಾಣಾಯಾಮವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುತ್ತದೆ ಅದಕ್ಕಾಗಿ ಆಯುಷ್ಮಾನ್ ಭಾರತ ಯೋಜನೆಯಲ್ಲಿ ಸರ್ಕಾರಿ ಆರೋಗ್ಯಂದಿರಗಳಲ್ಲಿ ನೀಡಲಾಗುವ ಉಚಿತ ಯೋಗ ತರಬೇತಿಯನ್ನು ಪ್ರತಿಯೊಬ್ಬರೂ ಕಲಿತು ಆರೋಗ್ಯಕರ ಜೀವನ ನಡೆಸುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಆಶಾ ಕಾರ್ಯಕರ್ತೆಯರಾದ ಶ್ರೀಮತಿ ಮಮತ , ಶಾರದಮ್ಮ, ಅಳಗವಾಡಿ ಆಯುಷ್ ಆರೋಗ್ಯ ಮಂದಿರದ ಯೋಗ ಶಿಕ್ಷಕಿ ಶ್ರೀಮತಿ ರೂಪ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳು ಶ್ರಮಪಟ್ಟು ಭವಿಷ್ಯ ರೂಪಿಸಿಕೊಳ್ಳಿ

• ಉದಯವಾಹಿನಿ ಸೊರಬ


ಉದಯವಾಹಿನಿ ಚಿತ್ರ

ಉತ್ತಮ ಭವಿಷ್ಯಕ್ಕೆ ಬಾಲ್ಯ ಮತ್ತು ಯೌವನದ ಜೀವನ ಪ್ರಮುಖ ಘಟ್ಟ. ಬಾಲ್ಯದಲ್ಲಿ ಉತ್ತಮ ಸಂಸ್ಕಾರ ಮತ್ತು ಯೌವನದಲ್ಲಿ ಸೂಕ್ತ ಶಿಕ್ಷಣ ಸಿಕ್ಕರೆ ಶ್ರೇಷ್ಠ ವ್ಯಕ್ತಿಗಳಾಗಬಹುದು. ವಿದ್ಯಾರ್ಥಿಗಳು ಶ್ರಮಪಟ್ಟು ಶಿಕ್ಷಣ ಪಡೆದು ಭವಿಷ್ಯ ರೂಪಿಸಿಕೊಳ್ಳಬೇಕು' ಎಂದು ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2024-25ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ. ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್‌ಕ್ರಾಸ್, ರೋವರ್ಸ್ ರೇಂಜರ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಸಮಾಜಮುಖಿ ಕಾರ್ಯದಲ್ಲಿ ತೊಡಗಬೇಕು. ಕ್ರೀಡೆ, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಎಸ್‌ಎಸ್ ಶಿಬಿರದಲ್ಲಿ ಸಕ್ರೀಯವಾಗಿ ಭಾಗಿಯಾಗಬೇಕು. ಇದರಿಂದ ನಾಯಕತ್ವ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ಸಲಹೆ ನೀಡಿದರು.

### ಅಭಿವೃದ್ಧಿ ಶಿಕ್ಷಣದಿಂದ ಮಾತ್ರಸಾಧ್ಯ

'ತಂದೆ ಎಸ್.ಬಂಗಾರಪ್ಪ ಅವರು ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ಈ ಕಾಲೇಜು ಆರಂಭವಾಗಿತ್ತು. ಇದರಿಂದ ಸಾವಿರಾರು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗಿದೆ.

ಈ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಬೇಕಾಗಿರುವ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಶಿಕ್ಷಣ ಸಚಿವನಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಲವು ಬದಲಾವಣೆಗಳನ್ನು ತಂದಿದ್ದು, ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಸಾಧ್ಯವಾಗುತ್ತದೆ.

ದೇಶದಲ್ಲಿ ಯಾವುದೇ ಬದಲಾವಣೆ, ಅಭಿವೃದ್ಧಿ ಆಗುವುದಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

## ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಿ: ಡಾ.ಶಶಿಧರ

• ಉದಯವಾಹಿನಿ ಹುಬ್ಬಳ್ಳಿ



ಉದಯವಾಹಿನಿ ಚಿತ್ರ

ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳು ದೊರೆಯುತ್ತವೆ. ಜೀವನದಲ್ಲಿ ದೊರೆ ಯುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಅಖಿಲ ಭಾರತ ಆಕಾಶವಾಣಿಯ ಎ ಗ್ರೇಡ್ ನಾಟಕ ಕಲಾವಿದರಾದ ಡಾ.ಶಶಿಧರ ನರೇಂದ್ರ ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅಂತರ ವಲಯ ಯುವಜನೋತ್ಸವದ ಉದ್ಘಾಟನಾ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ, ಸಹನೆ, ತಾಳ್ಮೆಯನ್ನು ಮನೆಯಲ್ಲಿ ಹೇಳಿಕೊಡಬೇಕು. ಸಂಸ್ಕಾರ ಕಲಿಸದೇ ಹೋದರೆ ದುರ್ಘಟನೆಗಳು ಸಂಭವಿಸುತ್ತವೆ. ಸಪ್ತ ಸ್ವರಗಳನ್ನು ಶುದ್ಧವಾಗಿ ಹಾಡಬೇಕಾದರೆ ಕಠಿಣ ಪರಿಶ್ರಮ ಮುಖ್ಯವಾಗುತ್ತದೆ. ಭಾರತವು ಕಲೆಯನ್ನು ಪೋಷಿಸುವ ರಾಷ್ಟ್ರವಾಗಿದೆ. ವಿಶ್ವಕ್ಕೆ ಸಂಸ್ಕೃತಿ ಪಾಠ ಹೇಳಿ ಕೊಟ್ಟ ದೇಶ ನಮ್ಮದು ಎಂದು ತಿಳಿಸಿದರು.

ವೈಭವ ಸೂರ್ಯವಂಶಿ, ಡಿ.ಗುಕೇಶ, ಸೋಫಿಯಾ ಖುರೇಷಿ, ವ್ಯೂಮಿಕಾ ಅವರ ಸಾಧನೆಗೆ ಇಡೀ ವಿಶ್ವವೇ ಶ್ಲಾಘಿಸುತ್ತಿದೆ. ಮನಸ್ಸು ಮಾಡಿದರೆ ದೊಡ್ಡ ಸಾಧನೆಗಳನ್ನು ನಾವು ಮಾಡಬಹುದಾಗಿದೆ.

ನಮ್ಮ ಬದುಕನ್ನು ಸುಸಂಸ್ಕೃತ ವಾತಾವರಣದಲ್ಲಿ ನಿರ್ಮಾಣ ಮಾಡಿಕೊಳ್ಳಬೇಕು. ಸಂಸ್ಕಾರಗಳನ್ನು ನಾವು ಮೈಗೂಡಿಸಿಕೊಳ್ಳಬೇಕಾಗಿದೆ. ಸಂಸ್ಕಾರ ಕಲಿಯಲು ಯುವಜನೋತ್ಸವ ಸಹಾಯಕವಾಗಲಿದೆ. ಕಲೆಯಿಂದ ಬದುಕು ಸುಂದರವಾಗಲು ಸಾಧ್ಯ. ಇಂದು ತಾಂತ್ರಿಕತೆಯ ಜೊತೆಗೆ ಸಮಾಜಕ್ಕೆ ಪೂರಕವಾಗಿ ನಾವು ಜೀವಿಸಬೇಕಾಗಿದೆ. ಸಾಂಸ್ಕೃತಿಕತೆಯಲ್ಲಿ ಭಾರತ ವಿಶ್ವದಲ್ಲೇ ಅಗ್ರಗಣ್ಯ ಸ್ಥಾನದಲ್ಲಿದೆ ಎಂದರು.

## ಶಾಲೆಗಳಿಗೆ ಶೇ.55ರಷ್ಟು ಪಠ್ಯಪುಸ್ತಕ ಪೂರೈಕೆ

• ಉದಯವಾಹಿನಿ ಮಂಗಳೂರು

ಬೇಸಿಗೆ ರಜೆಯ ಖುಷಿಯಲ್ಲಿರುವ ಮಕ್ಕಳು ಇನ್ನೆರಡು ವಾರಗಳಲ್ಲಿ ಶಾಲೆಗೆ ಹೊರಡಲು ಅಣಿಯಾಗಲಿದ್ದಾರೆ. ಶೈಕ್ಷಣಿಕ ವರ್ಷದ ಆರಂಭದ ದಿನವೇ ಮಕ್ಕಳಿಗೆ ಹೊಸ ಪಠ್ಯಪುಸ್ತಕ ನೀಡಲು ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದ್ದು, ಈಗಾಗಲೇ ಶೇ 55ರಷ್ಟು ಪಠ್ಯಪುಸ್ತಕಗಳು ಜಿಲ್ಲೆಗೆ ಪೂರೈಕೆಯಾಗಿವೆ.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಉಚಿತವಾಗಿ ಮತ್ತು ಅನುದಾನರಹಿತ ಶಾಲೆಗಳಿಗೆ ನಿಗದಿತ ದರದಲ್ಲಿ ಸರ್ಕಾರ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುತ್ತದೆ. ಜಿಲ್ಲೆಯಿಂದ ಈ ಬಾರಿ 19.66 ಲಕ್ಷ ಉಚಿತ ಹಾಗೂ 15.69 ಲಕ್ಷ ಮಾರಾಟದ ಪಠ್ಯಪುಸ್ತಕಗಳು ಸೇರಿ ಒಟ್ಟು 35.35 ಲಕ್ಷ ಪಠ್ಯಪುಸ್ತಕಗಳ ಬೇಡಿಕೆ ಸಲ್ಲಿಸಲಾಗಿದೆ. ಅವುಗಳಲ್ಲಿ 19.74 ಲಕ್ಷ ಪಠ್ಯಪುಸ್ತಕಗಳು ಪೂರೈಕೆಯಾಗಿವೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

ಬಂಟ್ವಾಳ ತಾಲ್ಲೂಕಿನಲ್ಲಿ ಗರಿಷ್ಠ 7.61 ಲಕ್ಷ ಪಠ್ಯಪುಸ್ತಕಗಳ ಬೇಡಿಕೆ ಇದೆ. ಬೆಳ್ತಂಗಡಿ 4.99 ಲಕ್ಷ, ಮಂಗಳೂರು ಉತ್ತರ 6.17 ಲಕ್ಷ, ಮಂಗಳೂರು ದಕ್ಷಿಣ 6.16 ಲಕ್ಷ, ಮೂಡುಬಿದಿರೆ 2.09 ಲಕ್ಷ, ಪುತ್ತೂರು 5.83 ಲಕ್ಷ, ಸುಳ್ಯ 2.48 ಲಕ್ಷ ಪಠ್ಯಪುಸ್ತಕಗಳ ಬೇಡಿಕೆ ಸಲ್ಲಿಕೆಯಾಗಿದೆ. ಮುಖ್ಯ ಶಿಕ್ಷಕರ ಮೂಲಕ ಮಾಹಿತಿ ಸಂಗ್ರಹಿಸಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.


ಉದಯವಾಹಿನಿ ಚಿತ್ರ

6ರಿಂದ 10ನೇ ತರಗತಿವರೆಗೆ ಮೂರು ಕೋರ್ ವಿಷಯ, ಮೂರು ಭಾಷಾ ವಿಷಯ ಹಾಗೂ ದೈಹಿಕ ಶಿಕ್ಷಣ ಸೇರಿ ಒಟ್ಟು ಏಳು ವಿಷಯಗಳು ಇರುತ್ತವೆ. ಇವುಗಳ ಒಟ್ಟು 14 ಟೈಟಲ್‌ಗಳ ಪುಸ್ತಕಗಳು, 1ರಿಂದ 5ನೇ ತರಗತಿಗೆ ನಾಲ್ಕು ವಿಷಯಗಳು ಇದ್ದು, ಎಂಟು ಟೈಟಲ್‌ಗಳ ಪುಸ್ತಕಗಳು ಪೂರೈಕೆಯಾಗುತ್ತವೆ.

ಪ್ರೌಢಶಾಲಾ ಪುಸ್ತಕಗಳು ಹೆಚ್ಚಿನ ಪ್ರಮಾಣದಲ್ಲಿ ಬಂದಿದ್ದು, 8ರಿಂದ 10ನೇ ತರಗತಿವರೆಗೆ ಏಳು ಟೈಟಲ್‌ಗಳ ಪುಸ್ತಕಗಳು ಸರಬರಾಜಾಗಿವೆ. ಇನ್ನು ಒಂದು ವಾರದಲ್ಲಿ ಎಲ್ಲಾ ಪುಸ್ತಕಗಳೂ ಬರುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

> ನೇರವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಪುಸ್ತಕಗಳು ಬರುತ್ತವೆ. ಈಗಾಗಲೇ ಬಂದಿರುವ ಪುಸ್ತಕಗಳನ್ನು ಒಂದು ಕೇಂದ್ರದಲ್ಲಿ ಸಂಗ್ರಹಿಸಲಾಗಿದೆ. ಆಯಾ ಶಾಲೆಯ ಬೇಡಿಕೆ ಪರಿಶೀಲಿಸಿ, ವಿಷಯವಾರು ಪುಸ್ತಕಗಳನ್ನು ಪ್ರತ್ಯೇಕಿಸಿ, ಶಾಲೆಗೆ ತಲುಪಿಸಲಾಗುತ್ತದೆ. ಶಾಲೆ ಆರಂಭವಾಗುವ ಎರಡು ದಿನ ಮೊದಲು ಸ್ವಚ್ಛತಾ ಕಾರ್ಯ ನಡೆಯುತ್ತದೆ. ಅಷ್ಟರೊಳಗೆ ಎಲ್ಲ ಪಠ್ಯಪುಸ್ತಕಗಳನ್ನು ಶಾಲೆಗೆ ತಲುಪಿಸಲಾಗುತ್ತದೆ. ಪ್ರಾರಂಭೋತ್ಸವದ ದಿನವೇ ಅವುಗಳನ್ನು ಮಕ್ಕಳಿಗೆ ಕೊಡಬೇಕು ಎಂಬುದು ಇಲಾಖೆಯ ಯೋಜನೆಯಾಗಿದೆ'
>
> -ಈಶ್ವರ್, ಕ್ಷೇತ್ರ ಶಿಕ್ಷಣಾಧಿಕಾರಿ

## ಪೌರ ಕಾರ್ಮಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ

• ಉದಯವಾಹಿನಿ ಗದಗ

ಗದಗ-ಬೆಟಗೇರಿ ನಗರಸಭೆ ಪೌರ ಕಾರ್ಮಿಕರಿಗೆ ಡೆಂಗೀ ಮತ್ತು ಸಾಂಕ್ರಾಮಿಕ ರೋಗಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ಹೆಚ್.ಎಲ್ ಗಿರಡ್ಡಿ, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಗದಗ ಜಿಲ್ಲೆ ಪೌರಕಾರ್ಮಿಕರ ಶ್ರಮದಿಂದ ಸ್ವಚ್ಚತೆಯಲ್ಲಿ ಮೊದಲನೇಯ ಸ್ಥಾನದಲ್ಲಿದೆ ಎಂದು ಹೇಳಿದರು. ವಾರ್ಡುಗಳಲ್ಲಿ ಪೌರ ಕಾರ್ಮಿಕರು ತಮ್ಮ ದೈನಂದಿನ ಕಾರ್ಯಗಳಲ್ಲಿ ಟೈರ್‌ಗಳು, ಟೂಬ್, ಪ್ಲಾಸ್ಟಿಕ್ ತ್ಯಾಜ್ಯಗಳು, ವಿಲೇವಾರಿ ಮಾಡುವುದು, ಮಳೆಗಾಲದಲ್ಲಿ ನಿಂತ ನೀರುಗಳನ್ನು ಸರಾಗವಾಗಿ ಹರಿಯುವಂತೆ ಮಾಡುವುದು, ಚರಂಡಿಗಳನ್ನು ಸ್ವಚ್ಚಗೊಳಿಸುವುದು, ಮತ್ತು ಮೋಡಕಾ ವಸ್ತುಗಳಾದ ಒಡೆದ ಬಕೆಟ್, ಡಬ್ಬಿಗಳು, ಕೊಡಗಳು, ಮತ್ತು ಇತ್ಯಾದಿ ಘನ ತ್ಯಾಜ್ಯ ವಸ್ತುಗಳನ್ನು ಗುಜ್ಜರಿ ಅಂಗಡಿ ಮಾಲಿಕರಿಗೆ ಸೂಕ್ತ ಸ್ಥಳಗಳಲ್ಲಿ ಸ್ಥಳಾಂತರಗೊಳಿಸಲು ಸೂಚಿಸುವುದು. ಮಳೆಗಾಲದಲ್ಲಿ ಸಾರ್ವಜನಿಕರಿಗೆ ಡೆಂಗೀ ಕುರಿತು ನಗರಸಭೆಯ ಕಸದ ವಾಹನದಲ್ಲಿ ಆಡಿಯೋ ಕ್ಲಿಪ್‌ಗಳಲ್ಲಿ ಸಾರ್ವಜನಿಕರಿಗೆ ಮನ ಮುಟ್ಟುವಂತೆ ಪ್ರಚುರ ಪಡಿಸಬೇಕು ಎಂದರು.


ಉದಯವಾಹಿನಿ ಚಿತ್ರ

ಜಿಲ್ಲೆಯ ಕೀಟಜನ್ಯ ಶಾಸ್ತ್ರಜ್ಞರಾದ ಶ್ರೀಮತಿ ಅನ್ನಪೂರ್ಣ ಶೆಟ್ಟರ, ಅವರು ಮಾತನಾಡುತ್ತಾ ಈಡೀಸ್ ಸೊಳ್ಳೆಗಳು ಉತ್ಪತ್ತಿ ಹಾಗೂ ನಿಯಂತ್ರಣ ಕುರಿತು ವಿವರಿಸುತ್ತಾ ಈಡೀಸ್ ಜಾತಿಯ ಸೊಳ್ಳೆಗಳು ವಿಶಿಷ್ಟ ಲಕ್ಷಣಗಳಾದ ಹಗಲು ಹೊತ್ತಿನಲ್ಲಿ ಮನುಷ್ಯರನ್ನು ಕಚ್ಚುವವು, ಶುದ್ಧವಾದ ನೀರಿನಲ್ಲಿ ಮತ್ತು ನೀರು ಶೇಖರಣಾ ಪರಿಕರಗಳು ಘನ ತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾಗುವ ನೀರಿನಲ್ಲಿ ವಂಶಾಭಿವೃದ್ಧಿಯಾಗುವ ಕುರಿತು ವಿವರಿಸಿದರು,

### ರೋಗಗಳ ಕುರಿತು ಅರಿವು

ಈಡೀಸ್ ಸೊಳ್ಳೆಗಳು, ಮೊಟ್ಟೆಗಳು, ಸೂಕ್ತಾವ್ಯಸ್ಥೆಯಲ್ಲಿ ತಿಂಗಳ ಗಟ್ಟಲೆ ಇರುವ ಕುರಿತು ತಿಳಿಸಿ, ಪೈಯರ್ ಬಕೆಟುಗಳಲ್ಲಿ, ಸಂಗ್ರಹವಿರುವ ನೀರಿನಲ್ಲಿ ಈಡೀಸ್ ಸೊಳ್ಳೆಗಳು ಉತ್ಪತ್ತಿಯಾಗುತ್ತಿರುವ ಕುರಿತು ವಿವರಿಸಿ ಇವುಗಳ ನಿಯಂತ್ರಣಕ್ಕಾಗಿ ಟೈರ್‌ಗಳನ್ನು ಮಳೆ ನೀರು ಸಂಗ್ರಹವಾಗದಂತಾಹ ಪ್ರದೇಶಗಲ್ಲಿ ವಿಲೇವಾರಿ ಮಾಡುವುದು, ಲಾರ್ವಾ ನಾಶಕ ಬಳಸುವುದು, ಪ್ಲಾಸ್ಟಿಕ್ ಹೊದಿಕೆಯಿಂದ ನೀರು ಶೇಖರಣೆಯಾಗದಂತೆ ನೋಡಿಕೊಳ್ಳುವುದು, ಕಾರ್ಮಿಕರಿಗೆ ಸೊಳ್ಳೆ ನಿರೋಧಕಗಳನ್ನು ಬಳಸುವುದು ಅವಶ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗದಗ-ಬೆಟಗೇರಿ ನಗರ ಸಭೆಯ ಆಯುಕ್ತರಾದ ರಾಜಾರಾಂ ಶಿವಾಜಿ ಪವಾರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ರೂಪಸೇನ ಚವ್ಹಾಣ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಾರ್ಯಲಯದ ಸಿಬ್ಬಂದಿಗಳು, ಪ್ರಾಥಮಿಕ ಸುರಕ್ಷಾಧಿಕಾರಿಗಳು, ಮಲೇರಿಯಾ ಲಿಂಕ್ ವರ್ಕರಸ್ ಹಾಗೂ ಪೌರಕಾರ್ಮಿಕರು ಹಾಜರಿದ್ದರು.

ಇಬ್ರಾಹೀಂ ಮಕಾಂದಾರ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಇವರು ಸ್ವಾಗತಿಸಿದರು. ಈರಣ್ಣ ಎಸ್ ಚಲ್ಮಿ, ಹಿರಿಯ ವೈದ್ಯಕೀಯ ಪ್ರಯೋಗಾಲಯ ತಾಂತ್ರಿಕ ಅಧಿಕಾರಿಗಳು ನಿರೂಪಿಸಿದರು.

### ಯುದ್ಧ ಕ್ರಮಗಳ ಬೆಂಬಲವಾಗಲಿ ಅಥವಾ ಹಿಂಪಡೆಯುವಿಕೆಯಾಗಲಿ, ನಾವು ಕೇಂದ್ರ ಸರ್ಕಾರದೊಂದಿಗೆ ನಿಲ್ಲುತ್ತೇವೆ: ಲಕ್ಷ್ಮಿ ಹೆಬ್ಬಾಳ್ಕರ್

# ರಾಷ್ಟ್ರದ ವಿಷಯಕ್ಕೆ ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿ, ಕೇಂದ್ರದ ನಿರ್ಧಾರಕ್ಕೆ ಬದ್ಧವಾಗಿರುತ್ತೇವೆ

• ಉದಯವಾಹಿನಿ ಉಡುಪಿ

ನಮ್ಮ ನಾಯಕರು ಲೋಕಸಭೆಯಲ್ಲಿ ಹೇಳಿದಂತೆ, ರಾಷ್ಟ್ರದ ವಿಷಯಕ್ಕೆ ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿರುತ್ತೇವೆ, ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಬದ್ಧವಾಗಿರುತ್ತೇವೆ ಎಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ಜಿಲ್ಲಾ ಪಂಚಾಯತ್‌ನ ಡಾ. ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಷ್ಟ್ರೀಯ ಭದ್ರತಾ ವಿಷಯದ ಕುರಿತು ಮಾತನಾಡಿದ ಅವರು, ''ರಾಷ್ಟ್ರದ ವಿಷಯಕ್ಕೆ ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿರುತ್ತೇವೆ. ಅದು ಯುದ್ಧ ಕ್ರಮಗಳ ಬೆಂಬಲವಾಗಲಿ ಅಥವಾ ಹಿಂಪಡೆಯುವಿಕೆಯಾಗಲಿ, ನಾವು ಕೇಂದ್ರ ಸರ್ಕಾರದೊಂದಿಗೆ ನಿಲ್ಲುತ್ತೇವೆ'' ಎಂದರು.

ಮುಂಗಾರು ಸಿದ್ಧತೆಗಳ ಕುರಿತು ವಿವಿಧ ಇಲಾಖೆಗಳೊಂದಿಗೆ ನಡೆದ ಸಭೆಯ ಬಗ್ಗೆ ಮಾಹಿತಿ ನೀಡಿದ ಲಕ್ಷ್ಮಿ ಹೆಬ್ಬಾಳ್ಕರ್, ''ಉಡುಪಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ನಗರ ಅಭಿವೃದ್ಧಿ ಪ್ರಾಧಿಕಾರ ಮತ್ತು ಅರಣ್ಯ, ಮೆಸ್ಕಾಂ, ಪಿಡಬ್ಲ್ಯೂಡಿ, ಆರೋಗ್ಯ ಮತ್ತು ಕೃಷಿ ಸೇರಿದಂತೆ ಎಲ್ಲಾ ಸಂಬಂಧಿತ ಇಲಾಖೆಗಳೊಂದಿಗೆ ಮುಂಬರುವ ಮುಂಗಾರು ಮತ್ತು ಕುಡಿಯುವ ನೀರಿನ ಪೂರೈಕೆಗಾಗಿ ಸಿದ್ಧತೆಗಳನ್ನು ಪರಿಶೀಲಿಸಲು ಸಭೆ ನಡೆಸಲಾಯಿತು.


ಉದಯವಾಹಿನಿ ಚಿತ್ರ

### ಮುಂಗಾರು ಸಿದ್ಧತೆಗಳ ಕುರಿತು ಸಭೆ

ಅವಳಿ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಮುನ್ಸೂಚನೆಯನ್ನು ಐಎಂಡಿ ನೀಡಿದೆ. ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು, ನಾವು ಅಗತ್ಯ ಸೂಚನೆಗಳನ್ನು ನೀಡಿದ್ದೇವೆ. ಈಗಾಗಲೇ ಮೂರು ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ'' ಎಂದು ತಿಳಿಸಿದರು.

ಕರಾವಳಿ ಭದ್ರತಾ ಸಿದ್ಧತೆಗಳ ಬಗ್ಗೆ ವಿವರಿಸಿದ ಜಿಲ್ಲಾಧಿಕಾರಿ ಡಾ. ಕೆ. ವಿದ್ಯಾ ಕುಮಾರಿ, ಭದ್ರತಾ ಪಡೆಗಳೊಂದಿಗೆ ಡಿಐಜಿ ಸಭೆ ನಡೆಸಿ, ಕರಾವಳಿ ಪ್ರದೇಶಗಳಲ್ಲಿ ಮಾಕ್ ಡ್ರಿಲ್‌ಗಳನ್ನು ನಡೆಸಲು ಮತ್ತು ಹೆಚ್ಚಿನ ಎಚ್ಚರಿಕೆ ವಹಿಸಲು ಸೂಚನೆ ನೀಡಿದ್ದಾರೆ. ಟೆಬ್ಮಾ ಶಿಪ್‌ಯಾರ್ಡ್‌ನಲ್ಲಿ ಮಾಕ್ ಡ್ರಿಲ್ ನಡೆಸಲಾಯಿತು ಮತ್ತು ನಾಗರಿಕ ರಕ್ಷಣಾ ಅಧಿಕಾರಿಗಳು ಕೆಎಂಸಿಯ ಹಿರಿಯ ಮಿಲಿಟರಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಮುಂದುವರೆದು, 98 ಕಿಮೀ ಉಡುಪಿ ಕರಾವಳಿಯಲ್ಲಿ ಭದ್ರತಾ ಪಡೆಗಳನ್ನು ಈಗಾಗಲೇ ನಿಯೋಜಿಸಲಾಗಿದೆ.

### 8 ಕೋಟಿ ರೂ. ಬಿಡುಗಡೆ

''ದುರ್ಬಲ ಮತ್ತು ಹಳೆಯ ಮರಗಳನ್ನು ಗುರುತಿಸಿ ತೆಗೆದುಹಾಕಲು ಅರಣ್ಯ ಇಲಾಖೆಗೆ ಸೂಚನೆ ನೀಡಲಾಗಿದೆ. ಹಾನಿಗೊಳಗಾದ ವಿದ್ಯುತ್ ಕಂಬಗಳು ಮತ್ತು ತಂತಿಗಳನ್ನು ದುರಸ್ತಿ ಮಾಡಲು ಮೆಸ್ಕಾಂಗೆ ಸೂಚನೆ ನೀಡಲಾಗಿದೆ. ಅನೇಕ ಕಡೆಗಳಲ್ಲಿ ಕಾಲು ಸಂಕಗಳು ಅನಿವಾರ್ಯವಾಗಿದ್ದು, ಈ ವರ್ಷದೊಳಗೆ ಜಿಲ್ಲೆಯಲ್ಲಿ ಅಗತ್ಯ ಇರುವ ಕಡೆಗಳಲ್ಲಿ ಕಾಲುಸಂಕಗಳನ್ನು ಪೂರ್ಣಗೊಳಿಸಲಾಗುವುದು. ಇದಕ್ಕಾಗಿ ಈಗಾಗಲೇ 8 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮೀನುಗಾರರು ಪ್ರತ್ಯೇಕವಾಗಿ ಅಲ್ಲ, ಗುಂಪುಗಳಲ್ಲಿ ಮಾತ್ರ ಸಮುದ್ರಕ್ಕೆ ಇಳಿಯುವಂತೆ ಸಲಹೆ ನೀಡಲಾಗಿದೆ. ತುರ್ತು ಅಗತ್ಯಗಳಿಗಾಗಿ ಒಟ್ಟು 164 ಆರೈಕೆ ಕೇಂದ್ರಗಳು ಮತ್ತು 50 ಕ್ಕೂ ಹೆಚ್ಚು ಹಾಸಿಗೆಗಳನ್ನು ಹೊಂದಿರುವ 54 ಆಸ್ಪತ್ರೆಗಳನ್ನು ಗುರುತಿಸಲಾಗಿದೆ'' ಎಂದರು.

ಮೇ 15 ರ ನಂತರ, ವಿದ್ಯಾರ್ಥಿಗಳ ಪರೀಕ್ಷೆಗಳು ಮುಗಿದ ಬಳಿಕ, ಮಣಿಪಾಲದಲ್ಲಿರುವ ಹಾಸ್ಟೆಲ್‌ಗಳನ್ನು ತುರ್ತು ವಸತಿಗಾಗಿ ಬಳಸಬಹುದು ಎಂದು ಡಾ. ಕೆ. ವಿದ್ಯಾ ಕುಮಾರಿ ಹೇಳಿದರು.

ಎಲ್ಲಾ ರಕ್ಷಣಾ ಉಪಕರಣಗಳನ್ನು ಸಿದ್ಧವಾಗಿಡಲು ಅಗ್ನಿಶಾಮಕ ಇಲಾಖೆಗೆ ನೆ ನೀಡಲಾಗಿದೆ. ತುರ್ತು ಪರಿಸ್ಥಿತಿಗಳಿಗಾಗಿ ತರಬೇತಿ ಪಡೆದ ಈಜುಗಾರರು ಮತ್ತು ಅನುಭವಿ ಮೀನುಗಾರರನ್ನು ಕರಾವಳಿ ಎಸ್‌ಪಿ ಗುರುತಿಸಿದ್ದಾರೆ. ಕರಾವಳಿಯುದ್ದಕ್ಕೂ ಯಾವುದೇ ಅನುಮಾನಾಸ್ಪದ ಚಟುವಟಿಕೆ ಅಥವಾ ಅಪರಿಚಿತ ವ್ಯಕ್ತಿಗಳು ಕಂಡುಬಂದಲ್ಲಿ ವರದಿ ಮಾಡಲು ಅವರಿಗೆ ನಿರ್ದೇಶನ ನೀಡಲಾಗಿದೆ.

ಜಿಲ್ಲಾ ಪೊಲೀಸ್ ನಿಯಂತ್ರಣ ಕೊಠಡಿ ಮತ್ತು ವಿಪತ್ತು ನಿಯಂತ್ರಣ ಕೊಠಡಿ ಎಚ್ಚರಿಕೆಯಲ್ಲಿವೆ ಮತ್ತು ಅಧಿಕಾರಿ ಮಟ್ಟದಲ್ಲಿ ಹೆಚ್ಚಿನ ಪರಿಶೀಲನೆಗಳನ್ನು ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

## ಮಿನಿ ನ್ಯೂಸ್

### ಖೋಟಾ ನೋಟು ಪ್ರಕರಣ: ಐವರ ಬಂಧನ

• ಉದಯವಾಹಿನಿ ಗಂಗಾವತಿ

ನಗರದ ಕೊಪ್ಪಳ ರಸ್ತೆಯಲ್ಲಿನ ಸಮರ್ಥ ಬಾರ್ ಹಾಗೂ ರೆಸ್ಟೋರೆಂಟ್‌ನಲ್ಲಿ ಮದ್ಯ ಖರೀದಿ ಮಾಡಲು ಬಂದು ಖೋಟಾನೋಟು ಚಲಾವಣೆಗೆ ಯತ್ನಿಸಿದ ಪ್ರಕರಣ ಸಂಬಂಧ ಸೋಮವಾರ ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರನ್ನು ಹೊಸಪೇಟೆ ಖಾಲಂದರಖಾನ್, ಸಂಡೂರಿನ ಬಿ.ನೂರಮುಸ್ತಫ್, ಗಜೇಂದ್ರಗಡದ ವೀರೇಶ, ಕೆರೂರು ಗ್ರಾಮದ ಸರ್ಫರಾಜ್, ಬಿಂಕದಕಟ್ಟೆಯ ಅಬ್ದುಲ್ ರಜಾಕ್ ಎಂದು ಗುರುತಿಸಲಾಗಿದೆ.

ಬಂಧನದ ನಂತರ 500 ಮುಖ ಬೆಲೆಯ 78,500 ಹಣದ ಖೋಟಾ ನೋಟು,36,500 ಅಸಲಿ ನೋಟುಗಳು ವಶಕ್ಕೆ ಪಡೆಯಲಾಗಿದೆ. ಖೋಟಾ ನೋಟು ಚಲಾವಣೆ ಮಾಡುತ್ತಿರುವ ಜಾಲ ಮತ್ತು ಕೃತ್ಯಕ್ಕೆ ಬಳಸಿದ ಸಾಮಗ್ರಿಗಳ ಪತ್ತೆ ಕಾರ್ಯ ನಡೆಸಲಾಗುತ್ತಿದೆ. ಆರೋಪಿಗಳು ಖೋಟಾ ನೋಟು ಚಲಾವಣೆ ಮಾಡುವ ಉದ್ದೇಶದಿಂದಲೇ ಬಾರ್‌ನಲ್ಲಿ ಮದ್ಯ ಖರೀದಿ ಮಾಡಿ, ನೋಟು ಚಲಾವಣೆಗೆ ಮುಂದಾದಾಗ ಅಂಗಡಿಯವರು ನೋಟು ಪರಿಶೀಲಿಸಿದ್ದು, ಈ ವೇಳೆ ಖೋಟಾ ನೋಟುಗಳು ಎಂದು ತಿಳಿದು ಬಂದಿವೆ. ಕೂಡಲೇ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು,ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

### ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

• ಉದಯವಾಹಿನಿ ತಾವರಗೇರಾ

ಸ್ಥಳೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ನಾಗಮ್ಮ ಆದಪ್ಪ ನಾಲತವಾಡ ಟ್ರಸ್ಟ್ ಆಶ್ರಯದಡಿ ನಡೆಯುತ್ತಿರುವ ವಸತಿ ನಿಲಯಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ ಮಾಡಲಾಗಿದೆ. ಪ್ರಸ್ತುತ 5 ರಿಂದ 10ನೇ ತರಗತಿಯ ವಿದ್ಯಾರ್ಥಿನಿಯರು ಸೂಕ್ತ ದಾಖಲೆಗಳೊಂದಿಗೆ ಉಚಿತ ವಸತಿ ನಿಲಯಕ್ಕೆ ಅರ್ಜಿ ಸಲ್ಲಿಬಹುದು. ಸರ್ಕಾರದ ನಿಯಮಾನುಸಾರ ಮತ್ತು ಮೀಸಲಾತಿ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲಾಗುವುದು. ಪ್ರವೇಶ ಬಯಸುವ ಆಸಕ್ತ ವಿದ್ಯಾರ್ಥಿನಿಯರು ಮೇ 28ರೊಳಗೆ ಅರ್ಜಿ ಸಲ್ಲಿಸಬಹುದು. ತಾವರಗೇರಾ ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳ ಬಡ ವಿದ್ಯಾರ್ಥಿನಿಯರು ಇದರ ಸದುಪಯೋಗವನ್ನು ಪಡೆಯಬೇಕು.ಹೆಚ್ಚಿನ ಮಾಹಿತಿಗಾಗಿ 9739016936 ಸಂಖ್ಯೆಗೆ ಸಂಪರ್ಕಿಸಲು ಪ್ರಕಟಣೆ ಕೋರಿದೆ.

### ಏಕರೂಪ ನಾಗರಿಕ ಸಂಹಿತೆ ಜಾರಿಗೆ ಒತ್ತಾಯ: ನಾಗೇಶ್ ಅಂಗೀರಸ

• ಉದಯವಾಹಿನಿ ಚಿಕ್ಕಮಗಳೂರು

ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುವಂತೆ ರಾಷ್ಟ್ರಪತಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗೆ ಹಾಗೂ ಪ್ರಧಾನಮಂತ್ರಿ ಅವರಿಗೆ ಪತ್ರ ಬರೆಯಲಾಗಿದೆ ಎಂದು ಪ್ರಜ್ಞಾಪ್ರಭುತ್ವ ಉಳಿಸಿ ಆಂದೋಲನ ವೇದಿಕೆ ಕಾರ್ಯಕರ್ತ ನಾಗೇಶ್ ಅಂಗೀರಸ ಹೇಳಿದರು.

'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಒಕ್ಕೂಟ ವ್ಯವಸ್ಥೆ ಹೊಂದಿರುವ ಭಾರತದ ಸಂವಿಧಾನವು ಒಂದು ಪ್ರಧಾನಿ, ಒಂದು ರಾಷ್ಟ್ರಪತಿ, ಒಂದೇ ರೀತಿಯ ಕರೆನ್ಸಿ, ಮಿಲಿಟರಿ ವ್ಯವಸ್ಥೆ ಇರುವಂತೆ ನೋಡಿಕೊಂಡಿದೆ. ಕಾನೂನುಗಳು ಜಾತಿಗೆ ಅನುಗುಣವಾಗಿ ಬದಲಾಗಿರುವುದು ಭಾರತದ ಒಟ್ಟು ಬೆಳವಣಿಗೆಯ ಹಿನ್ನಡೆಗೆ ಕಾರಣವಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಭಾರತಕ್ಕೆ ಏಕರೂಪದ ನಾಗರಿಕ ಸಂಹಿತೆ ಅನಿವಾರ್ಯ ಎಂದು ದೆಹಲಿ ಹೈಕೋರ್ಟ್ 2021 ಜು.10ರಲ್ಲಿ ಹೇಳಿದೆ. ನ್ಯಾಯಾಲಯಗಳು ಪದೇ ಪದೇ ಲೋಪಗಳನ್ನು ಎತ್ತಿ ತೋರಿಸುತ್ತಿವೆ. ಆದರೂ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸರ್ಕಾರಗಳು ಆಸಕ್ತಿ ತೋರಿಸುತ್ತಿಲ್ಲ ಎಂದರು.

### ವಿಶ್ವದಾದಿಯರ ದಿನ ಆಚರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬ್ರಹ್ಮಾವರ

ಜಯಂಟ್ಸ್ ಗ್ರೂಪ್ ಆಫ್ ಬ್ರಹ್ಮಾವರ, ಸುವರ್ಣ ಎಂಟರ್‌ಪ್ರೈಸಸ್ ಮತ್ತು ವೈದ್ಯಕೀಯ ಪ್ರತಿನಿಧಿಗಳ ಸಂಘದ ವತಿಯಿಂದ ಅಂತರರಾಷ್ಟ್ರೀಯ ದಾದಿಯರ ದಿನಾಚರಣೆ ಲೋಂಬಾರ್ಡ್ ಮೆಮೋರಿಯಲ್ ಆಸ್ಪತ್ರೆಯ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಆಸ್ಪತ್ರೆಯ ನಿರ್ದೇಶಕ ಡಾ. ಸುಶೀಲ ಜತ್ತನ್ನ, 'ಶತಮಾನ ಕಂಡ ಈ ಆಸ್ಪತ್ರೆಯಲ್ಲಿ ಅನೇಕ ರೋಗಿಗಳು ಉತ್ತಮ ಚಿಕಿತ್ಸೆ ಪಡೆದಿದ್ದಾರೆ. ಈ ನಿಟ್ಟಿನಲ್ಲಿ ದಾದಿಯರ ಸೇವೆ ಅತ್ಯಂತ ಮಹತ್ವದ್ದು' ಎಂದರು. ಜಿಲ್ಲಾ ಸರ್ಜನ್ ಡಾ. ಅಶೋಕ ಮಾತನಾಡಿ, ದಾದಿಯರು ರೋಗಿಗಳ ನಿಜವಾದ ಆಪದ್ಬಾಂಧವರು. ತಮ್ಮ ಸೇವೆಯಲ್ಲಿ ಸಂತೋಷ ಕಾಣುವ ಇವರನ್ನು ನೆನಪು ಮಾಡಿಕೊಳ್ಳುವುದು ನಮ್ಮ ಕರ್ತವ್ಯ ಎಂದರು.

### ಗುಂಪು ಘರ್ಷಣೆ: ನಾಲ್ವರಿಗೆ ಗಾಯ

• ಉದಯವಾಹಿನಿ ರಾಮದುರ್ಗ

ತಾಲ್ಲೂಕಿನ ಕುನ್ನಾಳ ಗ್ರಾಮದ ಮಾರುತೇಶ್ವರ ಜಾತ್ರೆ ಪ್ರಯುಕ್ತ ನಡೆದ ಓಕುಳಿ ಆಚರಣೆಗೆ ಬಂದಿದ್ದ ಪರಿಶಿಷ್ಟ ಮಹಿಳೆ ಮೇಲೆ ನೀರು ಎರಚಿದ್ದನ್ನು ಪ್ರಶ್ನಿಸಿದವರ ಮೇಲೆ ಸಾಮೂಹಿಕವಾಗಿ ಹಲ್ಲೆ ಮಾಡಿದ ಘಟನೆ ನಡೆದಿದ್ದು, ಮಂಗಳವಾರ ಕಟಕೋಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಘಟನೆಯಲ್ಲಿ ಕುನ್ನಾಳದ ಲಕ್ಷ್ಮಣ ಮಾದರ ತಲೆಗೆ ಪೆಟ್ಟಾಗಿದ್ದು, ಗೋಕಾಕದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ರೇಣುಕಾ ಮಾದರ, ಸುನಂದಾ ಮಾದರ, ಸುಧಾ ಮಾದರ ಅವರಿಗೆ ಗಾಯಗೊಂಡಿದ್ದಾರೆ.

'ಕುನ್ನಾಳದಲ್ಲಿ ಮೇ 10ರಿಂದ ಮೂರು ದಿನ ಮಾರುತೇಶ್ವರ ಜಾತ್ರೆ ನಡೆಯಿತು. ಸೋಮವಾರ ಓಕುಳಿ ಆಚರಣೆ ವೇಳೆ ದೇವಸ್ಥಾನಕ್ಕೆ ಹೋಗುತ್ತಿದ್ದ ಮಹಿಳೆಗೆ ಕೆಲವರು ನೀರು ಎರಚಿದರು. ಅದನ್ನು ಪ್ರಶ್ನಿಸಿದ ಮಾದರ ಸಮಾಜದ ಯುವಕನ ಮೇಲೆ ಗುಂಪೊಂದು ಹಲ್ಲೆ ಮಾಡಿತು. ಇದರಲ್ಲಿ ಒಬ್ಬರು ಲಿಂಗಾಯತ, ಒಬ್ಬರು ಕುರುಬ ಹಾಗೂ ನಾಲ್ವರು ರೆಡ್ಡಿ ಸಮುದಾಯದವರು ಇದ್ದಾರೆ. ಘರ್ಷಣೆಯಲ್ಲಿ ಒಬ್ಬರು ಕಬ್ಬಿಣದ ಸರಳಿನಿಂದ ಯುವಕನ ತಲೆಗೆ ಹೊಡೆದರು. ನಂತರ ಎರಡೂ ಗುಂಪಿನ ಮಧ್ಯೆ ಮಾರಾಮಾರಿ ನಡೆಯಿತು' ಎಂದು ಪೊಲೀಸರು ತಿಳಿಸಿದ್ದಾರೆ. ಹಲ್ಲೆ ಮಾಡಿದ ಆರೋಪಿಗಳಾದ ಯೋಗೇಶ ಮೂರ್ತೆಪ್ಪನವರ, ಲಕ್ಷ್ಮಣ ಜೀರಗಾಳ, ವೆಂಕಟೇಶ ಕರಿಗನ್ನವರ, ವೆಂಕಟೇಶ ಕುರಿ, ಬಸವರಾಜ ಉದಪುಡಿ ಮತ್ತು ಸಾಗರ ಕಬ್ಬರ ವಿರುದ್ಧ ದೂರು ದಾಖಲಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ**: ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ವೃಷಭ**: ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡ ಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ಮಿಥುನ**: ಸಂಘರ್ಷವು ನಿಮ್ಮ ಅನಾರೋಗ್ಯವನ್ನು ಇನ್ನಷ್ಟು ಹಾಳುಮಾಡಬಹುದಾದ್ದರಿಂದ ಅದನ್ನು ತಪ್ಪಿಸಿ. ನಿಮ್ಮ ಮೂಲಕ ಹಣವನ್ನು ಉಳಿಸಲು ಮಾಡಲಾಗಿರುವ ಪ್ರಯತ್ನವು ಇಂದು ವಿಫಲವಾಗಬಹುದು.

**ಕರ್ಕಾಟಕ**: ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು.

**ಸಿಂಹ**: ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ. ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ. ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

**ಕನ್ಯಾ**: ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ಯಾವುದೇ ದೀರ್ಘಕಾಲೀನ ಹೂಡಿಕೆಗಳನ್ನು ತಪ್ಪಿಸಿ ಮತ್ತು ನಿಮ್ಮ ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

**ತುಲಾ**: ನಿಮ್ಮ ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆ ಪ್ರಯೋಜನಕಾರಿ ಎಂದು ಸಾಬೀತಾಗುತ್ತದೆ.

**ವೃಶ್ಚಿಕ**: ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಧನಸ್ಸು**: ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸಧೃಢವಾಗಿರಲು ಸಹಾಯ ಮಾಡುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ.

**ಮಕರ**: ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ. ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು.

**ಕುಂಭ**: ನಿಮ್ಮ ದೇಹದ ಪುನಃಶ್ಚೇತನಕ್ಕಾಗಿ ಸಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ಆಯಾಸ ಹಾಗೂ ನಿರಾಸೆಯಲ್ಲಿ ಸಿಲುಕುತ್ತೀರಿ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ.

**ಮೀನ**: ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ.

---

● ಬಿರುಬೇಸಿಗೆಯ ಇಂದಿನ ದಿನಗಳಲ್ಲಿ ಅಲ್ಪ ನೆರಳಿಗೂ ಮರಗಳನ್ನು ಆಶ್ರಯಿಸುವ ಪರಿಸ್ಥಿತಿ

# ಗ್ರಾಮೀಣ ಬಸ್ ನಿಲ್ದಾಣಗಳಿಗೆ ಬೇಕಿದೆ ಕಾಯಕಲ್ಪ

• ಉದಯವಾಹಿನಿ ರೋಣ

ಬಿರುಬೇಸಿಗೆಯ ಇಂದಿನ ದಿನಗಳಲ್ಲಿ ಅಲ್ಪ ನೆರಳಿಗೂ ಮರಗಳನ್ನು ಆಶ್ರಯಿಸುವ ಪರಿಸ್ಥಿತಿ ರೋಣ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಿಂದ ಪಟ್ಟಣ ಹಾಗೂ ನಗರಗಳಿಗೆ ಪ್ರತಿನಿತ್ಯ ಸಂಚರಿಸುವ ಹಳ್ಳಿ ಜನರು ಬಸ್‌ಗಾಗಿ ಕಾಯಲು ಸೂಕ್ತ ಬಸ್ ನಿಲ್ದಾಣ ಇಲ್ಲದೇ ಪರದಾಡುತ್ತಿದ್ದಾರೆ.

ಮೈಸೂರು ರಾಜ್ಯದ ಸಂದರ್ಭದಲ್ಲಿ ತಾಲ್ಲೂಕು ಕೇಂದ್ರವಾದ ರೋಣದಲ್ಲಿ ಆಗ ಬಸ್ ನಿಲ್ದಾಣ ನಿರ್ಮಾಣವಾಗಿತ್ತು. ಮಾತ್ರವಲ್ಲದೆ ಬಸ್ ಘಟಕವನ್ನು ಕೂಡ ಪಡೆದಿತ್ತು. ಆದರೆ ಗ್ರಾಮೀಣ ಪ್ರದೇಶಗಳಿಂದ ಕೂಡಿರುವ ರೋಣ ತಾಲ್ಲೂಕಿನಾದ್ಯಂತ ಇರುವ ಬಹುತೇಕ ಗ್ರಾಮಗಳಲ್ಲಿ ಇಂದಿಗೂ ಸಮರ್ಪಕವಾದ ಬಸ್ ನಿಲ್ದಾಣಗಳಿಲ್ಲ. ಇದರಿಂದಾಗಿ ಸಾರ್ವಜನಿಕರು ಮಳೆ, ಬಿಸಿಲು, ಚಳಿಗಾಲದಲ್ಲೂ ತೊಂದರೆ ಅನುಭವಿಸುವಂತಾಗಿದೆ.

ತಾಲ್ಲೂಕಿನ ಸವಡಿ, ಚಿಕ್ಕಮಣ್ಣೂರು, ಸಂದಿಗವಾಡ, ಹಿರೇಮಣ್ಣೂರು, ಸೋಮನಕಟ್ಟಿ, ಹಡಗಲಿ, ಮುದೇನಗುಡಿ, ಬೆನಹಾಳ, ಹುನಗುಂಡಿ, ಕುರಹಟ್ಟಿ, ಮಾಡಲಗೇರಿ ಸೇರಿದಂತೆ ವಿವಿಧ





☛ ಉದಯವಾಹಿನಿ ಚಿತ್ರ

ಗ್ರಾಮಗಳಲ್ಲಿ ಬಸ್ ನಿಲ್ದಾಣಗಳು ಶಿಥಿಲಾವಸ್ಥೆ ತಲುಪಿವೆ.

ಹಲವು ಕಡೆ ಬಸ್ ನಿಲ್ದಾಣದ ತಾರಸಿಗಳು ಬಿದ್ದು ಹೋಗಿದ್ದು, ಮತ್ತೆ ಕೆಲವೆಡೆ ಕುಳಿತುಕೊಳ್ಳುವ ಅಸನಗಳೇ ಕಿತ್ತು ಹೋಗಿವೆ.

ಕೆಲವು ಗ್ರಾಮಗಳ ಬಸ್ ನಿಲ್ದಾಣಗಳು ತಿಪ್ಪೆ ಗುಂಡಿಗಳಿಂದ ಆವೃತ್ತವಾಗಿದ್ದರೆ ಮತ್ತೆ ಕೆಲವು ಕುಡುಕರ ತಾಣಗಳಾಗಿ ಮಾರ್ಪಟ್ಟಿವೆ. ಆದರೂ, ಸಂಬಂಧಿಸಿದ ಅಧಿಕಾರಿಗಳು ಮಾತ್ರ ಇತ್ತ ಕಡೆ ಗಮನಹರಿಸುತ್ತಿಲ್ಲ ಎಂದು ಗ್ರಾಮಸ್ಥರು ಆರೋಪ ಮಾಡಿದ್ದಾರೆ.

**ಸರ್ವ ಋತುವಿನಲ್ಲೂ ತಪ್ಪದ ತೊಂದರೆ**

ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬಿಸಿಲಿನ ತಾಪಮಾನದಿಂದ ಪ್ರಯಾಣಿಕರು ಹೈರಾಣಾಗುತ್ತಿದ್ದು, ಪ್ರಯಾಣಿಕರು ಸಮೀಪದ ಮರಗಳ ನೆರಳು ಅಥವಾ ಅಂಗಡಿಗಳ ನೆರಳಿನಲ್ಲಿ ಬಸ್ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ತಾಲ್ಲೂಕಿನ ಅತಿ ದೊಡ್ಡ ಗ್ರಾಮವಾದ ಹೊಳೆ ಆಲೂರು ಬಸ್ ನಿಲ್ದಾಣದಲ್ಲಿ ಕುಡಿಯಲು ಪ್ರಯಾಣಿಕರಿಗೆ ನೀರಿಲ್ಲ ಮತ್ತು ಶೌಚಾಲಯಗಳು ಕೂಡ ಇಲ್ಲದಿರುವುದು ದುರಂತದ ಸಂಗತಿ ಎಂದು ಪ್ರಯಾಣಿಕರು ಕಿಡಿಕಾರಿದ್ದಾರೆ.

ತಾಲ್ಲೂಕಿನ ಮತ್ತೊಂದು ದೊಡ್ಡ ಗ್ರಾಮವಾದ ಹಿರೇಹಾಳದಲ್ಲಿ ಕೂಡ ಇದೇ ಸಮಸ್ಯೆ ಮುಂದುವರಿದಿದ್ದು, ಕುಡಿಯುವ ನೀರು ಸೇರಿದಂತೆ ಕನಿಷ್ಠ ಮೂಲಸೌಕರ್ಯಗಳನ್ನು ಸಹ ನಿಲ್ದಾಣ ಹೊಂದಿಲ್ಲ. ಸಾರಿಗೆ ಇಲಾಖೆಯವರು ಈ ಸಮಸ್ಯೆಗಳನ್ನು ಬಗೆಹರಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

ತಾಲ್ಲೂಕಿನಲ್ಲಿ ಪೂರ್ವ ಮುಂಗಾರು ಕೈಕೊಟ್ಟಿದೆ.

### ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲಿ

**ಸರ್ಕಾರ ಉಚಿತ ಪ್ರಯಾಣ ನೀಡುವ ಬದಲು ಉತ್ತಮ ಬಸ್ ನಿಲ್ದಾಣ ಹಾಗೂ ಮಹಿಳೆಯರಿಗೆ ಸೂಕ್ತ ಸೌಲಭ್ಯಗಳನ್ನು ನಿಲ್ದಾಣದಲ್ಲಿ ಒದಗಿಸಿಕೊಡಬೇಕು. ಕಾಟಾಚಾರಕ್ಕೆ ಬಸ್ ನಿಲ್ದಾಣ ನಿರ್ಮಿಸುವ ಬದಲು ಮಹಿಳಾ ವಿಶ್ರಾಂತಿ ಕೊಠಡಿ, ಶೌಚಾಲಯ, ಹಾಲುಣಿಸುವ ಕೊಠಡಿಗಳನ್ನು ನಿರ್ಮಿಸಲು ಕ್ರಮವಹಿಸಬೇಕು.**

– ಶಂಕ್ರಪ್ಪ ಸಿರಗುಂಪಿ, ಹಿರೇಹಾಳ ಗ್ರಾಮಸ್ಥ

ಬಿಸಿಲು ರಣ ರಣ ಎನ್ನುತ್ತಿದೆ. ಊರಿಂದ ಊರಿಗೆ ಹೋಗಲು ಬಡವರು, ಮಧ್ಯಮ ವರ್ಗದ ಜನರು ಈಗಲೂ ಸರ್ಕಾರಿ ಬಸ್ ಸೇವೆಗಳನ್ನೇ ನೆಚ್ಚಿಕೊಂಡಿದ್ದಾರೆ. ಆದರೆ, ಬಸ್‌ಗಳನ್ನು ಕಾಯಲು ಉರಿ ಬಿಸಿಲಿನಲ್ಲಿ ನಿಲ್ಲುವುದು ಅನಿವಾರ್ಯವಾಗಿದೆ.

ಇದು ಬೇಸಿಗೆ ಒಂದಕ್ಕೆ ಮಾತ್ರ ಸೀಮಿತವಾದ ಸಮಸ್ಯೆ ಅಲ್ಲ. ಮಳೆಗಾಲದಲ್ಲಿ ಮಳೆಯಲ್ಲಿ

### ಬಿಸಿಲಿನಲ್ಲಿ ಬಸ್ ಕಾಯುವ ಸ್ಥಿತಿ

**ನಮ್ಮ ಊರಿನ ಬಸ್ ನಿಲ್ದಾಣ ಅತ್ಯಂತ ಹಳೆಯದಾಗಿದ್ದು, ಸಂಪೂರ್ಣ ಶಿಥಿಲಗೊಂಡಿದೆ. ಯಾವಾಗ ಬೀಳುತ್ತದೆಯೋ ಗೊತ್ತಿಲ್ಲ. ಆ ಭಯದಿಂದಲೇ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಪ್ರತಿನಿತ್ಯ ಬಿಸಿಲಿನಲ್ಲಿ ನಿಂತು ಬಸ್‌ಗೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.**

– ಸದ್ದಾಮ್ ಹುಸೇನ್, ಸವಡಿ ಗ್ರಾಮಸ್ಥ

ನೆನೆಯುವುದು, ಚಳಿಗಾಲದಲ್ಲಿ ನಡುವುದು, ಬೇಸಿಗೆಯಲ್ಲಿ ಬಿಸಿಲಿನಲ್ಲಿ ಬೇಯುವುದು ತಪ್ಪದ ಕರ್ಮವಾಗಿದೆ ಎಂದು ಜನರು ಕಿಡಿಕಾರಿದ್ದಾರೆ.

ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಗ್ರಾಮೀಣ ಭಾಗದ ಪ್ರಯಾಣಿಕರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿರುವ ಎಲ್ಲಾ ಬಸ್ ನಿಲುಗಡೆ ಕೇಂದ್ರದಲ್ಲಿ ಸುಸಜ್ಜಿತವಾದ ಬಸ್ ನಿಲ್ದಾಣ ನಿರ್ಮಿಸಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

---

## ಯುದ್ಧದ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಆರೋಗ್ಯ ಮುನ್ನೆಚ್ಚರಿಕೆ ಕುರಿತ ಕಾರ್ಯಾಗಾರ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕಿನ ಗುಡ್ಡದ ರಂಗವ್ವನಹಳ್ಳಿಯ ಸಮೀಪದ ಶಿವಗಂಗೋತ್ರಿ ಕ್ಯಾಂಪಸ್‌ನ ಚಿತ್ರದುರ್ಗ ವೈದ್ಯಕೀಯ ಕಾಲೇಜು, ಸಂಶೋಧನಾ ಸಂಸ್ಥೆಯಲ್ಲಿ ಅನಸ್ತೇಶಿಯಾ ವೈದ್ಯಕೀಯ ವಿಭಾಗದಲ್ಲಿ ಯುದ್ಧದ ಸಂದರ್ಭದಲ್ಲಿ ತೆಗೆದುಕೊಳ್ಳುವ ಆರೋಗ್ಯದ ಮುನ್ನೆಚ್ಚರಿಕೆ ಕುರಿತಾದ ಕಾರ್ಯಾಗಾರ ನಡೆಯಿತು.

ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಬಿ.ವೈ. ಯುವರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಾಗಾರದಲ್ಲಿ "Trauma Care & Basic Life Support" ಕುರಿತು ಸವಿಸ್ತಾರವಾಗಿ ವಿಷಯಗಳನ್ನು ಮಂಡಿಸಲಾಯಿತು.

ಯುದ್ಧದ ಸಂದರ್ಭದಲ್ಲಿ ಹಿಂಸಾಚಾರಕ್ಕಿಂತ ಹೆಚ್ಚಾಗಿ ಆಹಾರ, ವಸತಿ, ನೀರು, ಬಟ್ಟೆ ಮತ್ತು ನೈರ್ಮಲ್ಯದಂತಹ ದೈನಂದಿನ ಸೌಲಭ್ಯಗಳ ಕೊರತೆಯೇ ಆರೋಗ್ಯದ ಮೇಲೆ ಗರಿಷ್ಟ ಹಾನಿಯನ್ನುಂಟು ಮಾಡುತ್ತದೆ. ಯುದ್ಧಗಳು ದೇಶದ ಅಭಿವೃದ್ಧಿಯಲ್ಲಿ ಹಿನ್ನಡೆಗೆ ಕಾರಣವಾಗುತ್ತವೆ ಮತ್ತು ಆರೋಗ್ಯ ಸಮಾನತೆಯಲ್ಲಿ ಯಾವುದೇ ಪ್ರಗತಿಯನ್ನು ನಿರಾಕರಿಸುತ್ತವೆ ಎಂದು ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು.

**ಮಾನವ ಆರೋಗ್ಯದ ಮೇಲೆ ಯುದ್ಧದ ಪರಿಣಾಮಗಳು:** ಪ್ರಪಂಚದಾದ್ಯಂತ ಸುದೀರ್ಘ



☛ ಉದಯವಾಹಿನಿ ಚಿತ್ರ

ಯುದ್ಧಗಳ ಸರಣಿಯು ಮಾನವ ಆರೋಗ್ಯದ ಮೇಲೆ ಯುದ್ಧಗಳ ದೂರಗಾಮಿ ಪರಿಣಾಮಗಳನ್ನು ಎತ್ತಿ ತೋರಿಸಿದೆ. ಹಿಂಸಾಚಾರಕ್ಕಿಂತ ಹೆಚ್ಚಾಗಿ ಆಹಾರ, ವಸತಿ, ನೀರು, ಬಟ್ಟೆ ಮತ್ತು ನೈರ್ಮಲ್ಯದಂತಹ ದೈನಂದಿನ ಸೌಲಭ್ಯಗಳ ಕೊರತೆಯೇ ಆರೋಗ್ಯದ ಮೇಲೆ ಹೆಚ್ಚಿನ ಹಾನಿಯನ್ನುಂಟು ಮಾಡುತ್ತದೆ.

ಆರೋಗ್ಯ ಸೇವೆಯಲ್ಲಿ ಅಡ್ಡಿ ಸಂವಹನ ಕಡಿತ, ಸಾರಿಗೆ ಸ್ಥಗಿತ, ವೈದ್ಯಕೀಯ ಸರಬರಾಜು ಕಡಿತವಾಗಲಿದೆ. ಮಕ್ಕಳು, ಗರ್ಭಿಣಿಯರು ಮತ್ತು ವೃದ್ಧರು ಹೆಚ್ಚಾಗಿ ತೊಂದರೆ ಅನುಭವಿಸುತ್ತಾರೆ. ರಾಸಾಯನಿಕ ಯುದ್ಧದ ಪರಿಸರದ ಪರಿಣಾಮಗಳ ಬಗ್ಗೆ ಹಿರೋಷಿಮಾ–ನಾಗಾಸಾಕಿ ಬಾಂಬ್ ದಾಳಿಯ ನಂತರ ಅನೇಕ ತಲೆಮಾರುಗಳಲ್ಲಿ ಕಂಡುಬರುವ ಅನುವಂಶಿಕ ರೂಪಾಂತರಗಳ ಬಗ್ಗೆ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಕಾರ್ಯಾಗಾರದಲ್ಲಿ ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅನಸ್ತೇಶಿಯಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಜಿ.ಹೆಚ್.ಮೇಘ, ಡಾ. ಪರಮಾನಂದ ರೆಡ್ಡಿ, ಬೋಧಕ ಸಿಬ್ಬಂದಿಗಳು ಮತ್ತು ಮೊದಲ ಮತ್ತು ಎರಡನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಇದ್ದರು.

### ತರಬೇತಿ ಪಡೆಯಬೇಕು

**ರಾಷ್ಟ್ರಗಳು ಪರಸ್ಪರ ಕದನ ವಿರಾಮಕ್ಕೆ ಒಪ್ಪಿಗೆ ನೀಡಿದ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಪೂರ್ಣ ಪ್ರಮಾಣದ ಯುದ್ಧದ ಸಾಧ್ಯತೆ ಕಡಿಮೆಯಾಗಿದೆ ಎಂದು ತೋರುತ್ತದೆಯಾದರೂ ಆರೋಗ್ಯ ವ್ಯವಸ್ಥೆಗಳ ಸನ್ನದ್ಧತೆಯ ಬಗ್ಗೆ ಯೋಚಿಸಲು ಇದು ಒಂದು ಪ್ರಮುಖ ಅವಕಾಶವಾಗಿರಬಹುದು ಮತ್ತು ಅಂತಹ ಅನಿಶ್ಚಿತ ಸಂದರ್ಭಗಳನ್ನು ನಿರ್ವಹಿಸಲು ವೈದ್ಯರು ಹೇಗೆ ಉತ್ತಮವಾಗಿ ತರಬೇತಿ ಪಡೆಯಬೇಕು ಎಂಬ ಅಂಶವನ್ನೂ ಚರ್ಚಿಸಲಾಯಿತು.**

---

## ಪಾಕಿಸ್ತಾನ ನಾಶವಾದರೆ ಭಾರತಕ್ಕೆ ನೆಮ್ಮದಿ: ಯತ್ನಾಳ

• ಉದಯವಾಹಿನಿ ವಿಜಯಪುರ

ಇಡೀ ಪಾಕಿಸ್ತಾನವನ್ನು ಸಂಪೂರ್ಣ ನಾಶಗೊಳಿಸಿದರೆ ಮಾತ್ರ ಭಾರತಕ್ಕೆ ನೆಮ್ಮದಿಯಿದೆ. ಹೀಗಾಗಿ ಆ ದೇಶವನ್ನು ನಾಶಗೊಳಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಮನವಿ ಮಾಡುತ್ತೇನೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ವಡ್ಡರ ಸಮಾಜದ ವತಿಯಿಂದ ಹನುಮ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ 15 ಅಡಿ ಎತ್ತರದ ಶ್ರೀ ಆಂಜನೇಯನ ಮೂರ್ತಿಯ ಭವ್ಯ ಶೋಭಾಯಾತ್ರೆಗೆ ದೇಶದ ರಕ್ಷಣೆಗಾಗಿ ಹುತಾತ್ಮರಾದ ವೀರಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ, ನಂತರ ಚಾಲನೆ ನೀಡಿ ಅವರು ಮಾತನಾಡಿದರು.

ಈ ದೇಶಕ್ಕೆ ಗಾಂಧಿ–ನೆಹರು ಅವಶ್ಯಕತೆಯಿಲ್ಲ. ಬೇಕಿರುವುದು ಡಾ.ಬಿ.ಆರ್.ಅಂಬೇಡ್ಕರ್, ನೇತಾಜಿ ಸುಭಾಷಚಂದ್ರ ಬೋಸ್, ಸರ್ದಾರ್ ವಲ್ಲಭ ಬಾಯಿ ಪಟೇಲ್, ಭಗತ್ ಸಿಂಗ್, ನರೇಂದ್ರ ಮೋದಿಯವರಂತಹ ದಿಟ್ಟ ನಾಯಕರು. 1942ರಲ್ಲೇ ಡಾ.ಬಿ.ಆರ್.ಅಂಬೇಡ್ಕರ್ ಅವರು, ಹಿಂದೂಸ್ತಾನ್–ಪಾಕಿಸ್ತಾನ್ ಒಡೆಯಬೇಕೆಂದರೆ ಭಾರತದಲ್ಲಿರುವ ಕೊನೆಯ ಮುಸ್ಲಿಂ ಪಾಕಿಸ್ತಾನಕ್ಕೆ ಹೋಗಬೇಕು. ಅಲ್ಲಿರುವ ಸಮಸ್ತ ಹಿಂದೂಗಳು, ದಲಿತರು ಭಾರತಕ್ಕೆ ಬರಬೇಕೆಂದು ಹೇಳಿದ್ದಾರೆ.



☛ ಉದಯವಾಹಿನಿ ಚಿತ್ರ

**ವಿಜಯಪುರ ನಗರದಲ್ಲಿಯೂ ಯಾರ ಬಂದರೂ ಏನು ಕಿತ್ತುಕೊಳ್ಳಲಾಗುವುದಿಲ್ಲ. ಯಾರು ಕೇಸರಿ ಟೋಪಿ, ಕೇಸರಿ ಶಾಲು, ಕೇಸರಿ ಪೇಟಾ ಧರಿಸುವುದಿಲ್ಲವೋ, ಅಂತವರಿಗೆ ಹಿಂದೂಗಳು ಒಂದು ವೋಟ್ ಸಹ ಹಾಕಬಾರದು**

–ಬಸನಗೌಡ ಪಾಟೀಲ ಯತ್ನಾಳ

ಆದರೆ, ಇಂದು ದೇಶದ ಅನ್ನ ತಿಂದು, ನೀರು ಕುಡಿದು ಪಾಕಿಸ್ತಾನ್ ಪರ ಪೋಸ್ಟ್‌ಗಳನ್ನು ಹಾಗೂ ಘೋಷಣೆ ಹಾಕುತ್ತಾರೆ. ಅಂತ ದೇಶ ದ್ರೋಹಿಗಳ ವಿರುದ್ಧ ಕೇಸ್ ದಾಖಲಿಸಿ, ಅವರ ಮೇಲೆ ನಿಗಾಯಿಡಿ. ಹಿಂದೂ ಮಹಾಪುರುಷರ, ದೇವರ ಜಾತ್ರೆ, ಉತ್ಸವಗಳನ್ನು ನಡೆದರೆ, ಯಾವುದೇ ಜಾತಿ ಮಾಡದೆ ಸಮಸ್ತ ಹಿಂದೂ ಬಾಂಧವರು ಒಂದಾಗಿ ಆಚರಿಸುವ ಮೂಲಕ ಒಗ್ಗಟ್ಟಾಗೋಣ ಎಂದರು.

---

## ಸಿಡಿಲಾಘಾತಕ್ಕೆ ಮೂವರು ಬಲಿ

• ಉದಯವಾಹಿನಿ ಹಾವೇರಿ

ಹಾವೇರಿ ಜಿಲ್ಲೆಯಾದ್ಯಂತ ಎರಡು ದಿನಗಳಿಂದ ಬಿಡುವು ನೀಡುತ್ತಲೇ ಮಳೆ ಸುರಿಯುತ್ತಿದ್ದು, ಸಂಜೆ ಸಿಡಿಲಿನ ಹೊಡೆತಕ್ಕೆ ವೃದ್ಧೆ ಸೇರಿ ಮೂವರು ಮೃತಪಟ್ಟಿದ್ದಾರೆ. ಹಿರೇಕೆರೂರು ತಾಲ್ಲೂಕಿನ ಡಮ್ಮಳ್ಳಿಯ ನಾಗಪ್ಪ ಬಸವಣೆಪ್ಪ ಕಣಸೋಗಿ (65), ರಟ್ಟಿಹಳ್ಳಿ ತಾಲ್ಲೂಕಿನ ಕುಡುಪಲಿ ಸುನೀಲ್ ಕಾಳೇರ (29) ಹಾಗೂ ಗದಗ ಜಿಲ್ಲೆಯ ಬಸಾಪುರದ ಮರಿಯಪ್ಪ ನಾಯ್ಕರ್ (60) ಮೃತರು. ಇವರ ಸಾವಿನ ಬಗ್ಗೆ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ನಾಗಪ್ಪ ಅವರು ಜಮೀನಿನಲ್ಲಿ ಎತ್ತು ಮೇಯಿಸುವಾಗ ಸಿಡಿಲು ಬಡಿದಿದೆ. ಸುನೀಲ್ ಅವರು ಹೊಲದ ಕೆಲಸ ಮುಗಿಸಿಕೊಂಡು ಮನೆಯತ್ತ ಹೊರಟಿದ್ದಾಗ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಗದಗ ಜಿಲ್ಲೆಯ ವೃದ್ಧೆ ಮರಿಯಮ್ಮ, ಹಾನಗಲ್ ತಾಲ್ಲೂಕಿನ ಕೊಂಡೋಜಿ ಗ್ರಾಮದ ಮಾವಿನ ತೋಟದ ಮನೆಯಲ್ಲಿ ಕೆಲಸಕ್ಕಿದ್ದರು. ಅದೇ ಸ್ಥಳದಲ್ಲಿಯೇ ಅವರಿಗೆ ಸಿಡಿಲು ಬಡಿದಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

---

## ಗರಗಪಳ್ಳಿ–ಭಕ್ತಂಪಳ್ಳಿ ಸಂಪರ್ಕ ಬ್ರಿಡ್ಜ್ ಕಂ, ಬ್ಯಾರೇಜ್‌ಗೆ ಕಸಕಡ್ಡಿ, ಗಿಡಮರಗಳು ಅಡ್ಡಗಟ್ಟಿದ್ದು ತೆರವುಗೊಳಿಸಲು ಆಗ್ರಹ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಮುಲ್ಲಾಮಾರಿ ನದಿಯ ಭಕ್ತಂಪಳ್ಳಿ–ಗರಗಪಳ್ಳಿ ಮಧ್ಯೆ ಸಂಪರ್ಕ ಕಲ್ಪಿಸುವ ಬ್ರೀಜ್ ಕಂ ಬ್ಯಾರೇಜ್ ನಿರ್ಮಾಣಕೊಂಡು ಅನೇಕ ವರ್ಷಗಳು ಕಳೆದಿವೆ ಆದರೆ ಈಗಾಗಲೇ ಆಕಾಲಿಕ ಮಳೆ ಸುರಿಯುತ್ತಿರುವುದರಿಂದ ಮುಲ್ಲಾಮಾರಿ ನದಿಗೆ ರಭಸದಿಂದ ಬಂದ ನೀರಿಗೆ ಗಿಡಗಂಟ್ಟೆಗಳು,ಕಸಕಡ್ಡಿಗಳು ಬ್ರೀಜ್ ಕಂ ಬ್ಯಾರೇಜ್ ಗೆ ಬಂದು ತಟ್ಟಿದ್ದು ಇದರಿಂದ ನೀರು ಸಗಸವಾಗಿ ಸಾಗಲು ಆಗದೆ ನೀರು ಬಹಳಷ್ಟು ಸಂಗ್ರಹವಾಗಿದ್ದು ಮುಳ್ಳುಕಸಕಡ್ಡಿಯಿಂದ ಜನರಿಗೆ ತೊಂದರೆಯಾಗುತ್ತಿದ್ದು ಸಂಬಂಧಪಟ್ಟ ಅಧಿಕಾರಿಗಳು ಕಸಕಡ್ಡಿ ಗಿಡಮರಗಳು ತೆರವುಗೊಳಿಸುವಂತೆ ಗರಗಪಳ್ಳಿ ಗ್ರಾಪಂ ಸದಸ್ಯ ಕೆ.ಮಹೇಶ ಆಗ್ರಹಿಸಿದರು.

ಅನೇಕ ದಿನಗಳಿಂದ ಬ್ರೀಜ್ ಕಂ.ಬ್ಯಾರೇಜ್‌ಗೆ ಕಸಕಡ್ಡಿಗಳು ತಟ್ಟಿದ್ದು ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಿದರು ಪ್ರಯೋಜನವಾಗಿಲ್ಲ,ಕಸಕಡ್ಡಿಗಳು ಮುಳ್ಳು ಗಿಡಮರಗಳು ತಟ್ಟಿರುವುದರಿಂದ ಸಾರ್ವಜನಿಕರಿಗೆ ಜಾನುವಾರುಗಳಿಗೆ



☛ ಉದಯವಾಹಿನಿ ಚಿತ್ರ

**ಸಾರ್ವಜನಿಕರಿಗೆ ಜಾನುವಾರುಗಳಿಗೆ ತೊಂದರೆ**

ಬಹಳಷ್ಟು ತೊಂದರೆ ಜನರು ಅಥವಾ ಜಾನುವಾರು ಕಸಕಡ್ಡಿಗಳಲ್ಲಿ ಸಿಲುಕಿದರೆ ಪ್ರಾಣ ಹಾನಿಯಾಗುವುದು ಖಚಿತ ಹಾಗಾಗಿ ಯಾವುದೇ ಹಾನಿಯಾಗುವ ಮೊದಲು ಅಧಿಕಾರಿಗಳು ಏಚ್ಚೆತ್ತುಕೊಂಡು ಬ್ರೀಜ್ ಕಂ.ಬ್ಯಾರೇಜ್‌ಗೆ ಬಂದು ತಟ್ಟಿರುವ ಮುಳ್ಳುಕಂಟ್ಟಿಗಳು ಗಿಡಮರಗಳ ಟೊಂಗೆಗಳು ತೆರವುಗೊಳಿಸಿ ಸಾರ್ವಜನಿಕರಿಗೆ ಜಾನುವಾರುಗಳಿಗೆ ಅನುಕೂಲ ಕಲ್ಪಿಸಬೇಕು ಇಲ್ಲಾದಿದ್ದರೆ ಬರುವ ದಿನಗಳಲ್ಲಿ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

---

## ಮನೆ, ಮನಗಳಲ್ಲಿ ಪ್ರತಿಮೆಗಿಂತ ಶಾಂತಿ, ಅಹಿಂಸೆ ನೆಲೆಸಲಿ

• ಉದಯವಾಹಿನಿ, ವಿಜಯನಗರ

ಬಹುತೇಕರ ಮನೆಗಳಲ್ಲಿ ಬುದ್ಧನ ಪ್ರತಿಮೆಗಳನ್ನು ಇರಿಸಲಾಗಿದೆ. ಆದರೆ ಅಶಾಂತಿ ಮತ್ತು ಹಿಂಸಾತ್ಮಕ ವಾತಾವರಣಗಳೇ ಹೆಚ್ಚಾಗಿರುವ ಪ್ರಸ್ತುತ ಕಾಲಘಟ್ಟದಲ್ಲಿ ಮನೆ, ಮನಗಳಲ್ಲಿ ಶಾಂತಿ, ಅಹಿಂಸೆ ನೆಲೆಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಭಗವಾನ್ ಬುದ್ಧ ಜಯಂತಿಯಲ್ಲಿ ಬುದ್ಧನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು. ವಿಶ್ವ ಶಾಂತಿಯನ್ನು ಬಯಸಿದ್ದ ಗೌತಮ ಬುದ್ಧರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕಾದ ಸಕಾಲಿಕ ಅನಿವಾರ್ಯತೆ ಇದೆ. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಹಿಂಸಾತ್ಮಕ ಶೋಷಣೆಗಳು, ಕೊಲೆ ಸುಲಿಗೆ, ರಕ್ತಪಾತ,



☛ ಉದಯವಾಹಿನಿ ಚಿತ್ರ

ಕ್ರೌರ್ಯದ ಮಾನಸಿಕತೆಯನ್ನು ತೊಲಗಿಸಿ, ಸರ್ವರೂ ಶಾಂತಿಯ ಬೆಳಕಿನಡಿಯಲ್ಲಿ ಬದುಕಲು ಬುದ್ಧನ ಮೌಲ್ಯಯುತ ಸಂದೇಶಗಳನ್ನು ಎಣ್ಣೆಯಂತೆ ಬಳಸಿಕೊಂಡು ಬದುಕು ಬೆಳಗಿಸುವತ್ತ ಸಾಗಬೇಕಿದೆ. ಮನುಷ್ಯ ಬದುಕಿನ ಘನತೆಗೆ ಬುದ್ಧನ ಅಷ್ಟಾಂಗ ಮಾರ್ಗಗಳನ್ನು ಅನುಸರಿಸಬೇಕಿದೆ. ಬುದ್ಧನ ಆಶಯ ದುಃಖದಿಂದ ಮನುಷ್ಯನನ್ನು ದೂರ ಮಾಡುವುದಾಗಿದೆ. ಧ್ಯಾನದಿಂದ ದುಃಖ ಮತ್ತು ಪಾಪಕರ್ಮಗಳು ಮುಕ್ತವಾಗಲು ಸಹಕಾರಿಯಾಗಲಿದೆ ಎಂದರು. ಸಾಹಿತಿ ಬಿ.ಪೀರ್ ಬಾಷಾರವರು ಭಗವಾನ್ ಬುದ್ಧನ ಕುರಿತು ವಿಶೇಷ ಉಪನ್ಯಾಸ ನೀಡಿದರು.

### ಡಿಸಿಗೆ ಮನವಿ

**ಇದೇ ವೇಳೆ ವಿಜಯನಗರ–ಹಂಪಿ ಬುದ್ಧ ವಿಹಾರ ನಿರ್ಮಾಣ ಟ್ರಸ್ಟ್ ಪದಾಧಿಕಾರಿಗಳು ನಗರದ ಶ್ರೀಗುರು ಪಿಯು ಕಾಲೇಜಿನ ಬಳಿಯಿರುವ ವೃತ್ತವನ್ನು ಸಿದ್ಧಾರ್ಥ ಗೌತಮ ಬುದ್ಧ ವೃತ್ತ ಎಂದು ನಾಮಕರಣಗೊಳಿಸಿ, ವೃತ್ತದ ಅಭಿವೃದ್ಧಿಗೆ ಹೈಮಾಸ್ಟ್ ವಿದ್ಯುತ್‌ದೀಪದ ವ್ಯವಸ್ಥೆ ಕಲ್ಪಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.**

ಈ ವೇಳೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣವರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಇದ್ದರು.

---

## ದುಡಿಯೋಣ ಬಾ ಅಭಿಯಾನ

• ಉದಯವಾಹಿನಿ, ಕಲಬುರಗಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಭೂಪಾಲ ತೆಗನೂರ ಹಾಗೂ ಹಾಗರಗಾ ಗ್ರಾಪಂ ವ್ಯಾಪ್ತಿಯ ಆಜಾದಪುರ ಗ್ರಾಮದ ದುಡಿಯೋಣ ಬಾ ಅಭಿಯಾನದ ಅಡಿಯಲ್ಲಿ ಐ.ಈ.ಸಿ. ಸಂಯೋಜಕ ಮೊಸಿನ್ ಖಾನ್ ನರೇಗಾ ಯೋಜನೆಯಡಿಯಲ್ಲಿ ದುಡಿಯೋಣ ಬಾ ಅಭಿಯಾನದ ಬಗ್ಗೆ ವಿವರಿಸಿದರು.

ದುಡಿಯೋಣ ಬಾ ಅಭಿಯಾನದಡಿ ಹೊಸ ಉದ್ಯೋಗ ಚೀಟಿ, ಉದ್ಯೋಗ ಚೀಟಿ ನವೀಕರಣ. ವ್ಯಕ್ತಿಗತ ಕಾಮಗಾರಿ ಕೃಷಿ ಹೊಂಡ ಕ್ಷೇತ್ರದ ಧನದ ದೊಡ್ಡಿ ಕುರಿದೊಡ್ಡಿ ಇತ್ಯಾದಿ ಕಾಮಗಾರಿ. ಸಮುದಾಯ ಆಧಾರಿತ ಕಾಮಗಾರಿ ನಮ್ಮ ಹೊಲ ನಮ್ಮ ದಾರಿ ಆಟದ ಮೈದಾನ ಶಾಲೆಯ ಕಂಪೌಂಡ್ ವಾಲ್ ಇತ್ಯಾದಿ ಕಾಮಗಾರಿಗಳ ಅರ್ಜಿಯನ್ನು ತೆಗೆದುಕೊಳ್ಳಲಾಯಿತು.

---

## ಮಕ್ಕಳು ದೇಶದ ಆಶಾಕಿರಣವಾಗಲಿ : ಮಾಜಿ ಸೈನಿಕ ಬಕ್ಕಪ್ಪ

• ಉದಯವಾಹಿನಿ, ಬೀದರ

ಮಕ್ಕಳು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕಗಳಿಸಿದ್ದಾರೆ. ಮುಂದೆ ಉನ್ನತ ಶಿಕ್ಷಣ ಪಡೆದು ದೇಶದ ಆಶಾಕಿರಣವಾಗಲಿ ಎಂದು ಮಾಜಿ ಸೈನಿಕರಾದ ಬಕ್ಕಪ್ಪ ತಿಳಿಸಿದರು. ಬೀದರ ತಾಲ್ಲೂಕಿನ ತಡಪಳ್ಳಿ ಗ್ರಾಮದಲ್ಲಿ ತಥಾಗತ್ ಗೌತಮ್ ಬುದ್ಧ ಪೂರ್ಣಿಮೆಯ ಶುಭದಿನದಂದು ಗ್ರಾಮಸ್ಥರ ಸಮ್ಮುಖದಲ್ಲಿ ಬುದ್ಧ ಪೂಜೆಯನ್ನು ಅಚ್ಚುಕಟ್ಟಾಗಿ ನೆರವೇರಿಸುವ ಮೂಲಕ ತಡಪಳ್ಳಿ ಗ್ರಾಮದಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿ ತಾಲೂಕ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ನಮ್ಮೂರಿಗೆ ಹೆಮ್ಮೆ ತಂದುಕೊಟ್ಟ ವಿದ್ಯಾರ್ಥಿನಿಗೆ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಮಾಜಿ ಸೈನಿಕರಾದ ಬಕ್ಕಪ್ಪ ಅವರ ವತಿಯಿಂದ ಗ್ರಾಮ ಪಂಚಾಯತ್ ಸದಸ್ಯರ ಮತ್ತು ಗ್ರಾಮದ ಮುಖಂಡರ ನೇತೃತ್ವದಲ್ಲಿ ಸನ್ಮಾನಿಸಿದ್ದರು. ಎಲ್ಲಾ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ಕೋರುತ್ತ ಇವರ ಮುಂದಿನ ಕನಸುಗಳು ನನಸಾಗಲಿ ಮತ್ತು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಸೇರಿ ದೇಶಸೇವೆಯಲ್ಲಿ ತೊಡಗಿಸಿಕೊಳ್ಳಲಿ ಎಂದು ಶುಭ ಕೋರಿದರು. ಇದೇ ವೇಳೆ ಗ್ರಾಮ ಪಂಚಾಯತ್ ಸದಸ್ಯರು ಮಾತನಾಡಿದರು. ಗ್ರಾಮದಲ್ಲಿ ಬುದ್ಧ ಪೂರ್ಣಿಮೆಯನ್ನು ವಿಜೃಂಭಣೆಯಿಂದ ಅನ್ನದಾಸೋಹದೊಂದಿಗೆ ಆಚರಣೆ ಮಾಡಲಾಯಿತು. ಈ ಸಮಾರಂಭದಲ್ಲಿ ಮಾಜಿ ಸೈನಿಕರಾದ ಬಕ್ಕಪ್ಪ ಮತ್ತು ಸಿಂಧೋಲ ಗ್ರಾಮ ಪಂಚಾಯತನ ಅಧ್ಯಕ್ಷರಾದ ಸುಭದ್ರಾ ಬಾಯಿ ರಾಮು ರಾಥೋಡ್, ಗ್ರಾಮ ಪಂಚಾಯತ್ ಸದಸ್ಯರಾದ ಶಂಕರ್‌ಪಂಡಿತ್ ಭಂಗೂರೆ ಹಾಗೂ ಗ್ರಾಮದ ಹಿರಿಯ ಮುಖಂಡರು ಉಪಸ್ಥಿತರಿದ್ದರು.



☛ ಉದಯವಾಹಿನಿ ಚಿತ್ರ

---

## ಶಂಕರ ಜಯಂತಿ ಸಂಭ್ರಮ

• ಉದಯವಾಹಿನಿ ಸತ್ತೂರು

ಶಂಕರ ಭಗವತ್ಪಾದಾಚಾರ್ಯರ ಉಪದೇಶಗಳು ಮನುಷ್ಯ ಕುಲಕ್ಕೆ ವಿಶಿಷ್ಟವಾದ ವರಗಳಾಗಿವೆ. ನಾವೆಲ್ಲರೂ ಆ ಉಪದೇಶಗಳನ್ನು ಶ್ರವಣ ಮನನಾದಿಗಳನ್ನು ಮಾಡಿಕೊಂಡು, ನಮ್ಮಲ್ಲಿ ಅಳವಡಿಸಿಕೊಂಡು, ಜೀವನವನ್ನು ಸಾರ್ಥಕಗೊಳಿಸಬೇಕೆಂದು ನ್ಯಾಯರತ್ನ , ವಿದ್ವಾನ್ ಡಾ. ವಾಚಸ್ಪತಿಶಾಸ್ತ್ರಿಗಳು ಕರೆ ನೀಡಿದರು.

ಸುತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ನಡೆದ ಶಂಕರಾಚಾರ್ಯರ ಉಪದೇಶಗಳು ಕುರಿತು ಮಾತನಾಡುತ್ತಾ ಸಂನ್ಯಾಶ್ರಮ ಪ್ರಧಾನವಾಗಿದ್ದು, ವಿವೇಕ, ವೈರಾಗ್ಯಗಳಂತಹ ಸಾಧನೆಗಳಿಂದ ಯುಕ್ತನಾಗಿ, ಅಖಂಡವಾದ ಆನಂದ ಸ್ವರೂಪನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಲು ಸಾಧ್ಯ ಎಂದು ತೋರಿಸಿದ ,ಆಚಾರತ್ರಯಗಳಲ್ಲಿ ಮೊದಲಿಗರಾದ, ಎಂಟನೇ ಶತಮಾನದಲ್ಲಿ ಅವತರಿಸಿದ ಶಂಕರ ಭಗವತಪಾದಾಚಾರ್ಯರ ಮಹಿಮೆಗಳನ್ನು ಉಪದೇಶಗಳನ್ನು ಕೊಂಡಾಡಿದರು. ನಾರಾಯಣ ಪಾರಾಯಣ ಬಳಗದಿಂದ ನಡೆಯುತ್ತಿರುವ ಜ್ಞಾನಸತ್ರ ಕಾರ್ಯಕ್ರಮಗಳು ಅನೇಕರಿಗೆ ಆದರ್ಶವಾಗಿದ್ದು ಇನ್ನೂ ನಿರಂತರವಾಗಿ ನಿರ್ವಿಘ್ನವಾಗಿ ಮುಂದುವರೆಯಲಿ ಎಂದು ಶುಭ ಕೋರಿದರು. ಕಾರ್ಯಕ್ರಮ ಪೂರ್ವದಲ್ಲಿ ನಾರಾಯಣಿ ಭಜನಾ ಮಂಡಳಿ ಯವರಿಂದ ಭಜನೆ ಹಾಗೂ ಬಳಗದ ಸದಸ್ಯರಿಂದ ಶ್ರೀ ಹರಿವಾಯು ಗುರುಗಳ ಪಾರಾಯಣದಿಗಳು ಜರುಗಿದವು.

---

ಕಾರಟಗಿ ಪೊಲೀಸ್ ಇಲಾಖೆ ಮತ್ತು ಪುರಸಭೆ ಇಲಾಖೆ ನಿರ್ಲಕ್ಷ್ಯ ಮತ್ತು ಸಾರ್ವಜನಿಕರ ಹಿತಾಸಕ್ತಿಯನ್ನು ಗಾಳಿಗೆ ತೂರಿವೆ

# ಸುಗಮ ಸಂಚಾರ ವ್ಯವಸ್ಥೆಗೆ ಆಗ್ರಹಿಸಿ ಪೋಲಿಸ್ ಇಲಾಖೆ ಹಾಗೂ ಪುರಸಭೆಗೆ ಮನವಿ






☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾರಟಗಿ

ಪಟ್ಟಣದಲ್ಲಿ ವಾಹನದಟ್ಟ ಸಂಚಾರದಿಂದಾಗಿ ಪಾದಾಚಾರಿಗಳು ವಾಹನ ಸವಾರರು ನಿತ್ಯವು ಕಿರುಕುಳ ಅನುಭವಿಸುತ್ತಿದ್ದಾರೆ ಸಂಚಾರಿ ನಿಯಮಗಳನ್ನು ಸರಿಯಾಗಿ ಪಾಲಿಸಿದೆ ಇರುವುದರಿಂದ ಒಂದಲ್ಲ ಒಂದು ಅವಘಡಗಳು ಸಂಭವಿಸುತ್ತಿವೆ, ಸಂಚಾರ ವ್ಯವಸ್ಥೆಯನ್ನು ಸುಗಮ ಮತ್ತು ಸವಾರರ ಸುರಕ್ಷಿತ ಹಿತದೃಷ್ಟಿಗಾಗಿ ಕಾರಟಗಿ ಪೊಲೀಸ್ ಇಲಾಖೆ ಮತ್ತು ಪುರಸಭೆ ಇಲಾಖೆ ನಿರ್ಲಕ್ಷ ವಹಿಸುತ್ತಿದೆ ಮತ್ತು ಸಾರ್ವಜನಿಕರ ಹಿತಾಸಕ್ತಿಯನ್ನು ಗಾಳಿಗೆ ತೂರಿವೆ

ಪೋಲಿಸ್ ಇಲಾಖೆ ಮತ್ತು ಪುರಸಭೆ ಇಲಾಖೆಗಳು ಜಂಟಿಯಾಗಿ ಪಟ್ಟಣದ ಸಾರ್ವಜನಿಕರ ಹಿತರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜಾಗೃತಿ ಯುವಕ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ

ಇತ್ತೀಚಿಗಷ್ಟೇ ಪಟ್ಟಣದ ಗಂಗಾವತಿ ಸಿಂಧನೂರು ಮುಖ್ಯ ರಸ್ತೆಯ ಸಾಲೋನಿಯ ಕ್ರಾಸ್ ಹತ್ತಿರ ಸೈಕಲ್ ಸವಾರಿ ಮಾಡುತ್ತಿದ್ದ ಬಾಲಕ ಮೌನೇಶ್ ಲಾರಿ ಅಪಘಾತದಿಂದ ಮೃತ ಪಟ್ಟಿದ್ದು, ತಂದೆ ತಾಯಿಯ ಆಕ್ರಂದನ ಮುಗಿಲು ಮುಟ್ಟಿತ್ತು. ರಸ್ತೆ ಸುರಕ್ಷಾ ನಿಯಮಗಳು ಪಾಲಿಸದೆ ಚಾಲಕನ ನಿರ್ಲಕ್ಷದಿಂದಾಗಿ ಸಂಭವಿಸಿದೆ ಈ ಘಟನೆಯಿಂದ ಎಚ್ಚೆತ್ತುಕೊಂಡ ಕಾರಟಗಿ ಜಾಗೃತಿ ಯುವಕ ಸಂಘ ಈ ರೀತಿಯ ಘಟನೆಗಳು ನಗರದಲ್ಲಿ ಪಟ್ಟಣದಲ್ಲಿ ಮರು ಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳನ್ನು ಒತ್ತಾಯಿಸಿದೆ. ಇಲ್ಲವಾದಲ್ಲಿ ಕಾರಟಗಿ ವಿವಿಧ ಸಂಘಟನೆಗಳೊಂದಿಗೆ ಮುಂದಿನ ದಿನಗಳಲ್ಲಿ ತೀವ್ರ ಹೊರಾಟ ರೂಪಿಸಬೇಕಾಗುತ್ತದೆ ಎಂದು ಇಲಾಖೆಗಳಿಗೆ ಒತ್ತಾಯಿಸಿದ್ದಾರೆ. ಪುರಸಭೆ ಅಧ್ಯಕ್ಷೆ ರೇಖಾ ರಾಜಶೇಖರ, ಮುಖ್ಯಾಧಿಕಾರಿ ಸುರೇಶ್ ಹಾಗೂ ಪಿಎಸ್‌ಐ ಕಾಮಣ್ಣ ನಾಯ್ಕ ಸೇರಿದಂತೆ ಪುರಸಭೆ ಉಪಾಧ್ಯಕ್ಷೆ ದೇವಮ್ಮ ಗಂಗಪ್ಪ, ಸೇರಿದಂತೆ ಜಾಗೃತಿ ಯುವಕ ಸಂಘದ ಗೌರವಾಧ್ಯಕ್ಷ ಶರಣಪ್ಪ ಕೋಟ್ಯಾಳ, ಮಾಜಿ ಅಧ್ಯಕ್ಷರಾದ ತಾಯಪ್ಪ ಕೋಟ್ಯಾಳ, ಪ್ರಹ್ಲಾದ್ ಜೋಷಿ, ಉಪಾಧ್ಯಕ್ಷ ಅಯ್ಯಪ್ಪ ಉಪ್ಪಾರ, ಸದಸ್ಯ ಶರಣಪ್ಪ ಕುಂಬಾರ, ದಲಾಲಿ ವರ್ತಕರ ಸಂಘದ ಅಧ್ಯಕ್ಷ ಬಸವರಾಜ ಪಗಡದಿನ್ನಿ, ರೈತ ಮುಖಂಡ ನಾರಾಯಣ ಈಡಿಗೇರ್, ಯುವ ಮುಖಂಡ ಪ್ರಭುರಾಜ ಬೂದಿ, ಪ್ರಧಾನ ಕಾರ್ಯದರ್ಶಿ ಶರಣಪ್ಪ ಕಾಯಿಗಡ್ಡಿ ಇದ್ದರು.

### ಹಕ್ಕೊತ್ತಾಯಗಳು

- ಪಟ್ಟಣದಲ್ಲಿ ಅಪ್ರಾಪ್ತ ಮಕ್ಕಳು ವಾಹನ ಚಾಲನೆ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ನಗರದ ಹಳೆಬಸ್‌ನಿಲ್ದಾಣದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಂದೆ ದ್ವಿಚಕ್ರವಾಹನಗಳನ್ನು ಪಾರ್ಕಿಂಗ್ ಮಾಡಲು ಕ್ರಮಕ್ಕೈಗೊಳ್ಳಬೇಕು.
- ನವಲಿ ವೃತ್ತದಲ್ಲಿ ಹಾಗೂ ಆರ್.ಜಿ. ರಸ್ತೆಯಲ್ಲಿ ನಿಲ್ಲಿಸುತ್ತಿರುವ ದ್ವಿಚಕ್ರ ಹಾಗೂ ನಾಲ್ಕುಚಕ್ರ ವಾಹನಗಳನ್ನು ಹಳೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ನಿಲುಗಡೆ ಕಲ್ಪಿಸಬೇಕು.
- ರಸ್ತೆ ಮೇಲೆ ನಿಲ್ಲಿಸಲಾಗುವ ವಾಹನಗಳಿಗೆ ಹೆಚ್ಚಿನ ಪ್ರಮಾಣದ ದಂಡ ಸ್ಥಳದಲ್ಲಿಯೇ ವಿಧಿಸಬೇಕು.
- ದ್ವಿಚಕ್ರ ವಾಹನದಲ್ಲಿ 3–4 ಜನ ಪ್ರಮಾಣಿಸುವದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕು.
- ಎಪಿಎಂಸಿಯಿಂದ ಪೋಲಿಸ್ ಸ್ಟೇಷನ್ ವರೆಗೆ ಕೆರೆಬಸವೇಶ್ವರ ದೇವಸ್ಥಾನದಿಂದ ಚಿನಿವಾಲ ಕಾಂಪ್ಲೆಕ್ಸ್ ಬೂದುಗುಂಪಾ ರಸ್ತೆವರೆಗೆ ವಾಹನಗಳ ವೇಗದ ಮಿತಿಯನ್ನು ಕೇವಲ 20–30 ಕಿಲೊ.ಮಿಗೆ ನಿರ್ಬಂಧಿಸಬೇಕು.
- ಆರ್.ಜಿ. ರಸ್ತೆ, ನವಲಿ ರಸ್ತೆ, ಎಪಿಎಂಸಿ ಹತ್ತಿರ ಪುರಸಭೆ ಹತ್ತಿರ ಹೊಸಬಸ್ ನಿಲ್ದಾಣ, ಮುಂತಾದ ಕಡೆ ಸಿಸಿ ಕ್ಯಾಮರಾ ಅಳವಡಿಸಬೇಕು.
- ದ್ವಿಚಕ್ರವಾಹನಗಳು ಕರ್ಕಶ ಶಬ್ದ ಮಾಡುವ ವಾಹನಗಳನ್ನು ಸೀಜ್ ಮಾಡಬೇಕು.ಕಾರಟಗಿಯ ಪ್ರವೇಶದಿಂದ ಸಿದ್ದಲಿಂಗ ನಗರದವರೆಗೆ ರಸ್ತೆ ಅಗಲೀಕರಣಕ್ಕೆ ಕ್ರಮ ಕೈಗೊಳ್ಳಬೇಕು.

